ಶಿವಮೊಗ್ಗ ಜಿಲ್ಲೆಯಲ್ಲಿ ಸಮಾಜವಾದಿ ಚಳುವಳಿಗಳು

(೧೯೪೦ - ೧೯೭೮)

ಮಾಸ್ಟರ್ ಆಫ್ ಫಿಲಾಸಫಿ (ಎಂ.ಫಿಲ್.) ಪದವಿಯ ಆಂಶಿಕ ಅವಶ್ಯಕತೆಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪ್ರೌಢ ಪ್ರಬಂಧ

ಸಂಶೋಧಕರು

ಜಿ. ಎನ್. ಕೀರ್ತಿನಾಥ

ಮಾರ್ಗದರ್ಶಕರು

ಪ್ರೊ|| ಲಕ್ಷ್ಮಣ್ ತೆಲಗಾವಿ

ಚರಿತ್ರೆ ವಿಭಾಗ
ಸಮಾಜವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ, ೫೮೩ ೨೨೧

೧೯೯೫

80

ಶಿವಮೊಗ್ಗ ಜಿಲ್ಲೆಯಲ್ಲಿ ಸಮಾಜವಾದಿ ಚಳುವಳಿಗಳು

(೧೯೪೦ - ೧೯೭೮)

ಮಾಸ್ಟರ್ ಆಫ್ ಫಿಲಾಸಫಿ (ಎಂ.ಫಿಲ್.) ಪದವಿಯ ಆಂಶಿಕ ಅವಶ್ಯಕತೆಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪ್ರೌಢ ಪ್ರಬಂಧ

ಸಂಶೋಧಕರು

ಜಿ. ಎನ್. ಕೀರ್ತಿನಾಥ

ಮಾರ್ಗದರ್ಶಕರು

ಪ್ರೊ|| ಲಕ್ಷ್ಮಣ್ ತೆಲಗಾವಿ

ಚರಿತ್ರೆ ವಿಭಾಗ
ಸಮಾಜವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ, ೫೮೩ ೨೨೧

೧೯೯೫

ಪ್ರಮಾಣ ಪತ್ರ

ಈ ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ 1994–95ರ ಶೈಕಣಿಕ ವರ್ಷದ ಎಂ.ಫಿಲ್.ಪದವಿಗಾಗಿ ಪ್ರೊ: ಲಕ್ಷ್ಮಣ್ ತೆಲಗಾವಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ಅಧ್ಯಯನದ ವಿಷಯವನ್ನು ಇದುವರೆಗೆ ಯಾವ ಪದವಿಗೂ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸಂಶೋಧಕ

(ಜಿ.ಎನ್. ಕೀರ್ತಿ ಸಾಗರ್)
ಚರಿತ್ರೆ ವಿಭಾಗ

ವಿದ್ಯಾರಣ್ಯ
31.10.1995

ಪ್ರಮಾಣ ಪತ್ರ

ಈ ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ 1994–95ರ ಶೈಕ್ಷಣಿಕ ವರ್ಷದ ಎಂ.ಫಿಲ್.ಪದವಿಗಾಗಿ ಜಿ.ಎನ್.ಕೀರ್ತಿನಾಥ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಈ ಅಧ್ಯಯನದ ವಿಷಯವನ್ನು ಇದುವರೆಗೆ ಯಾವ ಪದವಿಗೂ ಅವರು ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಮಾರ್ಗದರ್ಶಕರು,

(ಪ್ರೊ. ಲಕ್ಷ್ಮಣ್ ತೆಲಗಾವಿ)
ಮುಖ್ಯಸ್ಥರು
ಚರಿತ್ರೆ ವಿಭಾಗ

ವಿದ್ಯಾರಣ್ಯ
31.10.1995

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್.ಅಧ್ಯಯನಕ್ಕೆ ಅವಕಾಶ ಕಲ್ಪಿಸಿ ಕೊಟ್ಟ ಮಾನ್ಯ ಕುಲಪತಿಗಳಾದ ಡಾ: ಚಂದ್ರಶೇಖರ ಕಂಬಾರ ಮತ್ತು ಮಾನ್ಯ ಕುಲಸಚಿವರಾದ ಡಾ:ಕೆ.ವಿ.ನಾರಾಯಣರವರುಗಳಿಗೆ,

ಅಧ್ಯಯನದ ಕ್ರಮವನ್ನು ಬೋಧಿಸಿ ಪ್ರೀತಿಯಿಂದ ಮಾರ್ಗದರ್ಶನ ನೀಡಿದ ಪ್ರೊ: ಲಕ್ಷ್ಮಣ್ ತೆಲಗಾವಿ ಅವರಿಗೆ,

ಅಧ್ಯಯನದ ಅವಧಿಯಲ್ಲಿ ವಿವಿಧ ರೀತಿಯಲ್ಲಿ ಸಹಕರಿಸಿದ ಪ್ರೊ: ಪುರುಷೋತ್ತಮ ಬಿಳಿಮಲೆ, ಡಾ: ರಹಮತ್ ತರೀಕೆರೆ, ಮಲ್ಲೇಪುರಂ ಜಿ.ವೆಂಕಟೇಶ್, ಡಾ: ಸುರೇಶ್, ಪ್ರೊ: ಓ.ಎಲ್.ನಾಗಭೂಷಣಸ್ವಾಮಿ, ಡಾ: ಹೆಚ್.ಎಸ್.ರಾಘವೇಂದ್ರ ರಾವ್, ಪ್ರೊ: ಟಿ.ಎಸ್. ಸತ್ಯನಾಥ್ ಮೊದಲಾದವರಿಗೆ,

ಕ್ಷೇತ್ರಕಾರ್ಯದ ಅವಧಿಯಲ್ಲಿ ಅಮೂಲ್ಯ ಮಾಹಿತಿ ನೀಡಿ ಸಹಕರಿಸಿದ ಶಿವಮೊಗ್ಗ ಜಿಲ್ಲೆಯ ಹಿರಿಯ ಸಮಾಜವಾದಿಗಳಾದ ಶ್ರೀಮತಿ ಜಿ.ಎಸ್. ಪೊನ್ನಮ್ಮಾಳ್, ಶ್ರೀಯುತರಾದ ಪಿ.ಪುಟ್ಟಯ್ಯ, ಕೆ.ಶಂಕರನಾರಾಯಣ ಭಟ್, ಎ.ವಿ. ಶ್ರೀನಿವಾಸ್ ಅವರುಗಳಿಗೆ ಹಾಗೂ ಪತ್ರಕರ್ತ ಶೃಂಗೇಶರವರಿಗೆ,

ಅಧ್ಯಯನ ಅವಧಿಯಲ್ಲಿ ನನ್ನೊಡನಿದ್ದು ಸಹಕರಿಸಿದ ಮಿತ್ರರಾದ ಗುರು, ಶಿವು, ಜಗದೀಶ, ಮಂಜುಳ, ಸವಿತಾ, ವೀಣಾ, ವಿರೂಪಾಕ್ಷಿ, ಸತೀಶ್, ಸೋಮು ಅವರುಗಳಿಗೆ,

ಸದಾ ನನ್ನ ಶ್ರೇಯಸ್ಸನ್ನೇ ಬಯಸುವ ತಂದೆ, ತಾಯಿ, ಸಹೋದರ, ಸಹೋದರಿಯರಿಗೆ ಹಾಗೂ ನನ್ನೂರ ಮಿತ್ರರಿಗೆ,

ಅಂದವಾಗಿ ಬೆರಳಚ್ಚು ಮಾಡಿಕೊಟ್ಟ ವೀರೇಶ್ವರ ಟೈಪಿಂಗ್ ಸೆಂಟರ್‌ನ ನಾಗರಾಜು ಮತ್ತು ಎ.ಎಂ.ಕೃಪಾಶಂಕರ್ ಅವರುಗಳಿಗೆ,


ಕೃತಜ್ಞತೆಗಳು

ಜಿ.ಎಸ್.ಕೀರ್ತಿನಾಥ
ಸಂಶೋಧಕ
ಚರಿತ್ರೆ ವಿಭಾಗ.

ಪರಿವಿಡಿ

* * * *

ಶಿವಮೊಗ್ಗ ಜಿಲ್ಲೆಯ ಭೌಗೋಳಿಕ ಪರಿಸರ



ಅಧ್ಯಾಯ : 1

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

1. ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ನಿಸರ್ಗದ ರಮಣೀಯ ತಾಣಗಳಿಂದ ಕೂಡಿರುವ ಶಿವಮೊಗ್ಗ ಜಿಲ್ಲೆ ಆರ್ಥಿಕ, ಶೈಕ್ಷಣಿಕ, ಸಾಹಿತ್ಯಿಕ, ಸಾಂಸ್ಕೃತಿಕ, ಕ್ಷೇತ್ರಗಳಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನ ಪಡೆದಿದೆ; ರಾಜಕೀಯವಾಗಿಯೂ ಜಾಗೃತಿಯನ್ನು ಹೊಂದಿದ ಜಿಲ್ಲೆಯೆಂದು ಹೆಸರಾಗಿಸಿದೆ. ರಾಜಕೀಯ ಜಾಗೃತಿಯ ಹಿಂದೆ ಒಂದು ಪರಂಪರೆಯೇ ಇದೆಯೆಂಬುದು ಗಮನಾರ್ಹ. ಇಲ್ಲಿ ನಡೆದ ಸಮಾಜವಾದಿ ಚಳುವಳಿಗಳು ಇಂತಹ ರಾಜಕೀಯ ಧೋರಣೆ — ಸಿದ್ಧಾಂತಗಳಿಗೆ ಹಿಡಿದ ಕನ್ನಡಿಯಂತಿರುವವೆಂದು ಹೇಳಬಹುದು. ಪ್ರಸ್ತುತ ಅಧ್ಯಯನದಲ್ಲಿ ಈ ವಸ್ತುವನ್ನು ವಿವರವಾಗಿ ಹಾಗೂ ನಿಖರವಾಗಿ ವಿಶ್ಲೇಷಿಸಲು ಪ್ರಯತ್ನಿಸಿದೆ.

ಸಮಾಜವಾದಿ ಚಳುವಳಿಗಳನ್ನು ಕುರಿತ ಅಧ್ಯಯನವನ್ನು ಪ್ರಾರಂಭಿಸುವ ಮುನ್ನ ಶಿವಮೊಗ್ಗ ಜಿಲ್ಲೆಯ ಭೌಗೋಳಿಕ ಪರಿಸರವನ್ನು, ಚಾರಿತ್ರಿಕ ಹಿನ್ನಲೆಯನ್ನು ಗಮನಿಸುವುದು ಅಗತ್ಯ.

ಭೌಗೋಳಿಕ ಪರಿಸರ :

ಶಿವಮೊಗ್ಗ ಜಿಲ್ಲೆ ಕರ್ನಾಟಕ ರಾಜ್ಯದ ಮಧ್ಯಭಾಗದಲ್ಲಿ ಪಶ್ಚಿಮಕ್ಕೆ ಸಹ್ಯಾದ್ರಿ ಪರ್ವತ ಶ್ರೇಣಿಯ ತಪ್ಪಲಿನಲ್ಲಿದೆ. ಜಿಲ್ಲೆಯ ಹೆಚ್ಚಿನ ಭಾಗ ಅರಣ್ಯ ಪ್ರದೇಶದಿಂದ ಕೂಡಿರುವುದರಿಂದ ಜಿಲ್ಲೆಯನ್ನು ಮಲೆನಾಡು ಜಿಲ್ಲೆಗಳ ಸಾಲಿನಲ್ಲಿ ಸೇರಿಸಲಾಗಿದೆ. ಆದರೂ ಜಿಲ್ಲೆಯನ್ನು ಭೌಗೋಳಿಕವಾಗಿ ಮೂರು ಭಾಗಗಳಾಗಿ ವಿಂಗಡಿಸಬಹುದು.

1. ಮಲೆನಾಡು ಪ್ರದೇಶ
2. ಅರೆಮಲೆನಾಡು
3. ಬಯಲು ಪ್ರದೇಶ

ದಟ್ಟ ಅರಣ್ಯದಿಂದ ಕೂಡಿರುವ ತೀರ್ಥಹಳ್ಳಿ, ಹೊಸನಗರ, ಸಾಗರ, ಸೊರಬ, ತಾಲ್ಲೂಕುಗಳನ್ನು ಮಲೆನಾಡು ಪ್ರದೇಶಗಳೆಂದು ಕರೆಯಲಾಗುತ್ತದೆ. ಈ ತಾಲ್ಲೂಕುಗಳು ಶಿವಮೊಗ್ಗ ನಗರದ ಪಶ್ಚಿಮ ದಿಕ್ಕಿನಲ್ಲಿ ಬರುತ್ತವೆ.

ಭದ್ರಾವತಿ, ಶಿವಮೊಗ್ಗ, ಶಿಕಾರಿಪುರ — ಈ ತಾಲ್ಲೂಕುಗಳನ್ನು ಅರೆಮಲೆನಾಡು ಪ್ರದೇಶಗಳೆಂದು ಗುರುತಿಸಲಾಗಿದೆ. ಈ ತಾಲ್ಲೂಕುಗಳು ಸಾಧಾರಣ ಅರಣ್ಯದ ಜೊತೆಗೆ ಬೆಟ್ಟಗುಡ್ಡ ಹಾಗೂ ಬಯಲು ಪ್ರದೇಶವನ್ನೊಳಗೊಂಡಿರುವುದರಿಂದ ಹೀಗೆ ಕರೆಯಲಾಗಿದೆ.

ಈ ತಾಲ್ಲೂಕುಗಳು ಹೆಚ್ಚುಕಡಿಮೆ ಜಿಲ್ಲೆಯ ಮಧ್ಯಭಾಗದಲ್ಲಿ ದಕ್ಷಿಣದಿಂದ ಉತ್ತರಕ್ಕೆ ಇವೆ.

ಅತ್ಯಲ್ಪ ಅರಣ್ಯದೊಂದಿಗೆ ಹೆಚ್ಚಿನ ಬಯಲು ಪ್ರದೇಶವನ್ನು ಹೊಂದಿರುವ ಚನ್ನಗಿರಿ, ಹೊನ್ನಾಳಿ ತಾಲ್ಲೂಕುಗಳನ್ನು ಬಯಲು ಪ್ರದೇಶವೆಂದು ಕರೆಯಬಹುದು. ಈ ತಾಲ್ಲೂಕುಗಳು ಜಿಲ್ಲೆಯ ಪೂರ್ವಭಾಗಕ್ಕೆ ಬರುತ್ತವೆ.

ಜಿಲ್ಲೆಯ ಈ ಭೌಗೋಳಿಕ ಪರಿಸರಕ್ಕೂ ಮತ್ತು ಅಲ್ಲಿ ನಡೆದ ಚಳುವಳಿಗಳಿಗೂ ಸಂಬಂಧವಿದೆ. ಸಮಾಜವಾದಿ ಚಳುವಳಿ ತನ್ನ ಮುಖ್ಯ ನೆಲೆಯನ್ನು ಕಂಡುಕೊಂಡಿದ್ದು ಜಿಲ್ಲೆಯ ಮಲೆನಾಡು ಭಾಗದಲ್ಲಿ ಈ ಭಾಗದ ಜನರ ಜೀವನ ರೀತಿ ಉಳಿದೆರಡು ಭಾಗಗಳಿಗಿಂತ ಭಿನ್ನ. ಈ ಭಾಗದ ಶೇ.75 ಕ್ಕೂ ಹೆಚ್ಚು ಪ್ರದೇಶ ಅರಣ್ಯದಿಂದ ಕೂಡಿದ್ದು ಉಳಿದ ಶೇ.25 ರಷ್ಟು ಪ್ರದೇಶ ವ್ಯವಸಾಯಕ್ಕೆ ಒಳಪಟ್ಟಿದೆ. ಈ ವ್ಯವಸಾಯದ ಭೂಮಿ ಅರಣ್ಯಗಳ ಮಧ್ಯೆ ಅಲ್ಲಲ್ಲಿ ಹಂಚಿಹೋಗಿದೆ. ಹೀಗಾಗಿ ಬಯಲು ಸೀಮೆಗಿಂತ ಈ ಭಾಗದಲ್ಲಿ ಊರಿನ(ಗ್ರಾಮ) ಪರಿಕಲ್ಪನೆ ಬೇರೆಯದು. ಜನಸಮುದಾಯ ಒಂದು ನಿರ್ದಿಷ್ಟ ಜಾಗದಲ್ಲಿ ಒಟ್ಟಾಗಿ ವಾಸಿಸದೆ ತಾವು ಅವಲಂಬಿಸಿಕೊಂಡಿರುವ ವ್ಯವಸಾಯದ ಭೂಮಿಯ ಹತ್ತಿರವೆ ಮನೆಯನ್ನು ಕಟ್ಟಿಕೊಂಡಿರುತ್ತಾರೆ. ಇಂತಹ ಕೆಲವೇ ಮನೆಗಳನ್ನು ಊರು ಎಂದು ಕರೆಯಲಾಗುತ್ತದೆ.

ಈ ಭಾಗದಲ್ಲಿ 1950 ಕ್ಕಿಂತ ಹಿಂದೆ ವಾಸಿಸುತ್ತಿದ್ದ ಜನರನ್ನು ಮುಖ್ಯವಾಗಿ ಮೂರುಭಾಗಗಳಾಗಿ ವಿಂಗಡಿಸಬಹುದು. ಒಂದು ಜಮೀನ್ದಾರ ವರ್ಗ ಈ ವರ್ಗದಲ್ಲಿ ಹವ್ಯಕ ಬ್ರಾಹ್ಮಣರು, ಲಿಂಗಾಯಿತರು ಮತ್ತು ಒಕ್ಕಲಿಗ ಜಾತಿಯವರು ಕಂಡು ಬರುತ್ತಿದ್ದರು. ಎರಡನೆಯ ವರ್ಗವಾದ ಗೇಣಿ ರೈತರಲ್ಲಿ ದೀವರ ಜಾತಿಯವರು ಕಂಡುಬರುತ್ತಿದ್ದರು.(ಹಿಂದೆ ಮತ್ತು ಈಗಲೂ ಆ ಭಾಗದ ಬಹುದೊಡ್ಡ ಜಾತಿಗೆ ಸೇರಿದವರು). ಈ ವರ್ಗದಲ್ಲಿ ಮೇಲ್ಜಾತಿಗೆ ಸೇರಿದ ಕೆಲವರನ್ನು ಸೇರಿಸಬಹುದಾದರೂ ಅವರ ಸಂಖ್ಯೆ

ವಿರಳ. ಮೂರನೆಯ ವರ್ಗ ಜೀತದಾಳುಗಳದು. ಈ ವರ್ಗದಲ್ಲಿ ಹೊಲೆಯ ಜಾತಿಯವರು ಮುಖ್ಯವಾಗಿ ಕಂಡು ಬರುತ್ತಾರೆ.

ಈಗಲೂ ಮಲೆನಾಡು ಭಾಗದಲ್ಲಿ ಇದೇ ರೀತಿಯ ಜಾತಿಯವ್ಯವಸ್ಥೆ ಮುಂದುವರಿದಿದೆ. ಆದರೆ ಮೇಲಿನ ರೀತಿ ವರ್ಗಗಳಾಗಿ ವಿಂಗಡಿಸಲು ಸಾಧ್ಯವಿಲ್ಲ. ಸಮಾಜವಾದಿ ಚಳುವಳಿ, ಭೂ ಸುಧಾರಣೆಗಳಿಂದಾಗಿ ಜಮೀನ್ದಾರಿ ವ್ಯವಸ್ಥೆ ಸಂಪೂರ್ಣವಾಗಿ ನಾಶವಾಗಿದೆ. ಹಿಂದೆ ಗೇಣಿದಾರರಾಗಿದ್ದವರೆಲ್ಲ ಇಂದು ಸ್ವಂತ ಜಮೀನನ್ನು ಹೊಂದಿದ್ದಾರೆ. ಆದರೆ ಜೀತದಾಳುಗಳ ಬದುಕಿನಲ್ಲಿ ಹೆಚ್ಚಿನ ಬದಲಾವಣೆಯಾಗಿಲ್ಲ.

ಜಿಲ್ಲೆಯ ಉಳಿದೆರಡು ಭಾಗಗಳ ಪರಿಸ್ಥಿತಿ ಇದಕ್ಕಿಂತ ಬೇರೆಯದು. ಈ ಭಾಗದ ಶೇ. 75 ಕ್ಕೂ ಹೆಚ್ಚು ಭೂಮಿ ವ್ಯವಸಾಯಕ್ಕೊಳಪಟ್ಟಿದೆ. ಈ ಭಾಗದ ಊರಿನ ಕಲ್ಪನೆ ಮಲೆನಾಡು ಭಾಗಕ್ಕಿಂತ ಭಿನ್ನ. ಸುತ್ತಮುತ್ತಲಿನ ವ್ಯವಸಾಯ ಭೂಮಿಯನ್ನು ಅವಲಂಬಿಸಿದ ಜನರೆಲ್ಲ ಒಂದು ನಿರ್ದಿಷ್ಟ ಸ್ಥಳದಲ್ಲಿ ಒಟ್ಟಾಗಿ ವಾಸಿಸುತ್ತಾರೆ. ಈ ಊರುಗಳಲ್ಲಿ ವ್ಯವಸಾಯಗಾರರು ಮತ್ತು ಅದಕ್ಕೆ ಪೂರಕವಾದ ಉದ್ಯೋಗವನ್ನವಲಂಬಿಸಿದ ಎಲ್ಲಾ ಜಾತಿಯ ಜನರೂ ಕಂಡುಬರುತ್ತಾರೆ. ಲಿಂಗಾಯತ ಜಾತಿಯವರು ವ್ಯವಸಾಯ ಕ್ಷೇತ್ರದಲ್ಲಿ ಪ್ರಮುಖವಾಗಿ ಕಂಡುಬರುತ್ತಾರಾದರೂ ಉಳಿದ ಜಾತಿಯವರೂ ತಮ್ಮ ಕುಲಕಸುಬಿನ ಜೊತೆಗೆ ವ್ಯವಸಾಯದಲ್ಲೂ ತೊಡಗಿಕೊಂಡಿರುತ್ತಾರೆ. ಭೂ ಹಂಚಿಕೆಯಲ್ಲಿ ತೀರಾ ಅಸಮಾನತೆಯಿಲ್ಲ. ಗೇಣಿ ರೈತರು ಇದ್ದರೂ ಅವರು ಅದನ್ನೇ ಅವಲಂಬಿಸಿ ಬದುಕುವುದಿಲ್ಲ. ಹೀಗಾಗಿ ಸಮಾಜವಾದಿ ಚಳುವಳಿಗೆ ಈ ಜಾಗ ಅಷ್ಟು ಪೂರಕವಾಗಿರಲಿಲ್ಲ. ಈ ಪ್ರದೇಶ ಮುಂದೆ ನೀರಾವರಿ ವ್ಯವಸ್ಥೆಗೆ ಒಳಪಟ್ಟ ನಂತರ ವಿವಿಧ ರೀತಿಯ ಸಮಸ್ಯೆಗಳು ಹುಟ್ಟಿಕೊಂಡವು. ಇದನ್ನು ಮುಂದೆ ಚರ್ಚಿಸಲಾಗುವುದು.

ಜಿಲ್ಲೆಯ ಚಾರಿತ್ರಿಕ ಹಿನ್ನೆಲೆ :

ಶಿವಮೊಗ್ಗ ಜಿಲ್ಲೆಯ ಇತಿಹಾಸವನ್ನು ನಾವು ಮೌರ್ಯರ ಆಳ್ವಿಕೆಯ ಕಾಲದಿಂದ ಗುರುತಿಸಬಹುದು. ಮೌರ್ಯರ ನಂತರ ದಕ್ಷಿಣ ಭಾರತವನ್ನಾಳಿದ ಶಾತವಾಹನರ ಆಳ್ವಿಕೆಗೆ ಒಳಪಟ್ಟಿತ್ತು. ಕ್ರಿ.ಶ. 4ನೇ ಶತಮಾನದಲ್ಲಿ ಪ್ರವರ್ಧಮಾನಕ್ಕೆ ಬಂದ ಬನವಾಸಿಯ

ಕದಂಬರ ಆಳ್ವಿಕೆಯ ಅವಧಿಯಲ್ಲಿ ಶಿವಮೊಗ್ಗ ಪ್ರದೇಶ ಅವರ ಆಳ್ವಿಕೆಯ ಪ್ರಮುಖ ಭಾಗವಾಗಿತ್ತು. ಕ್ರಿ.ಶ. 6ನೇ ಶತಮಾನದ ಬಾದಾಮಿಯ ಚಾಲುಕ್ಯರು ಕದಂಬರನ್ನು ಹತ್ತಿಕ್ಕಿ ತಮ್ಮ ಆಧಿಪತ್ಯವನ್ನು ಈ ಭಾಗದಲ್ಲಿ ಸ್ಥಾಪಿಸಿದರು. ಕ್ರಿ.ಶ. 7ನೇ ಶತಮಾನದಲ್ಲಿ ಜಿಲ್ಲೆಯ ಹುಂಚ ಎಂಬಲ್ಲಿ ಶಾಂತರಸ ಎಂಬ ಚಿಕ್ಕ ಅರಸ ಪ್ರಾದೇಶಿಕವಾಗಿ ಏಳ್ಗೆಗೆ ಬಂದ ಬಗ್ಗೆ ಮಾಹಿತಿ ದೊರೆಯುತ್ತದೆ. ಕ್ರಿ.ಶ. 8ನೇ ಶತಮಾನದಲ್ಲಿ ರಾಷ್ಟ್ರಕೂಟರು ತಮ್ಮ ಪ್ರಭುತ್ವವನ್ನು ಈ ಭಾಗದಲ್ಲಿ ಸ್ಥಾಪಿಸಿದರು. 11ನೇ ಶತಮಾನದ ವೇಳೆಗೆ ಪ್ರಾಬಲ್ಯಕ್ಕೆ ಬಂದ ಹೊಯ್ಸಳರು ಈ ಪ್ರದೇಶವನ್ನಾಳಿದರು. 12ನೇ ಶತಮಾನದಲ್ಲಿ ಕಳಚುರಿಗಳು ಅಲ್ಪಕಾಲ ಆಧಿಪತ್ಯ ಹೊಂದಿದ್ದರು. ಇದೇ ಕಾಲದಲ್ಲಿ ಬೆಳಗುತ್ತಿ ಪ್ರಾದೇಶಿಕ ಸಂಸ್ಥಾನ ಏಳಿಗೆಗೆ ಬಂದಿತ್ತು. ಕ್ರಿ.ಶ.14ನೇ ಶತಮಾನದಲ್ಲಿ ಪ್ರವರ್ಧಮಾನಕ್ಕೆ ಬಂದ ವಿಜಯನಗರ ಸಾಮ್ರಾಜ್ಯ ಈ ಪ್ರದೇಶವನ್ನು ತನ್ನ ಅಧೀನಕ್ಕೊಳಪಡಿಸಿಕೊಂಡಿತು.

ಕೆಳದಿಯ ನಾಯಕರು ಜಿಲ್ಲೆಯಲ್ಲಿ ಪ್ರಾಬಲ್ಯಕ್ಕೆ ಬಂದದ್ದು ಇದೇ ವೇಳೆಯಲ್ಲಿ. ಇವರು ವಿಜಯನಗರ ಸಾಮ್ರಾಜ್ಯದ ಸಾಮಂತರಾಗಿದ್ದರು. ಇದೇ ವೇಳೆಗೆ ಬಸವಾಪಟ್ಟಣ ಸಂಸ್ಥಾನ ಪ್ರಾದೇಶಿಕವಾಗಿ ಏಳ್ಗೆಗೆ ಬಂದಿತ್ತು. ವಿಜಯನಗರ ಸಾಮ್ರಾಜ್ಯದ ಪತನವಾದ ನಂತರ ಕೆಳದಿಯ ಅರಸರು ಸ್ವತಂತ್ರರಾಗಿ ಜಿಲ್ಲೆಯ ಪ್ರಮುಖ ಅರಸು ಮನೆತನವಾಗಿ ಆಳ್ವಿಕೆ ನಡೆಸಿದರು. ಕ್ರಿ.ಶ. 18ನೇ ಶತಮಾನದಲ್ಲಿ ಶ್ರೀರಂಗಪಟ್ಟಣದಲ್ಲಿ ಪ್ರಾಬಲ್ಯಕ್ಕೆ ಬಂದ ಹೈದರಾಲಿ ಕೆಳದಿಯ ಅರಸರನ್ನು ಸೋಲಿಸಿ ತನ್ನ ಆಳ್ವಿಕೆಗೆ ಒಳಪಡಿಸಿಕೊಂಡನು. ಇವನ ನಂತರ ಟಿಪ್ಪು, ಟಿಪ್ಪುವಿನ ಪತನಾ ನಂತರ ಮೈಸೂರು ಒಡೆಯರ ಆಳ್ವಿಕೆಗೆ ಈ ಜಿಲ್ಲೆ ಒಳಪಟ್ಟಿತ್ತು.

ಶಿವಮೊಗ್ಗ ಜಿಲ್ಲೆಯ ಆಧುನಿಕ ಇತಿಹಾಸವನ್ನು 1830ರ ವೇಳೆಯಲ್ಲಿ ನಡೆದ ನಗರದ ಬಂಡಾಯ ದಿಂದ ಗುರುತಿಸಬಹುದು. ಕಂದಾಯ ಹೆಚ್ಚಳದ ವಿರುದ್ಧ ನಡೆದ ಈ ರೈತ ಬಂಡಾಯದ ನಾಯಕತ್ವವನ್ನು ವಹಿಸಿದವನು ಬೂದಿಬಸಪ್ಪನೆಂಬ ವ್ಯಕ್ತಿ. ಈ ಬಂಡಾಯ

ನಡೆದ ವೇಳೆಯಲ್ಲಿ ಮೈಸೂರು ಅರಸರ ಆಳ್ವಿಕೆ ಸರಿಯಾಗಿಲ್ಲವೆಂದು ಬ್ರಿಟಿಷ ಸರ್ಕಾರ ಮೈಸೂರು ರಾಜ್ಯವನ್ನು ತನ್ನ ನೇರ ಆಳ್ವಿಕೆಗೆ 1831ರಲ್ಲಿ ಒಳಪಡಿಸಿಕೊಂಡಿತು. 1831 ರಿಂದ 1881 ರವರೆಗೆ ಮೈಸೂರು ರಾಜ್ಯ ಬ್ರಿಟಿಷರ ಆಳ್ವಿಕೆಗೊಳಗಾದಾಗ ಶಿವಮೊಗ್ಗ ಜಿಲ್ಲೆಕೂಡ ಬ್ರಿಟಿಷರ ಅಧೀನದಲ್ಲಿತ್ತು. 20ನೇ ಶತಮಾನದ ಆರಂಭದಲ್ಲಿ ರಾಷ್ಟ್ರದ್ಯಾಂತ ಚುರುಕಾದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಶಿವಮೊಗ್ಗ ಜಿಲ್ಲೆಕೂಡ ಸಕ್ರಿಯವಾಗಿ ಭಾಗವಹಿಸಿತ್ತು. 1942ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಜಿಲ್ಲೆಯ ಪಾತ್ರ ಗಣನೀಯವಾದುದು. ಸ್ವತಂತ್ರ ಗ್ರಾಮವೆಂದು ಘೋಷಿಸಿಕೊಂಡ ಈಸೂರು ದುರಂತ ರಾಷ್ಟ್ರಮಟ್ಟದಲ್ಲಿ ಹೆಸರಾಗಿತ್ತು.

ಅಧ್ಯಯನದ ಉದ್ದೇಶ :

ಪ್ರಸ್ತುತ ಅಧ್ಯಯನದ ಉದ್ದೇಶ 1942ರ ನಂತರ ಜಿಲ್ಲೆಯ ರಾಜಕೀಯದಲ್ಲಿ ಹೊಸದೊಂದು ಅಲೆಯಾಗಿ ಕಾಣಿಸಿಕೊಂಡ ಸಮಾಜವಾದದ ಕುರಿತದ್ದು. ರಾಷ್ಟ್ರ ಹಾಗೂ ರಾಜ್ಯಮಟ್ಟದಲ್ಲಿ 30ರ ದಶಕದಲ್ಲಿ ಸಮಾಜವಾದ ತನ್ನ ನೆಲೆಯನ್ನು ಕಂಡುಕೊಳ್ಳುತ್ತಿದ್ದಂತೆ 1942ರ ವೇಳೆಗೆ ಜಿಲ್ಲೆಯಲ್ಲಿಯೂ ಕಾಣಿಸಿಕೊಳ್ಳಲಾರಂಭಿಸಿತು. ಈ ಬೆಳವಣಿಗೆ ಮುಂದೆ ಸ್ವಾತಂತ್ರ್ಯ ನಂತರ 1951 ರಲ್ಲಿ ನಡೆದ ಪ್ರಸಿದ್ಧ ಕಾಗೋಡು ಸತ್ಯಾಗ್ರಹದ ನಂತರ ಜಿಲ್ಲೆಯ ಒಟ್ಟಾರೆ ಬೆಳವಣಿಗೆಯ ಮೇಲೆ ತನ್ನದೇ ಆದ ಮುದ್ರೆಯನ್ನು ಒತ್ತಿದೆ. ಶತಶತಮಾನಗಳಿಂದ ಊಳಿಗಮಾನ್ಯ ವ್ಯವಸ್ಥೆಗೆ ಒಳಗಾಗಿದ್ದ ಜನತೆಗೆ ಧ್ವನಿಯಾಗುತ್ತಾ ವೇದಿಕೆಯಾಗಿ ಸಮಾಜವಾದಿ ಪಕ್ಷ ತನ್ನದೇ ಆದ ಮಹತ್ವ ಹೊಂದಿತ್ತು. ಅದರಲ್ಲೂ ಜಿಲ್ಲೆಯ ಮಲೆನಾಡು ಭಾಗದಲ್ಲಿ ಭದ್ರವಾಗಿದ್ದ ಜಮೀನ್ದಾರಿ ವ್ಯವಸ್ಥೆಯನ್ನು ಅಳಿಸಿಹಾಕುವಲ್ಲಿ ಸಮಾಜವಾದಿ ಪಕ್ಷ ಸಕ್ರಿಯ ವಾಗಿ ತೊಡಗಿಕೊಂಡಿತ್ತು. ಪರಿಣಾಮವಾಗಿ ಭೂ ಸುಧಾರಣೆಯ ಮೇಲೂ ತನ್ನದೇ ಆದ ಪ್ರಭಾವ ಬೀರಿತ್ತು. ಜಿಲ್ಲೆಯಲ್ಲಿ ಭೂ ಸುಧಾರಣೆ ಯಶಸ್ವಿಯಾಗಿದ್ದರ ಹಿಂದೆ ಸಮಾಜ ವಾದಿಗಳು ಮೂಡಿಸಿದ ಜಾಗೃತಿಯ ಫಲವಿದೆ. ಜೊತೆಗೆ ಶತಶತಮಾನಗಳಿಂದ ತುಳಿದಿಟ್ಟ ಜನತೆ ತಮ್ಮ ಹಕ್ಕನ್ನು ಕೇಳಪಡೆಯುವಂತಹ ವಾತಾವರಣವನ್ನುಂಟು ಮಾಡುವಲ್ಲಿ ಸಮಾಜವಾದಿ ಆಂದೋಲನ ಯಶಸ್ವಿಯಾಗಿತ್ತು. ಜೀವನದ ಇತರೆ ಕ್ಷೇತ್ರಗಳ ಮೇಲೂ ಸಮಾಜವಾದ ಪ್ರಭಾವ ಬೀರಿದ್ದನ್ನು ನೋಡಬಹುದು. ಅದರಲ್ಲೂ ವಿಶೇಷವಾಗಿ ಸಾಹಿತ್ಯದ ಮೇಲೆ

ಇದರ ಪ್ರಭಾವ ಪರಿಣಾಮಕಾರಿಯಾದುದು. ಜಿಲ್ಲೆಯ ಪ್ರಮುಖ ಸಾಹಿತಿಗಳಾದ ಯು.ಆರ್.ಅನಂತಮೂರ್ತಿ, ಪಿ. ಲಂಕೇಶ್, ಪೂರ್ಣಚಂದ್ರ ತೇಜಸ್ವಿ ಮುಂತಾದವರ ಬರವಣಿಗೆಗಳಲ್ಲಿ ಸಮಾಜವಾದಿ ಧೋರಣೆಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಸಾಮಾಜಿಕ ಸುಧಾರಣೆಗಳ ಮೇಲೆ ಸಮಾಜವಾದಿ ಚಳುವಳಿ ಪ್ರಭಾವ ಬೀರಿತ್ತಾದರೂ ಅದು ಅಷ್ಟೇನೂ ಪರಿಣಾಮಕಾರಿಯಾಗಿರಲಿಲ್ಲವೆನ್ನುವುದೇ ಸೂಕ್ತ. ರೈತ ಚಳುವಳಿ ಸಮಾಜವಾದದ ಕೂಸಾಗಿಯೇ ಬೆಳೆಯಿತು.

1980ರ ದಶಕದ ನಂತರ ಆದ ಬದಲಾವಣೆಗಳು ಇದಕ್ಕೆ ವಿರುದ್ಧವಾದವೆಂದರೆ ತಪ್ಪಾಗಲಾರದು. ನೀರಾವರಿ ವ್ಯವಸ್ಥೆ, ಹಸಿರು ಕ್ರಾಂತಿಯಿಂದ ಹೊಸದೊಂದು ಜಮೀನ್ದಾರಿವರ್ಗ ಜಿಲ್ಲೆಯಲ್ಲಿ ಹುಟ್ಟಿಕೊಂಡಿತು. ಆಧುನಿಕ ವ್ಯವಸಾಯ ಪದ್ಧತಿಯನ್ನು ಅಳವಡಿಸಿಕೊಳ್ಳಲಾಗದ ಸಣ್ಣ ಹಿಡುವಳಿದಾರರು ವ್ಯವಸಾಯದಿಂದ ದೂರವಾಗುತ್ತಿದ್ದಾರೆ. ಆರ್ಥಿಕ ಬೆಳೆಗಳು ಬಡವ ಮತ್ತು ಶ್ರೀಮಂತ ರೈತರ ನಡುವಿನ ಅಂತರವನ್ನು ಇನ್ನಷ್ಟು ಹೆಚ್ಚಿಸುತ್ತಿವೆ. ಜೊತೆಗೆ ದಲ್ಲಾಳಿ, ಬಂಡವಾಳಿಗ ವರ್ಗವೊಂದು ಹೊಸದಾಗಿ ಹುಟ್ಟಿಕೊಂಡು ಸಣ್ಣ ರೈತರ ಶೋಷಣೆ ಇನ್ನಷ್ಟು ಹೆಚ್ಚುತ್ತಿದೆ. ಇಂತಹ ಸಂದರ್ಭದಲ್ಲಿ ಬಡವರ ಪರವಾಗಿ ಧ್ವನಿಯೆತ್ತುವ ಸಂಘಟನೆಗಳು ಇದ್ದರೂ ಅವು ತೀರ ದುರ್ಬಲವಾಗಿರುವುದು ಆಶ್ಚರ್ಯವನ್ನು ಹುಟ್ಟಿಸುತ್ತಿದೆ. ಈ ಎಲ್ಲಾ ಕಾರಣಗಳಿಂದ ಕೆಲವೆ ವರ್ಷಗಳ ಹಿಂದೆ ಜಿಲ್ಲೆಯ ಒಟ್ಟಾರೆ ಪರಿಸರದ ಮೇಲೆ ಪ್ರಭಾವ ಬೀರಿ ಒಂದು ಸಮಾಜವಾದಿ ವಾತಾವರಣವನ್ನುಂಟು ಮಾಡಿದ ಸಮಾಜವಾದಿ ಚಳುವಳಿಯ ಸಾಧಕ ಬಾಧಕಗಳನ್ನು ಚರ್ಚಿಸುವುದೇ ಈ ಅಧ್ಯಯನದ ಉದ್ದೇಶ.

ಅಖಿಲ ಭಾರತ ಮಟ್ಟದಲ್ಲಿ ಸಮಾಜವಾದಿ ಚಳುವಳಿಯ ಬಗ್ಗೆ ಅಧ್ಯಯನಗಳು ನಡೆದಿವೆಯಾದರೂ ಕರ್ನಾಟಕದಲ್ಲಿ ಈ ರೀತಿಯ ಅಧ್ಯಯನಗಳು ವಿರಳ. ಕಾಗೋಡು ಸತ್ಯಾಗ್ರಹ ಮತ್ತು ಸಂಡೂರು ಹೋರಾಟದಂತಹ ಒಂದೆರಡು ಬಿಡಿ ಅಧ್ಯಯನಗಳು ನಡೆದಿರುವುದನ್ನು ಬಿಟ್ಟರೆ ಸಮಾಜವಾದಿ ಚಳುವಳಿಯನ್ನು ಇದುವರೆಗೆ ಯಾರೂ ಸಮಗ್ರವಾಗಿ ಚಿತ್ರಿಸಿಲ್ಲ. ಅದರಲ್ಲೂ ರಾಷ್ಟ್ರಮಟ್ಟದಲ್ಲಿ ಸಮಾಜವಾದಿ ಚಳುವಳಿಯಿಂದಾಗಿ ಹೆಸರುಗಳಿಸಿದ ಶಿವಮೊಗ್ಗ ಜಿಲ್ಲೆಯ ಬಗ್ಗೆಯೂ ಸಮಗ್ರವಾಗಿ ಅಧ್ಯಯನ ನಡೆದಿಲ್ಲ. ಈ ಕಾರಣಕ್ಕಾಗಿ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಅಧ್ಯಯನದ ವ್ಯಾಪ್ತಿಯನ್ನು ಶಿವಮೊಗ್ಗ ಜಿಲ್ಲೆಗೆ ಮಾತ್ರ ಸೀಮಿತಗೊಳಿಸಿಕೊಳ್ಳಲಾಗಿದೆ. ವಿಷಯಕ್ಕೆ ಪೂರಕವಾಗಿ ಮೊದಲೆರಡು ಅಧ್ಯಾಯಗಳಲ್ಲಿ ಸಮಾಜವಾದದ ತಾತ್ವಿಕ ಚಿಂತನೆ ಮತ್ತು ಭಾರತೀಯ ಸಮಾಜವಾದಿ ಚಳುವಳಿಯನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ನಂತರ ಶಿವಮೊಗ್ಗ ಜಿಲ್ಲೆಯಲ್ಲಿ ಸಮಾಜವಾದಿ ಚಟುವಟಿಕೆಗಳ ಪ್ರಾರಂಭ, ಸೋಷಲಿಸ್ಟ ಪಕ್ಷದ ಸ್ಥಾಪನೆ, ಮತ್ತು ಅದರ ಅಂತ್ಯವಾದ 1978ರ ವರೆಗಿನ ಎಲ್ಲ ವಿದ್ಯಮಾನಗಳನ್ನು ಚಳುವಳಿಯ ಹಿನ್ನಲೆಯಲ್ಲಿ ಚರ್ಚಿಸಲಾಗಿದೆ.

ಈ ಅಧ್ಯಯನದಲ್ಲಿ ಸಮತಾವಾದ(ಕಮ್ಯುನಿಸಂ)ವನ್ನು ಚರ್ಚೆಗೆ ಎತ್ತಿಕೊಂಡಿಲ್ಲ. ಶಿವಮೊಗ್ಗ ಜಿಲ್ಲೆಯಲ್ಲಿ ಸಮತಾವಾದದ ಪ್ರಭಾವ ಅಷ್ಟಾಗಿ ಇರಲಿಲ್ಲ. ಸಮಾಜವಾದದ ಪ್ರಭಾವ ದಟ್ಟವಾಗಿದ್ದಾಗ ಸಮತಾವಾದಿಗಳೂ ಅವರನ್ನೇ ಬೆಂಬಲಿಸಿದ್ದ ಬಗ್ಗೆ ಮಾಹಿತಿ ಇದೆ. ಉದಾಹರಣೆಗೆ, 1967ರ ವಿಧಾನಸಭಾ ಚುನಾವಣೆಯಲ್ಲಿ ಸಮತಾವಾದಿ ಅಪ್ಪಣ್ಣ ಹೆಗಡೆ ಎಂಬುವರು ತೀರ್ಥಹಳ್ಳಿ ಕ್ಷೇತ್ರದಲ್ಲಿ ಗೋಪಾಲ ಗೌಡರನ್ನು ಬೆಂಬಲಿಸಿದ್ದರು. ಸಮಾಜವಾದ, ಸಮತಾವಾದಗಳಿಗೆ ಹೆಚ್ಚೇನು ವ್ಯತ್ಯಾಸವಿಲ್ಲದಿದ್ದರೂ ಭಾರತೀಯ ಸಂಧರ್ಭದಲ್ಲಿ ಎರಡನ್ನೂ ಬೇರೆ ಬೇರೆಯಾಗಿಯೇ ನೋಡಲಾಗಿದೆ.

ಈ ಕಾರಣಕ್ಕಾಗಿ ಚಳುವಳಿಯ ಸಂದರ್ಭ ಬಂದಾಗ ಸಮಾಜವಾದಿ ಚಳುವಳಿ ಎಂದು ಬಳಸಲಾಗಿದೆ. ಪಕ್ಷದ ಹೆಸರು ಬರುವಂತಹ ಕಡೆ ಸೋಷಲಿಷ್ಟ ಪಕ್ಷ ಎಂದು ಕರೆಯಲಾಗಿದೆ. ಜನಸಾಮಾನ್ಯರ ಬಾಯಿಯಲ್ಲಿ ಇಂದಿಗೂ ಸೋಷಲಿಸ್ಟ ಪಕ್ಷ ಎಂದೇ ಉಳಿದಿರುವ ಕಾರಣಕ್ಕಾಗಿ ಈ ರೀತಿಯ ಪದಗಳನ್ನು ಬಳಸಲಾಗಿದೆ.

[illegible]

[illegible]

[illegible]

ಅಧ್ಯಾಯ : 2

ಸಮಾಜವಾದ : ಒಂದು ಪರಿಕಲ್ಪನೆ

2. ಸಮಾಜವಾದ : ಒಂದು ಪರಿಕಲ್ಪನೆ

ಸಮಾಜವಾದವೆಂಬುದು ಆಧುನಿಕ ರಾಜಕೀಯ ಸಿದ್ಧಾಂತ. ಸಮಾಜವಾದ ಪದದ ಅರ್ಥದ ಬಗ್ಗೆ ಗೊಂದಲವಿದ್ದು, ಇದು ಯಾವುದೇ ನಿರ್ದಿಷ್ಟ ವರ್ತಮಾನ ಅಥವಾ ಭೂತಕಾಲದ ಸಾಮಾಜಿಕ ಪರಿಸರದ ವಿವರಣೆ ನೀಡುವುದಿಲ್ಲ. ಆದ್ದರಿಂದ ಸಮಾಜವಾದ ಕುರಿತ ಹೇಳಿಕೆಗಳನ್ನು ಖಚಿತ ಅರ್ಥದಲ್ಲಿ ವಿಮರ್ಶಿಸುವುದು ಕಷ್ಟ.

ಸಮಾಜವಾದಿ ಆಲೋಚನೆಗಳ ಇತಿಹಾಸವನ್ನು ಗಮನಿಸಿದರೆ ಸಮಾಜವಾದ ಎಂಬ ಪದಕುರಿತ ವಿಭಿನ್ನ ವ್ಯಾಖ್ಯಾನಗಳು ದೊರೆಯುತ್ತವೆ. ಒಡೆತನ ಕುರಿತವು, ಸಹಕಾರ ಕುರಿತವು, ಯೋಜನ, ಆದಾಯ ವಿತರಣೆ-ಒಟ್ಟಿನಲ್ಲಿ ವ್ಯಾಖ್ಯಾನ ನೀಡುವವರ ದೃಷ್ಟಿಕೋನವನ್ನು ಇವು ಪ್ರತಿಬಿಂಬಿಸುತ್ತವೆ.

ವ್ಯಾ ಖ್ಯ ಗ ಳು :

ರಾಜ್ಯಶಾಸ್ತ್ರದ ಪ್ರಕಾಂಡ ಪಂಡಿತನಾದ ಸಿ.ಇ.ಎಂ. ಜೋಡರವರ ಅಭಿಪ್ರಾಯದಲ್ಲಿ, ''ಸಮಾಜವಾದ ಒಂದು ವಿಶಿಷ್ಟ ಸಿದ್ಧಾಂತವಷ್ಟೇ ಅಲ್ಲ, ಅದು ಒಂದು ಚಳುವಳಿ. ಅದು ರಾಜಕೀಯ ಸಿದ್ಧಾಂತವಷ್ಟೇ ಅಲ್ಲ, ಆರ್ಥಿಕ ಹಾಗೂ ಸಾಮಾಜಿಕ ಸೂತ್ರಗಳನ್ನು ಒಳಗೊಂಡ ಒಂದು ಮಹೋನ್ನತ ಜೀವನ ಧರ್ಮಕೋಶ.'' ಈ ಹೇಳಿಕೆಯನ್ನು ಅವಲೋಕಿಸಿ ಹೇಳುವುದಾದರೆ, ಸಮಾಜವಾದ ಕೇವಲ ರಾಜಕೀಯ ಸಿದ್ಧಾಂತವಷ್ಟೇ ಆಗಿರದೇ ವಿಶಾಲಾರ್ಥದಲ್ಲಿ ಅದು ಒಂದು ಚಳುವಳಿಯಾಗಿದೆ. ಈ ಚಳುವಳಿ ಎಂಬ ಪದ ಹಲವಾರು ಅಂಶಗಳನ್ನು ತನ್ನೊಳಗೆ ಹುದುಗಿಸಿಕೊಂಡಿದೆ. ಸಾಮಾಜಿಕ, ಧಾರ್ಮಿಕ, ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ — ಹೀಗೆ ಚಳುವಳಿ ಎಂಬುದು ಹಲವು ಹತ್ತು ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಸುಧಾರಣೆಗೋಸ್ಕರ ನಡೆಯುವ

[illegible]

[illegible]

[illegible]

[illegible]

ಹೋರಾಟವಾಗಿದೆ. ಅಂದಮೇಲೆ ನೋಡಿದರೆ ಅಭಿಪ್ರಾಯದಲ್ಲಿ ಸಮಾಜವಾದ ಸುಧಾರಣೆಗೋಸ್ಕರ ಜನಸಾಮಾನ್ಯರು ನಡೆಸುವ ಹೋರಾಟವೇ ಆಗಿದೆ.

ಪ್ರೋದೋನ ಎಂಬ ವಿದ್ವಾಂಸರು ಕೂಡ ಮೇಲಿನ ವ್ಯಾಖ್ಯೆಯನ್ನು ಹೋಲುವಂತಹ ಅಭಿಪ್ರಾಯವನ್ನು ನೀಡಿದ್ದಾರೆ. ಅವರ ಪ್ರಕಾರ, ''ನಮ್ಮ ಸಮಾಜದ ಏಳಿಗೆಯತ್ತ ನಡೆಸುವ ಕಾರ್ಯವೇ, ಹೊತ್ತ ಆಕಾಂಕ್ಷೆಗಳೇ ಸಮಾಜವಾದ.'' ಅಂದರೆ ಅಸಮಾನತೆಯಿಂದ ಕೂಡಿರುವ ಅಥವಾ ಜಡವಾಗಿರುವ ಸಮಾಜವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವ ಕಾರ್ಯ ಅಥವಾ ಅಭಿಲಾಷೆ, ಆಶಾವಾದವೇ ಸಮಾಜವಾದ. ಇವರು ಹೋರಾಟ ಪದಕ್ಕೆ ಕಾರ್ಯ, ಆಶಾವಾದ ಎಂಬ ಅರ್ಥಗಳು ಬರುವಂತೆ ಪದಗಳನ್ನು ಬಳಸಿದ್ದಾರೆ.

ಕಾರ್ಲ್‌ಮಾರ್ಕ್ಸ್‌ರವರು ಮೇಲಿನದಕ್ಕಿಂತ ಭಿನ್ನವಾದ ಹೇಳಿಕೆ ನೀಡಿದ್ದಾರೆ. ''ಉತ್ಪಾದನೆ, ವಿತರಣೆ ಮತ್ತು ವಿನಿಮಯದ ಸಾಧನಗಳನ್ನು ರಾಷ್ಟ್ರೀಕರಣಗೊಳಿಸುವುದೇ'' ಸಮಾಜವಾದ ಎಂದು ಹೇಳಿದ್ದಾರೆ. ಇವರು ಮಾನವರಲ್ಲಿ ಅಸಮಾನತೆಗೆ ಕಾರಣವಾಗಿರುವ ಖಾಸಗೀ ಆಸ್ತಿಯನ್ನು ರದ್ದುಪಡಿಸಿ ಅದನ್ನು ಸಾರ್ವಜನಿಕ ಸ್ವತ್ತಾಗಿ ಮಾಡುವುದರ ಮೂಲಕ ಸರ್ಕಾರವೇ ಜನರ ಯೋಗಕ್ಷೇಮ ನೋಡಿಕೊಳ್ಳಬೇಕೆಂದು ಅಭಿಪ್ರಾಯಪಡುತ್ತಾರೆ. ಅಂದರೆ ಶೋಷಣೆ ರಹಿತ ಸಮಾಜ ಸ್ಥಾಪನೆ ಮಾಡಬೇಕಾದರೆ ಖಾಸಗೀ ಆಸ್ತಿಯನ್ನು ರದ್ದುಪಡಿಸಬೇಕು. ಇಲ್ಲಿ ಸಾರ್ವಜನಿಕರು ಹೋರಾಟದ ಮೂಲಕ ಆಡಳಿತವನ್ನು ವಶಪಡಿಸಿಕೊಂಡು ಸಮಾಜ ಕಲ್ಯಾಣವನ್ನು ಸಾಧಿಸಲು ಮಾರ್ಗದರ್ಶನ ನೀಡಬೇಕೆಂಬುದು ಇವರ ನಿಲುವು.

ಬ್ರಾಡ್ಲಾಫ್ ಎಂಬ ವಿದ್ವಾಂಸರು ಸಹಾ ಕಾರ್ಲ್‌ಮಾರ್ಕ್ಸ್‌ರವರ ಹೇಳಿಕೆಯನ್ನು ಹೋಲುವಂತಹ ವ್ಯಾಖ್ಯಾನವನ್ನೇ ನೀಡಿದ್ದಾರೆ. ಅವರ ಪ್ರಕಾರ, ''ಸರಕಾರವೇ ಎಲ್ಲ ಸಂಪತ್ತನ್ನು ಪಡೆದುಕೊಳ್ಳಬೇಕು, ಕೆಲಸಗಳನ್ನು ನಿರ್ದೇಶಿಸಬೇಕು. ಉತ್ಪಾದನೆಗಳ ಸಮಾನ ವಿತರಣೆಗೆ ಕಟ್ಟುನಿಟ್ಟಾದ ಕ್ರಮ ಕೈಗೊಳ್ಳಬೇಕು.'' ಇವರು ಸಹಾ ಖಾಸಗೀ

[illegible]

[illegible]

[illegible]

[illegible]

[illegible]

ಆಸ್ತಿ ಅಸಮಾನತೆಗೆ ಕಾರಣವಾಗಿದೆಯೆನ್ನುತ್ತಾರೆ. ಈ ಅಸಮಾನತೆಯನ್ನು ಹೋಗಲಾಡಿಸಬೇಕಾದರೆ ಖಾಸಗೀ ಆಸ್ತಿಯನ್ನು ರದ್ದುಪಡಿಸಿ ಅದನ್ನು ರಾಷ್ಟ್ರೀಕರಿಸಬೇಕು ಹಾಗೂ ಸರ್ಕಾರವೇ ವಿತರಣಾ ಕೆಲಸವನ್ನು ನಿರ್ದೇಶಿಸಬೇಕು ಮತ್ತು ಸಮಾನ ವಿತರಣೆಗೆ ಕ್ರಮಕೈಗೊಳ್ಳಬೇಕು ಎಂದಿರುವರು. ಕಾರ್ಲ್‌ಮಾರ್ಕ್ಸ್‌ರವರ ಹೇಳಿಕೆಗೆ ಇದು ಸಮೀಪವಾಗಿದೆ ಎಂದು ಹೇಳಬಹುದು.

ಹೀಗೆ ಸಮಾಜವಾದ ಎಂದರೇನು ಎಂಬುದಕ್ಕೆ ಬೇರೆಬೇರೆ ವಿದ್ವಾಂಸರು ತಮ್ಮದೇ ಆದದೃಷ್ಟಿಕೋನದಲ್ಲಿ ವಿವರಿಸಿ ವ್ಯಾಖ್ಯಾನಿಸಿದ್ದಾರೆ. ಈ ಹೇಳಿಕೆಗಳ ನಡುವೆ ವ್ಯತ್ಯಾಸವಿರಬಹುದಾದರೂ ಈ ಎಲ್ಲಾ ವ್ಯಾಖ್ಯಾನಗಳ ಅರ್ಥ, ಸಮಾಜವಾದವೆಂದರೆ ಸಮಾನತೆಯನ್ನು ಸಾಧಿಸಲು ಅನುಕೂಲವಾದ ಸಿದ್ಧಾಂತ.

'ಸಮಾಜವಾದ' ಪದಬಳಕೆ :

'ಸಮಾಜವಾದ' ಹಾಗೂ 'ಸಮಾಜವಾದಿ' ಎಂಬ ಶಬ್ದಗಳನ್ನು ಮೊಟ್ಟಮೊದಲಿಗೆ ಯಾರು ಬಳಸಿದರು ಎನ್ನುವುದು ಸ್ಪಷ್ಟವಾಗಿಲ್ಲ. ಈಗ ಗೊತ್ತಿರುವ ಮಟ್ಟಿಗೆ ಇಟಲಿಯನ್ ಭಾಷೆಯಲ್ಲಿ ಈ ಪದವನ್ನು ಮೊದಲಬಾರಿಗೆ ಬಳಸಲಾಯಿತು. ಆದರೆ ಇಲ್ಲಿ ಯಾವ ಅರ್ಥದಲ್ಲಿ ಈ ಶಬ್ದಗಳನ್ನು ಬಳಸಲಾಗಿತ್ತೋ ಆ ಅರ್ಥಕ್ಕೂ, ನಂತರ ಈ ಶಬ್ದಗಳು ಪಡೆದ ಅರ್ಥಕ್ಕೂ ಯಾವುದೇ ಸಂಬಂಧವಿಲ್ಲ. ಇದರ ನಂತರ ಓವೆನವಾದಿಗಳು 1827 ರಲ್ಲಿ 'ಸಹಕಾರಿ' ಎಂಬ ಪತ್ರಿಕೆಯಲ್ಲಿ ಸಮಾಜವಾದ ಎಂಬ ಶಬ್ದವನ್ನು ಬಳಸಿದರು. 1832 ರಲ್ಲಿ ಫ್ರೆಂಚ್ ಪತ್ರಿಕೆ 'ಲಗ್ಲೋಬೊ' ನಲ್ಲಿ ನಿರ್ದಿಷ್ಟವಾಗಿ ಸಮಾಜವಾದ ಎಂಬ ಪದವನ್ನು ಬಳಸಲಾಯಿತು. 1930ರ ದಶಕದಲ್ಲಿ ಲೆರೋ ಹಾಗೂ ರೇನೋ ತಮ್ಮ 'ನೋವೆಲ್ಲ ಎನ ಸೈಕ್ಲೋಪಿಡಿಯ' ಹಾಗೂ ಇನ್ನಿತರ ಬರವಣಿಗೆಯಲ್ಲಿ ಈ ಶಬ್ದವನ್ನು ಮುಕ್ತವಾಗಿ ಬಳಸಿದರು. ಆ ಕಾಲದಲ್ಲಿಯೇ ಮಾನವನ ಹಕ್ಕುಗಳ ಆರ್ಥಿಕ ಹಾಗೂ ಸಾಮಾಜಿಕ ಪರಿಕಲ್ಪನೆಗಳ ಆಧಾರದ ಮೇಲೆ ನಿಂತಿರುವ ಒಂದು ಹೊಸ

[illegible]

ಸಮಾಜ ವ್ಯವಸ್ಥೆಯನ್ನು ಬಯಸುವ ಹಲವಾರು ಗುಂಪುಗಳು ಸೇರುವಂತೆ ಒಂದು ವಿಶಾಲ ಅರ್ಥದಲ್ಲಿ ಈ ಶಬ್ದವನ್ನು ಬಳಸುವುದು ಪ್ರಾರಂಭವಾಯಿತು. ನಂತರ 'ಸಮಾಜವಾದ' ಹಾಗೂ 'ಸಮಾಜವಾದಿ' ಈ ಎರಡೂ ಶಬ್ದಗಳು ಇಂಗ್ಲೆಂಡ್, ಫ್ರಾನ್ಸ್ ಹಾಗೂ ಇನ್ನಿತರ ದೇಶಗಳಲ್ಲಿ ಮೇಲಿಂದ ಮೇಲೆ ಬಳಸಲ್ಪಟ್ಟವು.

ಹೀಗೆ ಸಮಾಜವಾದ ಎಂಬ ಶಬ್ದವನ್ನು ಮೊದಲಬಾರಿಗೆ ಯಾರು ಎಲ್ಲಿಯಾದರೂ ಬಳಸಿರಲಿ ಈ ಶಬ್ದದ ಮೂಲಕ ತಿಳಿಯಪಡಿಸಲು ಯತ್ನಿಸಿದ ಆಶಯ ಮಾತ್ರ ಸ್ಪಷ್ಟವಾಗಿತ್ತು. ಅದೆಂದರೆ ಮುಖ್ಯವಾಗಿ 19ನೇ ಶತಮಾನದಲ್ಲಿ ಇದರ ಅರ್ಥ: ಸಂಪತ್ತು ಸಾಧನಗಳಲ್ಲಿ ಖಾಸಗೀ ಅಥವಾ ಪ್ರತ್ಯೇಕ ಒಡೆತನ ಸಮಾಜದ ಶಾಂತಿಗೆ ಕಂಟಕಕಾರಿ; ಖಾಸಗೀ ಒಡೆತನ ವಿನಾಶ ಹೊಂದಿದ ಹೊರತೂ ಸಮಾಜದಲ್ಲಿ ಕಂಡುಬರುವ ತಾರತಮ್ಯ, ಪ್ರತಿಷ್ಟೆ, ಒಡೆತನ ಹೊಂದಿದವರು ನಡೆಸುವ ದಾಂಧಲೆ; ಇಲ್ಲದವರು ಮತ್ತು ನಿರ್ಗತಿಕರು ಅನುಭವಿಸುತ್ತಿರುವ ನೋವುಗಳಿಗೆ ಪರಿಹಾರವೇ ಇಲ್ಲ; ಆದುದರಿಂದ ಪ್ರಜಾಯೋಗಕ್ಷೇಮ ಸಾಧನೆಯಾಗಬೇಕಾದರೆ ಸುವ್ಯವಸ್ಥಿತ ಸಮಾಜವೊಂದನ್ನು ಅಪೇಕ್ಷಿಸುವುದಾದರೆ, ಸಮಾಜದಲ್ಲಿ ನೆಮ್ಮದಿಯನ್ನು ಕಾಣಬಯಸಿದರೆ, ಸಂಪತ್ತು ಸಾಧನಗಳ ಮೇಲ್ವಿಚಾರಣೆಯನ್ನು ಸಮಾಜವೇ ಹೊಂದಿರಬೇಕು ಎಂಬುದಾಗಿದ್ದಿತು. ವ್ಯಕ್ತಿಗತ ಒಡೆತನಕ್ಕೆ ಬದಲಾಗಿ ಸಾಮುದಾಯಿಕ ಒಡೆತನವನ್ನು ಎತ್ತಿ ಹಿಡಿಯುವ ವಾದವೇ ಸಮಾಜವಾದವೆಂದು ಹೆಸರುಗಳಿಸಿತು.

ಸಮಾಜವಾದ: ಚಾರಿತ್ರಿಕ ಹಿನ್ನೆಲೆಯಲ್ಲಿ:

ಸಮಾಜವಾದಿ ಆಂದೋಲನ ಔದ್ಯೋಗಿಕ ಕ್ರಾಂತಿಯ ನಂತರ ಪ್ರಾರಂಭವಾಯಿತು ಎಂದು ಹೇಳಬಹುದಾದರೂ, ಅದಕ್ಕಿಂತಲೂ ಮೊದಲು ಸಮಾಜವಾದಿ ವಿಚಾರಗಳಿಗೆ ಕೊರತೆಯಿರಲಿಲ್ಲ. 'ಸಮಾನತೆ' ಸಮಾಜವಾದದ ಅತ್ಯುಚ್ಚ ಆದರ್ಶ

ಏನನ್ನುವುದಾದರೆ, ಅದನ್ನು ಬಯಸಿ ಸಮಾಜದಲ್ಲಿನ ಅಸಮಾನತೆಯನ್ನು ಖಂಡಿಸಿದ ಹಲವಾರು ಉದಾಹರಣೆಗಳು ಚರಿತ್ರೆಯಲ್ಲಿ ಸಿಗುತ್ತವೆ.

ಕ್ರಿಸ್ತನಿಗಿಂತ ಪೂರ್ವದಲ್ಲಿ, ಸುಮಾರು 1200 ವರ್ಷಗಳ ಹಿಂದೆ, ಬದುಕಿದ್ದ ಮೋಸೆಸ್ ಹಾಗೂ ಸುಮಾರು 750 ವರ್ಷ ಮೊದಲು ಬದುಕಿದ್ದ ಅಮೋಸೆಸ ಇವರನ್ನು ಸಮಾಜವಾದಿ ಚಿಂತಕರೆಂದು ಪರಿಗಣಿಸಬಹುದು. ಗ್ರೀಕನ ಪ್ಲೇಟೋ ಹಾಗೂ ಅರಿಸ್ಟೋಫೆನೆಸ್ ಮೊದಲಾದವರ ವಿಚಾರಗಳಲ್ಲಿ ಸಮಾಜವಾದಿ ಎಳೆಗಳನ್ನು ಗುರುತಿಸುವುದು ಸಾಧ್ಯವಿದೆ. ಭಾರತದಲ್ಲಿ ಯಾಜ್ಞವಲ್ಕ್ಯ ಕೂಡ ಶ್ರೀಮಂತಿಕೆಯನ್ನು ಖಂಡಿಸುತ್ತಾನೆ. ಸಮಾನತೆಯನ್ನು ಆಧರಿಸಿದ ಸುಖೀರಾಜ್ಯದ ಮೊದಲ ಸ್ಪಷ್ಟ ಚಿತ್ರಣ ಮಾಡಿದವ ಸರ್ ಥಾಮಸ್ ಮೋರ್. ಇವನು ತನ್ನ 'ಯುಟೋಪಿಯ' ಎಂಬ ಗ್ರಂಥದಲ್ಲಿ ಈ ವಿಷಯವನ್ನು ಚರ್ಚಿಸಿದ್ದಾನೆ. ಅನಂತರ ಇವನ ಮಾದರಿಯಲ್ಲಿ ಚಿಂತನೆ ಮಾಡಿದವರ ಒಂದು ಪರಂಪರೆಯೇ ಬೆಳೆಯಿತು. ಇವರನ್ನು ಯುಟೋಪಿಯನ್ ಸಮಾಜವಾದಿಗಳೆಂದು ಕರೆಯಲಾಯಿತು. ಇವರಲ್ಲಿ ಮುಖ್ಯರಾದವರು ಇಂಗ್ಲೆಂಡಿನ ರಾಬರ್ಟ್ ಓವೆನ್, ಫ್ರಾನ್ಸಿನ ಸಾಯಂಸೀಮೋರಿ ಹಾಗೂ ಚಾರ್ಲ್‌ಫೂರಿಯೆ ಇವರ ವಿಚಾರಗಳಲ್ಲಿ ಕಲ್ಪನೆ ಹೆಚ್ಚಾಗಿದ್ದು ಸಿದ್ಧಾಂತ ಕಡಿಮೆಯಿದ್ದುದರಿಂದ, ಇವರನ್ನು ಬ್ಲಾಂಕಿ ಯುಟೋಪಿಯನ್ ಸಮಾಜವಾದಿಗಳೆಂದು ಕರೆದ.

ಹತ್ತೊಂಬತ್ತನೇ ಶತಮಾನದ ಮಧ್ಯಭಾಗದಲ್ಲಿ ಮಾರ್ಕ್ಸ್ ಮತ್ತು ಎಂಗಲ್ಸರು ಸಮಾಜವಾದಕ್ಕೆ ತಮ್ಮದೇ ಆದ ವ್ಯಾಖ್ಯೆ ನೀಡಿದರು. ಇವರು ತಮ್ಮವಾದವನ್ನು ವೈಜ್ಞಾನಿಕ ಸಮಾಜವಾದ ಎಂದು ಕರೆದರು. ವರ್ಗಹೋರಾಟವನ್ನು ಐತಿಹಾಸಿಕವಾಗಿ ವಿಶ್ಲೇಷಿಸುವುದರ ಮೂಲಕ ತಮ್ಮ ಚಿಂತನೆಯನ್ನು ಹೀಗೆ ವ್ಯಕ್ತಪಡಿಸಿದ್ದಾರೆ. ಇತಿಹಾಸದ ಮುನ್ನಡೆಯಲ್ಲಿ ಬಂಡವಾಳಶಾಹಿ ವ್ಯವಸ್ಥೆ ಜನ್ಮತಾಳಿ, ಅದರ ಚಲನಾ ಪಥದಲ್ಲಿ ಅದು ಜನ್ಮಕೊಟ್ಟಿರುವ ಕಾರ್ಮಿಕ ವರ್ಗವೇ ಬಂಡವಾಳಶಾಹಿ ವ್ಯವಸ್ಥೆಯನ್ನು ವಿನಾಶಗೊಳಿಸುತ್ತದೆ. ಮತ್ತು

[illegible]

ಬಂಡವಾಳಶಾಹಿ ವ್ಯವಸ್ಥೆ ತನ್ನ ಚಲನೆಯಲ್ಲಿ ಉಂಟು ಮಾಡಿರುವ ಬದಲಾವಣೆಗಳೇ ಹೊಸ ವ್ಯವಸ್ಥೆಯು ಆಗಮನವನ್ನು ಅವಶ್ಯಕಗೊಳಿಸಿವೆ ಎಂದು ತಿಳಿಸಿದರು.

ಹೀಗೆ ಸಮಾಜವಾದ ಎಂಬ ಪದವನ್ನು ಹಲವಾರು ವಿದ್ವಾಂಸರು ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. ಬದಲಾಗುತ್ತಿರುವ ಪರಿಸ್ಥಿತಿಗನುಗುಣವಾಗಿ ಸಮಾಜವಾದ ಹೊಸ ಹೊಸ ಅರ್ಥ ಪಡೆಯುತ್ತಿದೆ.

ಅಧ್ಯಾಯ : 3

ಭಾರತೀಯ ಸಮಾಜವಾದಿ ಚಳುವಳಿ : ಒಂದು ನೋಟ

3. ಭಾರತೀಯ ಸಮಾಜವಾದಿ ಚಳುವಳಿ: ಒಂದು ನೋಟ

ಭಾರತದಲ್ಲಿ ಸಮಾಜವಾದೀ ಚಳುವಳಿ ಹುಟ್ಟಿದುದು ಸ್ವಾತಂತ್ರ್ಯ ಆಂದೋಲನದ ಒಂದು ಭಾಗವಾಗಿ. ಸ್ವಾತಂತ್ರ್ಯ ಆಂದೋಲನ ವ್ಯವಸ್ಥಿತವಾಗಿ ಸ್ವಯಮಾಧಿಕಾರದತ್ತ ಹೆಜ್ಜೆಯಿಡುತ್ತಿದ್ದ ಕಾಲದಲ್ಲೇ, ಸ್ವತಂತ್ರ ಭಾರತ ಯಾವ ಸೈದ್ಧಾಂತಿಕ ಹಿನ್ನೆಲೆಯಲ್ಲಿ ತನ್ನ ಭವಿಷ್ಯವನ್ನು ರೂಪಿಸಿಕೊಳ್ಳಬೇಕೆಂದು ಚಿಂತನೆಗಳು ಹುಟ್ಟುತ್ತಿದ್ದ ಕಾಲದಲ್ಲಿ ಈ ರೀತಿಯ ಚಿಂತನೆಗಳು ಹುಟ್ಟಿಕೊಂಡವು. 19ನೇ ಶತಮಾನದಲ್ಲಿ ಯುರೋಪಿನಲ್ಲಿ ಹುಟ್ಟಿ ಬೆಳೆದ ಸಮಾಜವಾದೀ ಚಿಂತನೆ 20ನೇ ಶತಮಾನದ 20ರ ದಶಕದ ಆರಂಭದಲ್ಲಿ ಭಾರತದಲ್ಲಿ ತನ್ನ ಅಸ್ತಿತ್ವವನ್ನು ಗುರುತಿಸಿಕೊಳ್ಳಲಾರಂಭಿಸಿತು. ಇದಕ್ಕೂ ಹಿಂದೆಯೇ ಭಾರತೀಯ ವಿದ್ಯಾವಂತರು ಯುರೋಪಿನ ಸಮಾಜವಾದಿಗಳ ಸಂಪರ್ಕ ಪಡೆದಿದ್ದರು. ಭಾರತೀಯ ನವೋದಯದ ಮುಖಂಡ ರಾಜಾರಾಮ್ ಮೋಹನರಾಯರಿಗೆ ಯುರೋಪಿನ ಸಮಾಜವಾದಿ ರಾಬರ್ಟ್ ಓವೆನ್ ಪರಿಚಯವಿತ್ತು. ದಾದಭಾಯಿ ನವರೋಜಿಯವರು ಹೈಂಡಮನ್ ಎಂಬ ಸಮಾಜವಾದಿಯ ಮಿತ್ರರಾಗಿದ್ದರು. ಹೀಗೆ ಭಾರತದಿಂದ ಯುರೋಪಿಗೆ ವಿದ್ಯಾಭ್ಯಾಸಕ್ಕೆ ಹೋಗಿಬರುತ್ತಿದ್ದ ಯುವಕರ ಮೂಲಕ ಭಾರತೀಯರಿಗೆ ಸಮಾಜವಾದಿ ಚಿಂತನೆಗಳು ಹರಿದುಬರಲಾರಂಭಿಸಿದವು.

1917 ರಲ್ಲಿ ರಷ್ಯಾದಲ್ಲಾದ ಕ್ರಾಂತಿ ಸಮಾಜವಾದಿ ಚಿಂತನೆಯ ಮೇಲೆ ಹೊಸ ಆಡಳಿತ ವ್ಯವಸ್ಥೆಯನ್ನು ಕಟ್ಟುವ ಮೊದಲ ಪ್ರಯತ್ನವಾಗಿ ಕಂಡು ಬಂದಿತು. ಈ ಕ್ರಾಂತಿ ಜರುಗಿದ ಮೇಲೆ ಹೆಚ್ಚು ಜನ ಗಮನ ಸಮಾಜವಾದದತ್ತ ಹರಿಯಿತು. ಈ ರೀತಿ ಜನರ ಗಮನ ಸಮಾಜವಾದದತ್ತ ಹರಿಯುವಲ್ಲಿ ಪತ್ರಿಕೆಗಳ ಪಾತ್ರ ಕೂಡ ಸಾಕಷ್ಟಿದೆ. ಆ ಕಾಲದ ಪ್ರಮುಖ ಪತ್ರಿಕೆಗಳಾದ ತಿಲಕರ ಕೇಸರಿ, ಹಾರ್ನಿಮನರ ಬಾಂಬೆ ಕ್ರಾನಿಕಲ್, ರಮಾನಂದ ಚಟರ್ಜಿಯವರ ಮಾಡರ್ನ್ ರಿವ್ಯೂ ಮುಂತಾದ ಪತ್ರಿಕೆಗಳು

[illegible]

[illegible]

ರಷ್ಯಾದ ಕ್ರಾಂತಿ ಹಾಗೂ ಅದರ ಆಂತರಿಕ ಮತ್ತು ವಿದೇಶೀ ನೀತಿಗಳು ಮುಂತಾದ ವಿಷಯಗಳತ್ತ ಜನರ ಗಮನವನ್ನು ಹರಿಸಿ ಸಮಾಜವಾದದ ಒಲವು ಬೆಳೆಯಲು ಕಾರಣ ವಾದವು.

ಹೀಗೆ ಯುರೋಪಿನಿಂದ ಹರಿದು ಬಂದಂತಹ ಸಮಾಜವಾದಿ ಚಿಂತನೆ 20ರ ದಶಕದ ಆರಂಭದಲ್ಲಿ ಸಂಘಟನೆಯ ರೂಪದಲ್ಲಿ ತನ್ನ ಅಸ್ತಿತ್ವವನ್ನು ಗುರುತಿಸಿಕೊಳ್ಳಲಾರಂಭಿಸಿತು. ಈ ರೀತಿಯಾಗಿ ತನ್ನ ಅಸ್ತಿತ್ವವನ್ನು ಗುರುತಿಸಿಕೊಳ್ಳಲಾರಂಭಿಸಿದ ಸಮಾಜವಾದಿ ಚಿಂತನೆ ಕೇವಲ ಒಂದೇ ಸಂಘಟನೆಯಾಗಿ ತನ್ನ ಅಸ್ತಿತ್ವವನ್ನು ಗುರುತಿಸಿ ಕೊಳ್ಳಲಿಲ್ಲ. ಬದಲಾಗಿ ಸಣ್ಣಪುಟ್ಟ ವ್ಯತ್ಯಾಸದೊಡನೆ ಮುಖ್ಯವಾಗಿ ನಾಲ್ಕು ಕವಲು ಗಳ ರೂಪದಲ್ಲಿದ್ದುದನ್ನು ವಿದ್ವಾಂಸರು ಗುರುತಿಸಿದ್ದಾರೆ. ಅವು,'' ಮೊದಲನೆಯದಾಗಿ ಕಾಂಗ್ರೆಸ್ ಸೋಷಲಿಸ್ಟರು ಇವರು ಸ್ವಾತಂತ್ರ್ಯ ಹೋರಾಟದ ಪೂರ್ಣಾವಧಿಯವರೆಗೆ ಕಾಂಗ್ರೆಸ್ಸಿನೊಡನಿದ್ದು ನಂತರ ತಮ್ಮ ಸ್ವತಂತ್ರ ಅಸ್ತಿತ್ವವನ್ನು ಗುರುತಿಸಿಕೊಂಡರು. ಎರಡನೆಯ ಕವಲು ಕಮ್ಯುನಿಸ್ಟರದು. ಇವರು ತಮ್ಮ ನೇತೃತ್ವದಲ್ಲಿ ಕಾರ್ಮಿಕ ರೈತ ಸಂಘಟನೆಯನ್ನು ಮಾಡಿ ತಾವೇ ಒಂದು ಸ್ವತಂತ್ರ ರಾಜಕೀಯ ಶಕ್ತಿಯಾಗಿ ಬೆಳೆಯಲು ಪ್ರಯತ್ನಿಸಿದವರು. ಮೂರನೆಯ ಕವಲು ರಾಯಿಸ್ಟರು. ಇವರು ಕಮ್ಯುನಿಸ್ಟ ಚಳುವಳಿಯಿಂದ ಸಿಡಿದು ಹೋದವರು ಎನ್ನಬಹುದು. ಸುಭಾಷ ಚಂದ್ರ ಬೋಸರ ಫಾರ್ವರ್ಡ ಬ್ಲಾಕ್ ಮೇಲೆ ಸೂಚಿಸಿದ ಬಣಗಳೊಂದಿಗೆ ಒಂದು ವೇದಿಕೆಯನ್ನು ರಚಿಸಿ ಕೊಳ್ಳಲು ಮುಂದೆ ಬಂದ ಕಾರಣ ಅದನ್ನು ಇನ್ನೊಂದು ಕವಲಾಗಿ ಪರಿಗಣಿಸಬಹುದು.'' (ಶಂಕರನಾರಾಯಣರಾವ್,1991, ಪು:279 — 80)

ಮೇಲ್ಕಾಣಿಸಿದ ನಾಲ್ಕು ಬೇರೆ ಬೇರೆ ಸಂಘಟನೆಗಳನ್ನು ವಿದ್ವಾಂಸರು ಭಾರತೀಯ ಸಮಾಜವಾದ ಎಂದು ಕರೆದಿಲ್ಲ. ಕಾರಣ ಭಾರತೀಯ ಸಮಾಜವಾದ ತನ್ನದೇ ಆದ ಸ್ವತಂತ್ರ ಸಿದ್ಧಾಂತ ಹಾಗೂ ಅಸ್ತಿತ್ವವನ್ನು ಹೊಂದಿರುವುದು ಸ್ಪಷ್ಟ. ಹಾಗಾದರೆ ಇವು ಸಮಾಜವಾದೀ ಸಂಘಟನೆಗಳಲ್ಲವೇ ಎಂಬ ಪ್ರಶ್ನೆಗೆ ಉತ್ತರಿಸ ಬೇಕಾಗುತ್ತದೆ.

[illegible]

ಈ ಎಲ್ಲ ಸಂಘಟನೆಗಳು ಸಮಾಜವಾದಿ ಧೋರಣೆಯನ್ನು ಹೊಂದಿದವೆಂಬುದು ಸ್ಪಷ್ಟ. ಸಮಾಜವಾದಿ ಸಿದ್ಧಾಂತಗಳು ಪ್ರಪಂಚದಾದ್ಯಂತ ಒಂದೇ ಆಗಿರದೆ ಹತ್ತುಹಲವು ರೂಪದಲ್ಲಿವೆ. ಸಮಾಜವಾದ, ಸಮತಾವಾದ, ಮಾರ್ಕ್ಸ್‌ವಾದ, ಲೆನಿನ್‌ವಾದ, ಫ್ರೆಂಚ್ ಸಮಾಜವಾದ, ಇತ್ಯಾದಿ. ಪ್ರಸ್ತುತ ಸಮಸ್ಯಾ ಅಧ್ಯಯನದ ವಿಷಯ ಭಾರತೀಯ ಸಮಾಜವಾದ ಚಳುವಳಿಯ ಅಂಗವಾಗಿ ಶಿವಮೊಗ್ಗ ಜಿಲ್ಲೆಯಲ್ಲಿ ಸಮಾಜವಾದೀ ಚಟುವಟಿಕೆಗಳನ್ನು ಕುರಿತಾಗಿರುವುದರಿಂದ, ಭಾರತೀಯ ಸಮಾಜವಾದ ಎಂದರೇನು ಎಂದು ವಿವರಿಸುವುದು ಮತ್ತು ಅದು ಬೆಳೆದು ಬಂದ ಬಗೆಯನ್ನು ಗಮನಿಸುವುದು ಮುಖ್ಯವಾಗುತ್ತದೆ.

ಭಾರತೀಯ ಸಮಾಜವಾದಿ ಚಳುವಳಿ ಹುಟ್ಟಿದ್ದು ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿದ್ದ ಭಾರತದ ರಾಷ್ಟ್ರೀಯ ಕಾಂಗ್ರೆಸ್ಸಿನ ಗರ್ಭದಿಂದ ಎಂದರೆ ತಪ್ಪಾಗಲಾರದು. 1934ಕ್ಕಿಂತ ಮೊದಲು ಮಾರ್ಕ್ಸ್‌ವಾದ — ಸಮಾಜವಾದಗಳಲ್ಲಿ ನಂಬಿಕೆಯಿರುವವರು ಇದ್ದಿರಬಹುದಾದರೂ ಸಮಾಜವಾದಿ ಚಳುವಳಿ ಪ್ರಾರಂಭವಾಗಿದ್ದು 1934ರಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷದ ಸ್ಥಾಪನೆಯೊಂದಿಗೇ. ಈ ಸಮಾಜವಾದಿ ಚಳುವಳಿಯ ಪ್ರಾರಂಭಕ್ಕೆ ಪ್ರಮುಖವಾಗಿ ಮೂರು ಕಾರಣಗಳನ್ನು ನೋಡಬಹುದು. ''ಮೊದಲನೆಯದು, ಭಾರತದ ಸ್ವಾತಂತ್ರ್ಯಾಂದೋಲನದಲ್ಲಿ ಸಕ್ರಿಯವಾಗಿ ಭಾಗ ವಹಿಸುತ್ತಿದ್ದ ಹಲವಾರು ಮುಖಂಡರು ಮಾರ್ಕ್ಸ್‌ವಾದ — ಸಮಾಜವಾದಗಳ ಪ್ರಭಾವಕ್ಕೆ ಒಳಗಾಗಿದ್ದರು. ಎರಡನೆಯದು, 1932ರ ನಂತರ ಪ್ರಾರಂಭವಾಗಿದ್ದ ಕಾನೂನುಭಂಗ ಚಳುವಳಿ ತಣ್ಣಗಾಗಿ ದೇಶದಲ್ಲಿ ಹಾಗೂ ಕಾಂಗ್ರೆಸ್ಸಿನಲ್ಲಿ ಬಲಪಂಥೀಯರ ಪ್ರಭಾವ ಹೆಚ್ಚಾಗಲು ಪ್ರಾರಂಭವಾಗಿದ್ದು. ಮೂರನೇಯದು, ಕಾನೂನುಭಂಗ ಚಳುವಳಿಯಲ್ಲಿ ಬಂಧಿತರಾದ ಹಲವಾರು ಪ್ರಮುಖ ಸಮಾಜವಾದಿ ಮುಖಂಡರನ್ನು ಬ್ರಿಟಿಷರು ಅದೃಷ್ಟವಶಾತ್ ನಾಸಿಕ್ ಜೈಲಿನಲ್ಲಿ ಒಂದೆಡೆ ಇಟ್ಟಿದ್ದು'' (ಬಾಪು ಹೆದ್ದೂರ್ ಶೆಟ್ಟಿ, 1989, ಪು : 103).

[illegible]

[illegible]

ಇದೇ ರೀತಿಯಲ್ಲಿ ಸಮಾಜವಾದಿ ಸಂಘಟನೆಯನ್ನು ಕಟ್ಟಲು ಮುಂದೆ ಬಂದ ಇನ್ನೊಂದು ತಂಡವೆಂದರೆ ಕಾಶೀ ವಿದ್ಯಾಪೀಠದಲ್ಲಿ ಅಧ್ಯಾಪಕರಾಗಿದ್ದ ಆಚಾರ್ಯ ನರೇಂದ್ರದೇವ ಅಚ್ಯುತಪಟವರ್ಧನೆ ಸಂಪೂರ್ಣಾನಂದ ಮತ್ತು ಅವರ ಅನುಯಾಯಿಗಳು. ಹೀಗೆ ಒಂದು ಕಡೆ ಕಾಂಗ್ರೆಸ್ಸಿನ ಒಳಗಡೆಯಿಂದ ಹುಟ್ಟುತ್ತಿದ್ದ ಸಮಾಜವಾದಿ ಚಿಂತನೆ ಮತ್ತು ಕಾಶೀ ವಿದ್ಯಾಪೀಠದ ವಿದ್ವಾಂಸರುಗಳು ಭಾರತೀಯ ಸಮಾಜವಾದಿ ಪಕ್ಷ ಅರ್ಥಾತ್ ಕಾಂಗ್ರೆಸ್ ಸೋಷಲಿಸ್ಟ್ ಪಕ್ಷದ ಉಗಮಕ್ಕೆ ಅಸ್ತಿಭಾರ ಹಾಕಿದರೆಂದು ಹೇಳಬಹುದು. '' 1934ರಲ್ಲಿ ಆಗ ಎ.ಐ.ಸಿ.ಸಿ. ಸದಸ್ಯರಾಗಿದ್ದ ಸಂಪೂರ್ಣಾನಂದರು '' ಭಾರತಕ್ಕೊಂದು ಸಮಾಜವಾದಿ ಕಾರ್ಯಕ್ರಮ'' ಎಂಬ ಪುಸ್ತಿಕೆಯನ್ನು ಹೊರಡಿಸಿದರು. ಅವರ ಮೊದಲ ವಾಕ್ಯವು ದೇಶದಲ್ಲಿ ಬಹಳ ಮಂದಿ ಸಮಾಜವಾದಿಗಳಿದ್ದರೂ, ಅವರಲ್ಲಿ ಹಲವರು ಪ್ರಾಮಾಣಿಕ ಮಾರ್ಕ್ಸ್‌ವಾದಿಗಳಾದರೂ, ದೇಶಕ್ಕೆ ತಿಳಿದಿರುವ ಒಂದು ಕಾರ್ಯಕ್ರಮದನ್ವಯ ಅವರನ್ನೆಲ್ಲ ಸಂಘಟಿಸಿ, ಅವರ ಚಟುವಟಿಕೆಗಳನ್ನೆಲ್ಲ ಒಗ್ಗೂಡಿಸುವ ಒಂದು ಅಖಿಲ ಭಾರತ ಸಮಾಜವಾದಿ ಪಕ್ಷವಿಲ್ಲದಿರುವುದು ಅದೃಷ್ಟದ ವಿಪರ್ಯಾಸ'' (ಉದ್ಧೃತ: ಶಂಕರನಾರಾಯಣ ರಾವ್, 1991, ಪು: 283) ಎಂದು ಹೇಳುತ್ತದೆ. ಈ ಮೇಲಿನ ವಾಕ್ಯವು ಭಾರತದಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಒಂದು ಸಮಾಜವಾದಿ ಪಕ್ಷದ ಇರುವಿಕೆ ಅನಿವಾರ್ಯ ಎಂದು ಹೇಳುತ್ತದೆ.

1934ರ ಮೇ ತಿಂಗಳಿನಲ್ಲಿ ಪಾಟ್ನಾದಲ್ಲಿ ಸಮಾಜವಾದಿ ತತ್ವಗಳಿಗೆ ಬದ್ಧರಾಗಿದ್ದ ಕಾಂಗ್ರೆಸ್ ಕಾರ್ಯಕರ್ತರ ಸಮಾವೇಶ ನಡೆಯಿತು. ಅಲ್ಲಿ ಆಚಾರ್ಯ ನರೇಂದ್ರದೇವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಸೋಷಲಿಸ್ಟ್ ಪಕ್ಷ ಆರಂಭವಾಯಿತು.

ಭಾರತೀಯ ಸಮಾಜವಾದದ ಸೈದ್ಧಾಂತಿಕ ಸಂಕ್ರಮಣ:

ಪಕ್ಷ ಪ್ರಾರಂಭವಾದ 1934ರಿಂದ ಸುಮಾರು 1940ರವರೆಗೆ ಸಮಾಜವಾದಿ ಪಕ್ಷ ಮತ್ತು ಕಮ್ಯುನಿಸ್ಟರ ನಡುವೆ ಸೈದ್ಧಾಂತಿಕವಾಗಿ ಯಾವುದೇ ವ್ಯತ್ಯಾಸವಿರಲಿಲ್ಲ. 1939ರಲ್ಲಿ ಎರಡನೇ ಪ್ರಪಂಚ ಯುದ್ಧ ಪ್ರಾರಂಭವಾದಾಗ ಕಮ್ಯುನಿಸ್ಟರು ರಷ್ಯಾ ಹಾಗೂ ಅದರ ಮಿತ್ರರಾಷ್ಟ್ರಗಳನ್ನು ಬೆಂಬಲಿಸಿದರು. ಕೆಲ ಸಮಾಜವಾದಿ ನಾಯಕರೂ ಸಹ ಇದನ್ನೇ ಬೆಂಬಲಿಸಿದರು. ಆದರೆ ಇನ್ನುಳಿದ ಸಮಾಜವಾದಿಗಳು ಸಾಮ್ರಾಜ್ಯಶಾಹಿಯನ್ನು ಬೆಂಬಲಿಸಲು ಇಷ್ಟಪಡದೆ ತಮ್ಮದೇ ಸ್ವತಂತ್ರ ಅಸ್ತಿತ್ವವನ್ನು ಗುರುತಿಸಿಕೊಳ್ಳಲು ತಟಸ್ಥರಾಗಿ ರಾಷ್ಟ್ರೀಯ ಚಳುವಳಿಯತ್ತ ತಮ್ಮ ಗಮನವನ್ನು ಹರಿಸಲಾರಂಭಿಸಿದರು. ಕಮ್ಯುನಿಸ್ಟರು ಮತ್ತು ಸಮಾಜವಾದಿಗಳು ದೂರ ಸರಿಯುತ್ತಾ ಹೋದುದು ಇಲ್ಲಿಂದಲೆ. ಅಲ್ಲದೇ ಸಮಾಜವಾದಿಗಳು ತಮ್ಮ ಸ್ವತಂತ್ರ ಅಸ್ತಿತ್ವವನ್ನು ಹಾಗೂ ಸಿದ್ಧಾಂತವನ್ನು ಗುರುತಿಸಿಕೊಳ್ಳಲಾರಂಭಿಸಿದರು. 1936ರಲ್ಲಿ ಕಮಲಾದೇವಿ ಚಟ್ಟೋಪಾಧ್ಯಾಯರ ಅಧ್ಯಕ್ಷತೆಯಲ್ಲಿ ಮೀರಜ್‌ನಲ್ಲಿ ನಡೆದ ಸಮ್ಮೇಳನದಲ್ಲಿ ಪಕ್ಷ ಅಂಗೀಕರಿಸಿದ ನಿರ್ಣಯ ಹೀಗಿದೆ: ''ಪಕ್ಷದ ನೇತೃತ್ವ ಮಾರ್ಕ್ಸವಾದದ ಮೇಲೆ ಆಧಾರವಾಗಿದ್ದರೆ ಮಾತ್ರ ಅದು ಜನತೆಯ ನೇತೃತ್ವ ವಹಿಸಿಕೊಳ್ಳುವುದು ಸಾಧ್ಯವಾದೀತು. ಮಾರ್ಕ್ಸವಾದವೇ ಸಾಮ್ರಾಜ್ಯಶಾಹಿ — ವಿರೋಧಿ ಶಕ್ತಿಗಳನ್ನು ಅವುಗಳ ಅಂತಿಮ ಗುರಿಯವರೆಗೆ ಮುನ್ನಡೆಸಬಲ್ಲದು''(ಬಾಪೂಸಾಹೇಬ ಧಾಂಡೆ ಶಟ್ಟೆ, 1989, ಪು: 109—10). ಈ ವೇಳೆಯ ಹೇಳಿಕೆ, ಪ್ರಾರಂಭದಲ್ಲಿ ಸಮಾಜವಾದಿ ಪಕ್ಷ ಮತ್ತು ಕಮ್ಯುನಿಸ್ಟರ ನಡುವೆ ಎಷ್ಟು ಸಾಮ್ಯತೆಯಿತ್ತು ಎಂದು ಹೇಳಲು ಸ್ಪಷ್ಟವಾದ ಆಧಾರವಾಗಿದೆ.

1942ರ ವೇಳೆಗೆ ಪಕ್ಷದ ಸೈದ್ಧಾಂತಿಕತೆ ಪುನರ್ ವಿಮರ್ಶೆಗೊಳಪಡಲಾರಂಭಿಸಿತು. ಮಾರ್ಕ್ಸವಾದದೊಂದಿಗೆ ಜನತಾಂತ್ರಿಕ ಸಮಾಜವಾದ ಹಾಗೂ ಗಾಂಧೀವಾದವನ್ನು ಬೆಸೆಯುವ ಪ್ರಯತ್ನಗಳಲ್ಲಿಯೇ ಭಾರತದ ಸಮಾಜವಾದಿಗಳು

ತಮ್ಮ ಹೊಸ ಸೈದ್ಧಾಂತಿಕ ನೆಲೆಗಟ್ಟನ್ನು ಕಂಡುಕೊಂಡರು. ಭಾರತದ ಸಂದರ್ಭದಲ್ಲಿ ಬಂಡವಾಳವಾದ ಹಾಗೂ ಕಮ್ಯುನಿಜಂಗಳೆರಡೂ ಸಮಾನವಾಗಿ ಅಸಂಬದ್ಧವಾದ ಸಿದ್ಧಾಂತಗಳು ಎಂಬುದನ್ನು ಲೋಹಿಯಾ ತೋರಿಸಿ ಕೊಟ್ಟರು. ತಮ್ಮ 'ಒಳ್ಳೆಯತನಕ್ಕೆ ಪ್ರೇರಣೆಗಳು' ಎಂಬ ಪ್ರಬಂಧದಲ್ಲಿ ಜಯಪ್ರಕಾಶ್ ನಾರಾಯಣರು ತತ್ವಚಿಂತನೆಯ ದೃಷ್ಟಿಯಿಂದ ಭೌತಿಕವಾದವನ್ನು ತಿರಸ್ಕರಿಸಿದರು. ರೈತ ವರ್ಗವನ್ನು ಮಾರ್ಕ್ಸ್ ಪ್ರತಿಗಾಮಿ ವರ್ಗವೆಂದು ಕರೆದಿದ್ದರೂ, ಭಾರತದ ಸಂದರ್ಭದಲ್ಲಿ ಅದರ ಕ್ರಾಂತಿಕಾರಿ ಶಕ್ತಿಯನ್ನು ಮನಗಂಡ ಆಚಾರ್ಯ ನರೇಂದ್ರದೇವ 'ಕಿಸಾನ್ ಸಭೆ' ಯನ್ನು ಸಂಘಟಿಸಿದರು. ಸಾಮಂತಶಾಹಿ ಸಮಾಜ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಬದಲಿಸಲು ಈ ಕ್ರಾಂತಿಕಾರಿ ಶಕ್ತಿಯನ್ನು ಬಳಸಿಕೊಳ್ಳುವ ಉದ್ದೇಶದಿಂದ ಸಮಾಜವಾದಿಗಳು 'ಉಳುವವನಿಗೇ ಭೂಮಿ' ಎಂದು ಘೋಷಿಸಿದರು.

ಸಾಮಾಜಿಕ ಪರಿವರ್ತನೆಯ ಸಂದರ್ಭದಲ್ಲಿ ಜಾತಿ ವ್ಯವಸ್ಥೆಗಿದ್ದ ತೂಕವನ್ನು ಗಮನಿಸಿದ ಸಮಾಜವಾದಿಗಳು, ಭಾರತದಲ್ಲಿ ವರ್ಗ ಹಾಗೂ ಜಾತಿಗಳು ಸಮಾಂತರವಾಗಿರುವುದನ್ನು ತಮ್ಮ ಸಿದ್ಧಾಂತದಲ್ಲಿ ಜಾತಿ ಮೂಲ ವಿಶ್ಲೇಷಣೆಯನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸಿದರು. ಸಮಾಜವಾದಿಗಳ ಈ ದೃಷ್ಟಿಕೋನವನ್ನೇ ಜಡ್ಡುಗಟ್ಟಿದ ವರ್ಗವೇ ಜಾತಿ, ಸಡಿಲಗೊಂಡ ಜಾತಿಯೇ ವರ್ಗ ಎಂಬ ಸಮೀಕರಣದಲ್ಲಿ ಲೋಹಿಯಾ ಸೆರೆ ಹಿಡಿದಿಟ್ಟರು. ಯುರೋಪಿನ ಸಮಾಜವಾದಿಗಳ ಸಮಾನ ಅವಕಾಶಗಳ ಕಲ್ಪನೆ ಭಾರತದ ಜಾತಿ ವ್ಯವಸ್ಥೆಯ ಸಂದರ್ಭದಲ್ಲಿ ಸಾಲದು ಎಂಬುದನ್ನರಿತ ಭಾರತೀಯ ಸಮಾಜವಾದಿಗಳು ದಲಿತರಿಗೆ ವಿಶೇಷ ಅವಕಾಶಗಳನ್ನು ನೀಡಬೇಕೆಂದು ಅಭಿಪ್ರಾಯ ಪಟ್ಟರು. ಮಾರ್ಕ್ಸ್‌ವಾದಿಗಳ ಕೇಂದ್ರೀಕರಣ ಆಡಳಿತ ವ್ಯವಸ್ಥೆಯ ಬದಲಾಗಿ ಯುರೋಪಿನ ಜನ ತಾಂತ್ರಿಕ ಸಮಾಜವಾದಿಗಳ ವಿಕೇಂದ್ರೀಕರಣವನ್ನು ಮೈಗೂಡಿಸಿಕೊಂಡರು.

[illegible]

[illegible]

[illegible]

ರಾಜಕೀಯ ವಿಕೇಂದ್ರೀಕರಣಕ್ಕೆ ಸಹಾಯಕವಾಗುವಂತೆ ಮಹಾತ್ಮಗಾಂಧಿಯ
ಚರಕದ ಕಲ್ಪನೆಯನ್ನೇ ಆಧುನಿಕ ಉತ್ಪಾದನಾ ವಿಧಾನಗಳಿಗೆ ಹೆಚ್ಚು ಸಂಬಂಧ
ಗೊಳಿಸಿದ ಲೋಹಿಯಾ ಸಣ್ಣ ಯಂತ್ರಗಳ ಹೊಸ ಆರ್ಥಿಕ ವ್ಯವಸ್ಥೆ
ಯೊಂದನ್ನು ಪರಿಕಲ್ಪಿಸಿದರು.

ಹೀಗೆ ಭಾರತೀಯ ಸಂದರ್ಭ, ಇಲ್ಲಿನ ಸಾಮಾಜಿಕ ರಚನೆ, ಸಂಸ್ಕೃತಿ,
ಕೃಷಿ ಪ್ರಧಾನ ಆರ್ಥಿಕ ವ್ಯವಸ್ಥೆ, ಇತ್ಯಾದಿಗಳನ್ನು ಗಮನದಲ್ಲಿಟ್ಟುಕೊಂಡ
ಲೋಹಿಯಾ, ಜಯಪ್ರಕಾಶ್ ನಾರಾಯಣರಂತಹ ಸಮಾಜವಾದಿ ಮುಖಂಡರು
ಭಾರತೀಯ ಪರಿಸ್ಥಿತಿಗನುಗುಣವಾಗಿ ಸಮಾಜವಾದಿ ಸಿದ್ಧಾಂತವನ್ನು ಪರಿಷ್ಕೃತ
ಗೊಳಿಸಿ, ಅದಕ್ಕೆ ದೇಶೀಯತೆಯನ್ನು ತೊಡಿಸಿದ್ದನ್ನು ನಾವು ನೋಡಬಹುದು.

ಹೀಗೆ ಸೈದ್ಧಾಂತಿಕವಾಗಿ ಸಮಾಜವಾದಕ್ಕೆ ಹೊಸ ರೂಪವನ್ನಿತ್ತ ಸಮಾಜ
ವಾದಿಗಳು, 1942ರ 'ಚಲೇಜಾವ್' ಚಳುವಳಿಯಲ್ಲಿ ಗಮನಾರ್ಹ ಪಾತ್ರ ವಹಿಸುವ
ಮೂಲಕ ಪ್ರವರ್ಧಮಾನಕ್ಕೆ ಬಂದರು. ಕಾಂಗ್ರೆಸ್ ಮುಖಂಡರನೇಕರು ಬೇಗನೆ
ಬಂಧನಕ್ಕೊಳಗಾದಾಗ ಸಮಾಜವಾದಿಗಳು ಈ ಚಳುವಳಿಯನ್ನು ಯಶಸ್ವಿ
ಯಾಗಿ ನಿರ್ವಹಿಸಿದ್ದರು. ಇವರು ಹೋರಾಟದ ವೇಳೆಯಲ್ಲಿ ಹಿಂಸೆಯೋ —
ಅಹಿಂಸೆಯೋ ಒಟ್ಟಾರೆ ಚಳುವಳಿಯನ್ನು ತೀವ್ರಗೊಳಿಸಿ ಯಶಸ್ವಿಗೊಳಿಸಿದ್ದರು.
ಇದೇ ವೇಳೆಯಲ್ಲಿ ಬ್ರಿಟೀಷ್ ಸರ್ಕಾರ ಪಕ್ಷವನ್ನು ಬಹಿಷ್ಕರಿಸಿತ್ತು.

1946ರಲ್ಲಿ ಬ್ರಿಟೀಷ್ ಸರ್ಕಾರ ಪಕ್ಷದ ಮೇಲೆ ವಿಧಿಸಿದ್ದ ಬಹಿಷ್ಕಾರವನ್ನು
ರದ್ದುಗೊಳಿಸಿತು. ಈ ವೇಳೆಗಾಗಲೇ ಪ್ರವರ್ಧಮಾನಕ್ಕೆ ಬಂದಿದ್ದ ಸಮಾಜ
ವಾದಿಗಳು ಕಾಂಗ್ರೆಸ್ಸಿನೊಡನೆ ಮುಂದುವರಿಯಬೇಕೋ ಬೇಡವೋ ಎಂದು
ನಿರ್ಧರಿಸುವ ಹಂತತಲುಪಿದ್ದರು. 1947ರ ಫೆಬ್ರುವರಿ 28ರಂದು ಕಾನ್ಪುರದಲ್ಲಿ
ನಡೆದ ಯುದ್ಧೋತ್ತರ ಪ್ರಥಮ ಸಮ್ಮೇಳನದಲ್ಲಿ ಸಮಾಜವಾದಿಗಳು ತಾತ್ವಿಕ
ನಿಲುವನ್ನು ಪುನರುಚ್ಚರಿಸಿ, ತಮ್ಮ ಸಂಘಟನೆಯ ಹೆಸರಿನೊಂದಿಗಿದ್ದ ಕಾಂಗ್ರೆಸ್

ಶಬ್ದವನ್ನು ತೆಗೆದುಹಾಕಿದರು. ಅವರ ಸಂಘಟನೆ ಭಾರತದ ಸೋಷಲಿಸ್ಟ್ ಪಕ್ಷ ವಾಯಿತು.

ಸ್ವಾತಂತ್ರ್ಯೋತ್ತರ ಬೆಳವಣಿಗೆ :

1947ರಲ್ಲಿ ದೇಶ ಸ್ವತಂತ್ರವಾದ ನಂತರ ಭಾರತದ ರಾಜಕೀಯದಲ್ಲಿ ಗಮನಾರ್ಹ ಬದಲಾವಣೆಗಳಾದವು. ಸ್ವಾತಂತ್ರ್ಯನಂತರ ಕಾಂಗ್ರೆಸ್ಸನ್ನು ಒಂದು ಸಾಮಾಜಿಕ ಸಂಘಟನೆಯಾಗಿ ಮಾಡಬೇಕೆಂದು ಇಚ್ಛಿಸಿದ್ದ ಗಾಂಧಿಯವರ ಕನಸು ನನಸಾಗದೆ ಕಾಂಗ್ರೆಸ್ ಒಂದು ರಾಜಕೀಯ ಪಕ್ಷವಾಯಿತು. 1948ರಲ್ಲಿ ಕಾಂಗ್ರೆಸ್ ಪಕ್ಷ ತನ್ನ ಸಂವಿಧಾನದಲ್ಲಿ ಬದಲಾವಣೆ ಮಾಡಿ ಪ್ರತ್ಯೇಕ ಸದಸ್ಯತ್ವ, ಸಂವಿಧಾನ ಹಾಗೂ ಕಾರ್ಯಕ್ರಮಗಳಿರುವ ಬೇರೆ ಯಾವುದೇ ರಾಜಕೀಯ ಪಕ್ಷದಲ್ಲಿ ಸದಸ್ಯರಾಗಿಲ್ಲದವರಿಗೆ ಮಾತ್ರ ಕಾಂಗ್ರೆಸ್ ಸದಸ್ಯತ್ವ ಲಭ್ಯ ಎಂದು ನಿರ್ಣಯಿಸಿತು. ಈ ರೀತಿಯ ಬೆಳವಣಿಗೆಯನ್ನು ಮೊದಲೇ ಊಹಿಸಿದ್ದ ಸಮಾಜವಾದಿಗಳು ಕಾಂಗ್ರೆಸ್ ಪಕ್ಷದಿಂದ ಹೊರಬರಲು ನಿರ್ಧರಿಸಿದರು. ಜೊತೆಗೆ ಬೇರೊಂದು ಪಕ್ಷದಲ್ಲಿದ್ದು ತಮ್ಮ ಸಿದ್ಧಾಂತವನ್ನು ಉಳಿಸಿಕೊಂಡು ಹೋಗುವುದು ಕಷ್ಟವೆಂದು ಅರಿತಿದ್ದ ಸಮಾಜವಾದಿಗಳಿಗೆ ಸ್ವತಂತ್ರ ಪಕ್ಷ ಕಟ್ಟುವುದು ಅನಿವಾರ್ಯವೇ ಆಗಿತ್ತು.

1948ರಲ್ಲಿ ನಾಸಿಕದಲ್ಲಿ ಸಭೆ ಸೇರಿದ ಸಮಾಜವಾದಿಗಳು ಸ್ವತಂತ್ರ ಸೋಷಲಿಸ್ಟ್ ಪಕ್ಷವನ್ನು ಸ್ಥಾಪಿಸಿದರು. 1949ರಲ್ಲಿ ಪಾಟ್ನಾದಲ್ಲಿ ನಡೆದ ಸಮ್ಮೇಳನದಲ್ಲಿ ಪಕ್ಷ ಹೊಸ ಸಂವಿಧಾನವನ್ನು ಅಂಗೀಕರಿಸಿತು. ಕಾರ್ಮಿಕರು, ರೈತರು, ಮಹಿಳೆಯರು, ಯುವ ಜನರು ಹಾಗೂ ಇನ್ನಿತರ ಸಂಸ್ಥೆಗಳನ್ನು ಅಂಗ ಸಂಸ್ಥೆಗಳನ್ನಾಗಿ ಮಾಡಿಕೊಳ್ಳಲು ನಿರ್ಧರಿಸಲಾಯಿತು. ಈ ಕಾರಣದಿಂದ 1948ರಲ್ಲಿ 'ಹಿಂದ್ ಮಜ್ದೂರ್ ಸಭಾ' ಎಂಬ ಕಾರ್ಮಿಕ ಸಂಘಟನೆ ಆರಂಭಗೊಂಡಿತು. ಇದಕ್ಕೆ ಅಶೋಕ್ ಮೆಹತಾ ಅವರು ಪ್ರಧಾನ ಕಾರ್ಯದರ್ಶಿಗಳಾದರು. 1949ರಲ್ಲಿ ಕಿಸಾನ್ ಸಭಾ ಎಂಬ ರೈತ ಸಂಘಟನೆಯನ್ನು ಸಹಾ ಪ್ರಾರಂಭಿಸಲಾಯಿತು.

[illegible]

[illegible]

[illegible]

[illegible]

ಹೀಗೆ ಸ್ವತಂತ್ರ ಅಸ್ತಿತ್ವ ಕಂಡುಕೊಂಡ ಸಮಾಜವಾದಿಗಳು 1952 ರಲ್ಲಿ ಮೊಟ್ಟಮೊದಲ ಸಾರ್ವತ್ರಿಕ ಚುನಾವಣೆಯನ್ನು ಎದುರಿಸಲು ಸಿದ್ಧರಾದರು . ಪ್ರಥಮ ಸಾರ್ವತ್ರಿಕ ಚುನಾವಣೆಯಲ್ಲಿ ಎರಡನೇ ಅತಿದೊಡ್ಡ ಪಕ್ಷವಾಗುವ ಕನಸುಕಂಡಿದ್ದ ಸಮಾಜವಾದಿಗಳು ನಿರೀಕ್ಷಿಸಿದಷ್ಟು ಯಶಸ್ವಿಯಾಗಲಿಲ್ಲ. 1952ರ ಚುನಾವಣೆಯ ಸೋಲಿಗೆ ಕಾರಣ ಹುಡುಕಲು ಅದೇ ವರ್ಷ ಪಂಚಮಡಿಯಲ್ಲಿ ವಿಶೇಷ ಸಮ್ಮೇಳನ ಕರೆದು ಪಕ್ಷದ ಚಟುವಟಿಕೆಗಳಲ್ಲಿ ಆಮೂಲಾಗ್ರ ಬದಲಾವಣೆ ಮಾಡಲು ನಿರ್ಧರಿಸಲಾಯಿತು. ಹಾಗೂ ಪಕ್ಷವನ್ನು ಬಲಪಡಿಸುವ ಉದ್ದೇಶದಿಂದ ಸಮಾನ ಆಸಕ್ತಿ ಹೊಂದಿರುವ ಇತರೆ ಪಕ್ಷಗಳನ್ನು ಪಕ್ಷದಲ್ಲಿ ಸೇರಿಸಿಕೊಳ್ಳುವ ನಿರ್ಣಯ ಕೈಗೊಳ್ಳಲಾಯಿತು. ಸೋಷಲಿಸ್ಟ್ ಪಕ್ಷದ ಧೋರಣೆಗೆ ಹತ್ತಿರವಾಗಿದ್ದ ಕಿಸಾನ ಮಜ್ದೂರ್ ಪ್ರಜಾಪಾರ್ಟಿಯನ್ನು ಪಕ್ಷದಲ್ಲಿ ಸೇರಿಸಿಕೊಂಡು ಹೊಸಪಕ್ಷಕ್ಕೆ ಪ್ರಜಾ ಸೋಷಲಿಸ್ಟ್ ಪಕ್ಷ ಎಂದು ಪುನರ್ ನಾಮಕರಣ ಮಾಡಲಾಯಿತು.

1952ರ ನಂತರ ಸಮಾಜವಾದಿ ಆಂದೋಲನದ ಇತಿಹಾಸ ಅಷ್ಟೇನೂ ಆಶಾದಾಯಕವಾಗಿಲ್ಲವೆನ್ನಬಹುದು. 1953ರಲ್ಲಿ ಟ್ರಾವೆಂಕೂರ ಕೊಚ್ಚಿನ ರಾಜ್ಯದಲ್ಲಿ ಇತರೆ ಪಕ್ಷಗಳ ಸಹಾಯದಿಂದ ಅಧಿಕಾರಕ್ಕೆ ಬಂದ ಪ್ರಜಾ ಸೋಷಲಿಸ್ಟ್ ಪಕ್ಷ, ಅದೇ ವರ್ಷ ಆಗಸ್ಟ್ 11 ರಂದು ತಮಿಳು ಜನತೆಯ ವಿಮೋಚನಾ ಹೋರಾಟಗಾರರ ಮೇಲೆ ಗೋಲಿಬಾರ್ ಮಾಡಿತೆಂಬ ಕಾರಣಕ್ಕಾಗಿ ಪ್ರಜಾ ಸೋಷಲಿಸ್ಟ್ ಪಕ್ಷದ ರಾಷ್ಟ್ರನಾಯಕರಲ್ಲೇ ಭಿನ್ನಾಭಿಪ್ರಾಯ ಪ್ರಾರಂಭವಾಯಿತು. ಪಕ್ಷ ಅಧಿಕಾರವನ್ನು ತ್ಯಜಿಸಬೇಕೋ ಬೇಡವೋ ಎಂಬ ಸಣ್ಣ ಕಲಹ ಪಕ್ಷದ ಒಡಕಿಗೆ ಕಾರಣವಾಯಿತು. ಇಲ್ಲಿಂದ ಮುಂದೆ ನಿರಂತರವಾಗಿ ಆಂತರಿಕ ಘರ್ಷಣೆ, ವಿಲೀನಕ್ಕೆ ಪ್ರಯತ್ನ — ಇಂತಹ ಪ್ರಯತ್ನಗಳಲ್ಲಿ ಸಮಾಜವಾದಿಗಳು ತಮ್ಮ ಹೆಚ್ಚಿನ ಸಮಯವನ್ನು ವ್ಯಯಿಸಿದರು.

1954 ರಲ್ಲಿ ಪಕ್ಷ ಎರಡು ಹೋಳಾಗಿ ಪ್ರಜಾ ಸೋಷಲಿಸ್ಟ್ ಪಕ್ಷ ಮತ್ತು ಸೋಷಲಿಸ್ಟ್ ಪಕ್ಷಗಳಾದವು. 1964 ರಲ್ಲಿ ಎರಡೂ ಪಕ್ಷಗಳು ಒಂದಾಗಿ ಸಂಯುಕ್ತ ಸೋಷಲಿಸ್ಟ್ ಪಕ್ಷವಾಯಿತು. ಇದನ್ನು ಸೇರಲು ಬಯಸದ ಒಂದು ಗುಂಪು ಪ್ರಜಾ ಸೋಷಲಿಸ್ಟ್ ಪಕ್ಷ ಎಂಬ ಹೆಸರಿನಲ್ಲಿ ಮುಂದುವರಿಯಿತು. ಈ ರೀತಿ ಆಂತರಿಕ ಭಿನ್ನಾಭಿಪ್ರಾಯಗಳು ಮುಂದುವರಿಯುತ್ತಲೇ ಹೋದವು. 1975 ರಲ್ಲಿ ತುರ್ತುಪರಿಸ್ಥಿತಿ ಘೋಷಣೆಯಾದಾಗ ಸಮಾಜವಾದಿಗಳು ಅದನ್ನು ಸಮರ್ಥವಾಗಿ ವಿರೋಧಿಸಿದರಾದರೂ ಒಂದು ಶಕ್ತಿಯಾಗಿ ಬೆಳೆಯಲಾಗಲಿಲ್ಲ. ಇದಕ್ಕೆ ಕಾರಣ ಲೋಹಿಯಾ ಆಗಲೇ ಮರಣಹೊಂದಿದ್ದರು. ಜಯಪ್ರಕಾಶ ನಾರಾಯಣ್ ಸರ್ವೋದಯ ಚಳುವಳಿಯತ್ತ ತಮ್ಮ ಗಮನ ಹರಿಸಿದ್ದರು. ಇನ್ನುಳಿದ ಮುಖಂಡರು ಸತತ ಆಂತರಿಕ ಘರ್ಷಣೆಯಿಂದ ಬೇಸತ್ತು ಉತ್ಸಾಹ ಕಳೆದುಕೊಂಡಿದ್ದರು. ಅಂತಿಮವಾಗಿ ಕಾಂಗ್ರೆಸ್ಸೇತರ ಶಕ್ತಿಯನ್ನು ಬಲಪಡಿಸುವ ಉದ್ದೇಶದಿಂದ 1977 ರಲ್ಲಿ ಜನತಾ ಪಕ್ಷದಲ್ಲಿ ವಿಲೀನವಾಗುವುದರ ಮುಖಾಂತರ ತಮ್ಮ ಸ್ವತಂತ್ರ ಅಸ್ತಿತ್ವವನ್ನು ಕಳೆದುಕೊಂಡರು. ಇದನ್ನು ಒಪ್ಪದೆ ಸಮಾಜವಾದಿ ಆಂದೋಲನದಲ್ಲಿ ಅಚಲ ವಿಶ್ವಾಸ ಹೊಂದಿದ್ದ ಕೆಲವು ಮುಖಂಡರು ತಟಸ್ಥರಾದರು.

1934 ರಿಂದ 1977ರ ವರೆಗೆ ಭಾರತದಲ್ಲಿ ಬೆಳೆದುಬಂದ ಸಮಾಜವಾದಿ ಚಳುವಳಿ ಸಾಧಿಸಿದ್ದು ಏನು ಎಂಬ ಪ್ರಶ್ನೆ ಹುಟ್ಟುತ್ತದೆ. ಇಂತಹ ಪ್ರಶ್ನೆಗಳಿಗೆ ಉತ್ತರ ಹುಡುಕುತ್ತ ಸಾಲೆರೋನ ರವರು, '' ಕಾಂಗ್ರೆಸ್ ಪಕ್ಷ ಅವರ ಎಲ್ಲಾ ಘೋಷಣೆಗಳನ್ನು ಕದ್ದುಕೊಂಡಿದ್ದು ಅಂಶತಃ ಸಮಾಜವಾದಿಗಳ ಸೋಲಿಗೆ ಕಾರಣವಾಯಿತು. ಕಾಂಗ್ರೆಸ್ಸು ಸಮಾಜವಾದಿಯಾಗ ತೊಡಗಿದಾಗ ಕಮ್ಯುನಿಸ್ಟರು ಗೌರವಸ್ಥರಾಗ ತೊಡಗಿದಾಗ ಸಮಾಜವಾದಿಗಳಿಗೆ ಯಾವ ಸ್ಥಾನವೂ ಉಳಿಯಲಿಲ್ಲ. ಕಾಂಗ್ರೆಸ್ ಸಮಾಜವಾದ ಹಾಗೂ ಕಮ್ಯುನಿಸ್ಟ್ ಸಮಾಜವಾದಗಳ ಗೊಂದಲದಲ್ಲಿ ಸಮಾಜವಾದವನ್ನು ಪ್ರಚಾರ ಮಾಡುವ ಕಠಿಣ ಹೊಣೆ ಇವರ ಮೇಲೆ ಬಿದ್ದಿತು ಎನ್ನುತ್ತಾರೆ. (ಉದ್ಧೃತ: ಬಾಪು ಹೆದ್ದೂರ್ ಶೆಟ್ಟಿ, 1989, ಪು: 107). ಈ ಮಾತು ಅಕ್ಷರಶಃ ವಾಸ್ತವವಾಗಿದ್ದು ಭಾರತೀಯ ಸಮಾಜವಾದ ಬದುಕಿಬಾಳಿದ ಗೊಂದಲಕ್ಕೆ ಹಿಡಿದ ಕೈಗನ್ನಡಿಯಂತಿದೆ.

[illegible]

[illegible]

ಸಮಾಜವಾದಿಗಳು ರಾಷ್ಟ್ರಮಟ್ಟದಲ್ಲಿ ಅಧಿಕಾರಕ್ಕೆ ಬರದಿದ್ದರೂ ಆಳುವ ಪಕ್ಷಗಳ ಮೇಲೆ ಪ್ರಭಾವ ಬೀರುವುದರ ಮೂಲಕ ಪರೋಕ್ಷವಾಗಿ ಸುಧಾರಣೆಗಳನ್ನು ತರುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಸೋಷಲಿಸ್ಟ್ ಪಕ್ಷ ಒಂದು ಹೋರಾಟಮಯ ಸಂಘಟನೆಯಾಗಿ ಹಲವಾರು ಹೋರಾಟಗಳನ್ನು ನಡೆಸಿ ಯಶಸ್ವಿಯಾಗಿದೆ. ಉದಾಹರಣೆಗೆ, ಜಯಪ್ರಕಾಶ ನಾರಾಯಣರ ನೇತೃತ್ವದಲ್ಲಿ ನಡೆದ ಅಂಚೆ ಮತ್ತು ತಂತಿ ಇಲಾಖೆಯ ನೌಕರರ ಹೋರಾಟ, ನಾಥ ಪೈ ನೇತೃತ್ವದಲ್ಲಿ ನಡೆದ ಕೇಂದ್ರ ಸರಕಾರಿ ನೌಕರರ ಹೋರಾಟ, ಜಾರ್ಜಫರ್ನಾಂಡಿಸರ ನೇತೃತ್ವದಲ್ಲಿ ನಡೆದ ರೈಲ್ವೆ ಕಾರ್ಮಿಕರ ಹೋರಾಟ, ಕರ್ನಾಟಕದಲ್ಲಿ ನಡೆಸಿದ ಭೂ ಹೋರಾಟಗಳಾದ ಕಾಗೋಡು ಮತ್ತು ಸಂಡೂರು ಸತ್ಯಾಗ್ರಹ ಮುಂತಾದವು.

ಭಾರತೀಯ ಸಮಾಜವಾದಿ ಆಂದೋಲನ ಹಲವಾರು ಏಳುಬೀಳುಗಳ ನಡುವೆಯೂ ಚರಿತ್ರೆಯಲ್ಲಿ ತನ್ನದೇ ಆದ ಮಹತ್ವದ ಸ್ಥಾನವನ್ನು ಹೊಂದಿದೆಯೆಂದು ಹೇಳಲು ಅಡ್ಡಿಯಿಲ್ಲ.

ಅಧ್ಯಾಯ : 4

ಶಿವಮೊಗ್ಗ ಜಿಲ್ಲೆಯಲ್ಲಿ ಸಮಾಜವಾದಿ ಚಟುವಟಿಕೆಗಳ ಪ್ರಾರಂಭಿಕ ಹಂತ

4. ಶಿವಮೊಗ್ಗ ಜಿಲ್ಲೆಯಲ್ಲಿ ಸಮಾಜವಾದಿ ಚಟುವಟಿಕೆಗಳ ಪ್ರಾರಂಭಿಕ ಹಂತ

ಅಖಿಲ ಭಾರತ ಮಟ್ಟದಲ್ಲಿ ಸಮಾಜವಾದಿ ಚಟುವಟಿಕೆಗಳು 1920ರ ವೇಳೆಗೆ ಕಾಣಿಸಿಕೊಳ್ಳಲಾರಂಭಿಸಿದುದನ್ನು ಈಗಾಗಲೇ ಪ್ರಸ್ತಾಪಿಸಿದೆ. ಕರ್ನಾಟಕದಲ್ಲೂ ಸಮಾಜವಾದಿ ಚಟುವಟಿಕೆಗಳು ಇದೇ ವೇಳೆಗೆ ಕಾಣಿಸಿಕೊಳ್ಳಲಾರಂಭಿಸಿದುವು. ಇಂದಿನ ಕರ್ನಾಟಕ ಆಗಿನ್ನೂ ಭೌಗೋಳಿಕವಾಗಿ ಒಂದೇ ಸರ್ಕಾರದ ಆಳ್ವಿಕೆಗೊಳಪಟ್ಟಿರಲಿಲ್ಲ ಹಾಗೂ ಕರ್ನಾಟಕ ಎಂಬ ಹೆಸರನ್ನು ಪಡೆದಿರಲಿಲ್ಲ. ಸ್ವಾತಂತ್ರ್ಯಪೂರ್ವದಲ್ಲಿ ಈಗಿನ ಕರ್ನಾಟಕದ ಪ್ರದೇಶ ಮುಖ್ಯವಾಗಿ ನಾಲ್ಕು ಸರ್ಕಾರಗಳ ಅಧೀನಕ್ಕೊಳಪಟ್ಟಿತ್ತು. ಈಗಿನ ದಕ್ಷಿಣ ಕರ್ನಾಟಕ ಮೈಸೂರು ಸಂಸ್ಥಾನ ಆಳ್ವಿಕೆಗೊಳಪಟ್ಟು ಮೈಸೂರು ರಾಜ್ಯವಾಗಿದ್ದರೆ, ಉತ್ತರ ಕರ್ನಾಟಕದ ಭೂಭಾಗ ಹಾಗೂ ಕರಾವಳಿ ಜಿಲ್ಲೆಗಳು, ಮುಂಬೈ ಮತ್ತು ಮದ್ರಾಸ್ ಪ್ರೆಸಿಡೆನ್ಸಿಗಳು ಹಾಗೂ ಹೈದರಾಬಾದ್ ಸಂಸ್ಥಾನಗಳ ನಡುವೆ ಹಂಚಿಹೋಗಿದ್ದುವು.

ಕರ್ನಾಟಕದಲ್ಲಿ ಮೊದಲು ಸಮಾಜವಾದಿ ಚಿಂತನೆಗಳ ಪ್ರಭಾವಕ್ಕೊಳಗಾಗಿದ್ದುದು ಬ್ರಿಟಿಷ್ ನೇರ ಆಳ್ವಿಕೆಯಲ್ಲಿದ್ದ ಮುಂಬೈ ಕರ್ನಾಟಕ. ಈ ಪ್ರದೇಶದಲ್ಲಿ 30ರ ದಶಕದಲ್ಲಿ ಸಮಾಜವಾದಿ ಚಟುವಟಿಕೆಗಳು ಪ್ರಾರಂಭವಾಗಿದ್ದುವು. ದಿನಕರ ದೇಸಾಯಿಯವರು ಉತ್ತರ ಕನ್ನಡ ಜಿಲ್ಲೆಯಲ್ಲಿ ಮೊದಲಿಗೆ ಸಮಾಜವಾದಿ ಬೀಜವನ್ನು ಬಿತ್ತಿದ್ದರು. ಇವರು ಬಡಗೇಣಿ ರೈತರ ಸಂಘಟನೆಯಲ್ಲಿ ತೊಡಗಿ ಬಲಿಷ್ಠ ರೈತ ಸಂಘಟನೆ ಕಟ್ಟಿದರು. ಇದನ್ನು ಸಹಿಸದ ಸರ್ಕಾರ ಇವರನ್ನು ಗಡೀಪಾರು ಮಾಡಿತು. ಇವರ ನಂತರ ಗಿರಿಪಿಕಳೆಯವರು ರೈತ ಸಂಘಟನೆಯನ್ನು ಸಮರ್ಥವಾಗಿ ಮುಂದುವರಿಸಿ ಅನೇಕ ಚಳುವಳಿಯನ್ನು ನಡೆಸಿದರು.

ಉತ್ತರ ಕನ್ನಡ ಜಿಲ್ಲೆಯ ಪಕ್ಕದ ಜಿಲ್ಲೆಯಾದ ಶಿವಮೊಗ್ಗ ಜಿಲ್ಲೆಯಲ್ಲಿ ಸಮಾಜವಾದಿ ಚಿಂತನೆಗಳು ಇದೇ ವೇಳೆಗೆ ಕಾಣಿಸಿಕೊಳ್ಳಲಾರಂಭಿಸಿದುವು. ಶಿವಮೊಗ್ಗ ಜಿಲ್ಲೆ ಮೈಸೂರು ಸಂಸ್ಥಾನದ ಭಾಗವಾಗಿದ್ದರೂ ಮುಂಬೈ ಕರ್ನಾಟಕ ಪ್ರದೇಶಕ್ಕೆ

[illegible]

[illegible]

[illegible]

ಹೊಂದಿಕೊಂಡಿದ್ದರಿಂದ ಸಹಜವಾಗಿಯೇ ಸಮಾಜವಾದದ ಪ್ರಭಾವ ಜಿಲ್ಲೆಯ ಮೇಲೆ ಆಗಿತ್ತು.

ಶಿವಮೊಗ್ಗ ಜಿಲ್ಲೆಯಲ್ಲಿ ಸಮಾಜವಾದಿ ವಿಚಾರಗಳಿಂದ ಪ್ರಭಾವಿತರಾಗಿದ್ದವರೆಲ್ಲ ಸಾಮಾನ್ಯವಾಗಿ ತರುಣರು. ಇವರೆಲ್ಲ ಭಾರತದ ರಾಷ್ಟ್ರೀಯ ಕಾಂಗ್ರೆಸ್ಸಿನ ಸಹ ಸಂಘಟನೆಯಾಗಿದ್ದ ವಿದ್ಯಾರ್ಥಿ ಕಾಂಗ್ರೆಸ್ಸಿನ ಸದಸ್ಯರಾಗಿದ್ದರು. ಇವರು ಸ್ವಾತಂತ್ರ್ಯ ಹೋರಾಟದ ಜೊತೆಜೊತೆಗೆ ಸಮಾಜವಾದಿ ಸಿದ್ಧಾಂತದ ಆಧಾರದ ಮೇಲೆ ಹೊಸ ರಾಷ್ಟ್ರ ಕಟ್ಟುವ ಕ್ರಾಂತಿಕಾರಿ ವಿಚಾರಗಳಿಂದ ಕೂಡಿದವರಾಗಿದ್ದರು. ವಿದ್ಯಾರ್ಥಿ ಕಾಂಗ್ರೆಸ್ಸಿನ ಹೆಚ್ಚಿನ ಸದಸ್ಯರು ಕಾಂಗ್ರೆಸ್ ಸಮಾಜವಾದಿಗಳ ಅನುಯಾಯಿಗಳೇ ಆಗಿದ್ದರು. ಈ ವಿದ್ಯಾರ್ಥಿ ಕಾಂಗ್ರೆಸ್ಸಿನ ಪ್ರಮುಖ ಮುಂದಾಳುಗಳೆಂದರೆ ಶಾಂತವೇರಿ ಗೋಪಾಲಗೌಡ, ಎಂ.ಆರ್.ಪರಮೇಶ್ವರಪ್ಪ, ಖಾದ್ರಿ ಶಾಮಣ್ಣ, ಬಿ.ಸು. ಕೃಷ್ಣಮೂರ್ತಿ, ನಾಗಭೂಷಣ, ಎಸ್.ಕೆ. ಎಂ, ಕೋ.ನ. ಕಾರಂತ, ಜಿ.ಸದಾಶಿವರಾವ್, ಬಿ.ಎಸ್.ಚಂದ್ರಶೇಖರ ಇನ್ನೂ ಮುಂತಾದವರು. ಇವರಲ್ಲಿ ಹೆಚ್ಚಿನವರು ಶಿವಮೊಗ್ಗ ಜಿಲ್ಲೆಯವರಾಗಿದ್ದರು.

ವಿದ್ಯಾರ್ಥಿ ಕಾಂಗ್ರೆಸ್ ಪ್ರಬಲ ಶಕ್ತಿಯಾಗಿ ಹೊರಹೊಮ್ಮಿದ್ದು 1942 ರ ಚಲೇಜಾವ್ ಚಳುವಳಿಯ ಸಂದರ್ಭದಲ್ಲಿ. ರಾಷ್ಟ್ರಮಟ್ಟದಲ್ಲಿ ಹೆಸರಾದ ಈಸೂರು ದುರಂತ ಒಂದೆಡೆಯಾದರೆ, ವಿದ್ಯಾರ್ಥಿ ಕಾಂಗ್ರೆಸ್ಸಿನ ಯಶಸ್ವೀ ಹೋರಾಟ ಇನ್ನೊಂದೆಡೆ ಎಂ.ಆರ್. ಪರಮೇಶ್ವರಪ್ಪ ಶಿವಮೊಗ್ಗ ನಗರದಲ್ಲಿ ಯಶಸ್ವಿ ವಿದ್ಯಾರ್ಥಿ ಮುಷ್ಕರಗಳನ್ನು ನಡೆಸಿದರು. ಗೋಪಾಲಗೌಡರು ತೀರ್ಥಹಳ್ಳಿಯ ಬಳಿಯ ಬಸವಾನಿಯಲ್ಲಿ ಸ್ನೇಹಿತರಾದ ಶಾಮೆಯ್ಯ ಧ್ಯಾಳ್, ಬಸವಾನಿ ರಾಮಶರ್ಮ ಮುಂತಾದವರೊಡಗೂಡಿ ಬೃಹತ್ ಪ್ರಮಾಣದಲ್ಲಿ ಟೆಲಿಗ್ರಾಫ್ ತಂತಿಯನ್ನು ಕಿತ್ತುಹಾಕಿದರು. ಹೀಗೆ ವಿದ್ಯಾರ್ಥಿ ಕಾಂಗ್ರೆಸ್ ತನ್ನ ಕ್ರಾಂತಿಕಾರಿ ಧೋರಣೆಯಿಂದ ಪ್ರಬಲ ಶಕ್ತಿಯಾಗಿ ಜಿಲ್ಲೆಯಲ್ಲಿ ಹೊರಹೊಮ್ಮಿತು.

[illegible]

[illegible]

[illegible]

1946 ರಲ್ಲಿ ರಾಜ್ಯಮಟ್ಟದ ವಿದ್ಯಾರ್ಥಿ ಕಾಂಗ್ರೆಸನ ಸಮಾವೇಶ ನಂಜನಗೂಡಿನಲ್ಲಿ ನಡೆಯಿತು. ಆಗ ಮುಖ್ಯ ಅತಿಥಿಗಳಾಗಿದ್ದವರು ರಾಷ್ಟ್ರಮಟ್ಟದ ಸಮಾಜವಾದಿ ಮುಖಂಡ ಅಶೋಕಮೆಹತಾ. ಅಂದಿನಿಂದ ವಿದ್ಯಾರ್ಥಿ ಕಾಂಗ್ರೆಸ್, ಕಾಂಗ್ರೆಸ್ ಸೋಷಲಿಸ್ಟ್ ಪಕ್ಷದ ಅಧಿಕೃತ ಭಾಗವಾಯಿತು. ಅದೇ ವರ್ಷ ಶಿವಮೊಗ್ಗದಲ್ಲಿ ಎಂ.ಪಿ.ಈಶ್ವರಪ್ಪನವರ ಅಧ್ಯಕ್ಷತೆಯಲ್ಲಿ ವಿದ್ಯಾರ್ಥಿಕಾಂಗ್ರೆಸನ ಸಮಾವೇಶ ನಡೆಯಿತು. ಈ ಸಮ್ಮೇಳನದಲ್ಲಿ ಜಯಪ್ರಕಾಶ ನಾರಾಯಣ ಮತ್ತು ಕಮಲಾದೇವಿ ಚಟ್ಟೋಪಾಧ್ಯಾಯ ಅವರ ಪ್ರವಾಸ ಮತ್ತು ಭಾಷಣಗಳನ್ನು ಜಿಲ್ಲೆಯಾದ್ಯಂತ ಏರ್ಪಡಿಸಲಾಗಿತ್ತು. ಈ ಒಂದು ಪ್ರವಾಸ ಜಿಲ್ಲೆಯ ಹೆಚ್ಚಿನ ಯುವಕರನ್ನು ಸಮಾಜವಾದದತ್ತ ಆಕರ್ಷಿಸುವಲ್ಲಿ ಸಹಕಾರಿಯಾಯಿತು. ಜಿಲ್ಲೆಯಲ್ಲಿ ಈ ಪ್ರವಾಸವನ್ನು ಏರ್ಪಡಿಸಿ ಸಮಾಜವಾದದ ಪ್ರಚಾರ ಮಾಡುವಲ್ಲಿ ಹೆಚ್ಚಿನ ಪಾತ್ರವಹಿಸಿದವರು ಕಮಲಾದೇವಿ ಚಟ್ಟೋಪಧ್ಯಾಯ ಇವರು ಕರ್ನಾಟಕದಲ್ಲಿ ಸಮಾಜವಾದಿ ಆಂದೋಲನವನ್ನು ಕಟ್ಟಿ ಬೆಳೆಸಲು ನಿಯುಕ್ತರಾಗಿದ್ದರು. ಜಯಪ್ರಕಾಶ ನಾರಾಯಣ್ ಮತ್ತು ಅಶೋಕ್ ಮೆಹತಾ ಮುಂತಾದ ರಾಷ್ಟ್ರಮಟ್ಟದ ಸಮಾಜವಾದಿ ನಾಯಕರನ್ನು ರಾಜ್ಯಕ್ಕೆ ಕರೆಸಿ ವ್ಯಾಪಕ ಪ್ರಚಾರ ನಡೆಸುವಲ್ಲಿ ಮುಖ್ಯಪಾತ್ರವಹಿಸಿದ್ದರು. ಈ ಪ್ರವಾಸದ ವೇಳೆಯಲ್ಲಿ ಮುಂದೆ ಜಿಲ್ಲೆಯ ಅಗ್ರಗಣ್ಯ ಸಮಾಜವಾದಿ ನಾಯಕರಾದ ಗೋಪಾಲಗೌಡರು ತಮ್ಮನ್ನು ತಾವು ಸಮಾಜವಾದಿಯೆಂದು ಗುರುತಿಸಿಕೊಂಡು, ಸಮಾಜವಾದಿ ಸಂಘಟನೆಯ ಸಕ್ರಿಯ ಕಾರ್ಯಕರ್ತರಾಗಿ ನಿಯುಕ್ತರಾದರು. ಹೀಗೆ ಈ ಪ್ರವಾಸ ಜಿಲ್ಲೆಯಲ್ಲಿ ಸಮಾಜವಾದಿಗಳಿಗೆ ಒಂದು ಭದ್ರ ನೆಲೆಯನ್ನು ಒದಗಿಸಿಕೊಡುವ ನಿಟ್ಟಿನಲ್ಲಿ ಪ್ರಾಮುಖ್ಯತೆ ಪಡೆದಿತ್ತು.

1947ರಲ್ಲಿ ಭಾರತ ಬ್ರಿಟಿಷರಿಂದ ಮುಕ್ತಿಗೊಂಡರೂ ಮೈಸೂರು ಸಂಸ್ಥಾನ ತನ್ನ ಪ್ರಜೆಗಳಿಗೆ ಜವಾಬ್ದಾರಿ ಸರ್ಕಾರ ನೀಡಿರಲಿಲ್ಲ. ಈ ಸಮಯದಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ರಾಜ್ಯಾದ್ಯಂತ ಭಾರೀ ಚಳುವಳಿ ಪ್ರಾರಂಭವಾಯಿತು. ಈ ಸಂದರ್ಭದಲ್ಲಿ ಜಿಲ್ಲೆಯಲ್ಲಿ ಸಮಾಜವಾದಿ ಮುಖಂಡರಾದ ವೈ.ಆರ್.ಪರಮೇಶ್ವರಪ್ಪ ಮತ್ತು

[illegible]

ಗೋಪಾಲಗೌಡರು ವಿದ್ಯಾರ್ಥಿಗಳು ಹಾಗೂ ಯುವಕರನ್ನು ಸಂಘಟಿಸಿ ಯಶಸ್ವಿ ಹೋರಾಟಗಳನ್ನು ನಡೆಸಿ ಜನಪ್ರಿಯತೆಗಳಿಸಿದರು. ಬೆಳೆಯುವ ಪೈರು ಮೊಳಕೆಯಲ್ಲಿ ಎಂಬಂತೆ ಸಮಾಜವಾದಿ ಯುವಜನರು ತಮ್ಮ ಪ್ರಭಾವ ಹಾಗೂ ಶಕ್ತಿಯನ್ನು ಹಂತಹಂತವಾಗಿ ಹೆಚ್ಚಿಸಿಕೊಂಡರು. ಜಿಲ್ಲೆಯಲ್ಲಿ ಮುಂದೆ ಸಮಾಜವಾದಿಗಳಿಗೆ ಭದ್ರನೆಲೆ ಸಿಗುವಂತಾಗಲು ಈ ಪ್ರಾರಂಭಿಕ ಹೋರಾಟಗಳು ಅಪೇಕ್ಷಣೀಯವಾಗಿದ್ದವು. ಇದರ ಫಲಿತಾಂಶವನ್ನು ನಾವು ಮುಂದಿನ ಹೋರಾಟಗಳಲ್ಲಿ ನೋಡಬಹುದು.

ಸ್ವತಂತ್ರ ಸಮಾಜವಾದಿ ಪಕ್ಷದ ಸ್ಥಾಪನೆ :

1947 ರಲ್ಲಿ ದೇಶ ಸ್ವಾತಂತ್ರ್ಯ ಪಡೆದ ವೇಳೆ, ದೇಶದ ರಾಜಕೀಯ ರಂಗದಲ್ಲಿ ಹಲವಾರು ಬದಲಾವಣೆಗಳಾದವು. ಸ್ವಾತಂತ್ರ್ಯ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದ ರಾಷ್ಟ್ರೀಯ ಕಾಂಗ್ರೆಸ್ ದೇಶದ ಅಧಿಕಾರ ಚುಕ್ಕಾಣಿ ಹಿಡಿಯಲು ನಿರ್ಧರಿಸಿದಾಗ ತನ್ನ ಸಂವಿಧಾನದಲ್ಲಿ ಹಲವಾರು ಬದಲಾವಣೆಗಳನ್ನು ಮಾಡಿತು. ಪ್ರತ್ಯೇಕ ಪಕ್ಷ, ಸಂಘಟನೆಗಳನ್ನು ಹೊಂದಿದವರಿಗೆ ಕಾಂಗ್ರೆಸ್ ಸದಸ್ಯತ್ವ ಲಭ್ಯವಿಲ್ಲವೆಂದು ಘೋಷಿಸಿತು. ಇದೇ ಸಂದರ್ಭದಲ್ಲಿ ಬೇರೊಂದು ಪಕ್ಷದಡಿಯಲ್ಲಿದ್ದು ತಮ್ಮ ತತ್ವ ಪ್ರಚಾರ ಮಾಡುವುದರಲ್ಲಿದ್ದ ತೊಡಕುಗಳನ್ನರಿತ ಸಮಾಜವಾದಿ ಮುಖಂಡರಾದ ರಾಮಮನೋಹರ ಲೋಹಿಯಾ, ಜಯಪ್ರಕಾಶ ನಾರಾಯಣ್ ಮುಂತಾದವರು ಸ್ವತಂತ್ರವಾಗಿ ಸಮಾಜವಾದಿ ಪಕ್ಷವನ್ನು ಕಟ್ಟುವ ನಿರ್ಧಾರಕ್ಕೆ ಬಂದರು. ಪರಿಣಾಮವಾಗಿ 'ಸೋಷಲಿಸ್ಟ್ ಪಾರ್ಟಿ' ಎಂಬ ಹೊಸ ಪಕ್ಷ 1948 ರಲ್ಲಿ ಅಸ್ತಿತ್ವಕ್ಕೆ ಬಂದಿತು.

ಅದೇ ವರ್ಷ ರಾಜ್ಯದಲ್ಲೂ ಸಹ ಸಮಾಜವಾದಿಗಳು ಕಾಂಗ್ರೆಸನಿಂದ ಹೊರಬಂದು ಸೋಷಲಿಸ್ಟ್ ಪಾರ್ಟಿಯನ್ನು ಕಟ್ಟಿದರು. 1948 ರಲ್ಲಿ ಕರ್ನಾಟಕ ಸಮಾಜವಾದಿ ಪಕ್ಷದ ಪ್ರಥಮ ಸಮ್ಮೇಳನ ಶಿವಮೊಗ್ಗ ನಗರದ 'ಕೋಪಾರ್ರಿ ಛತ್ರ' ದಲ್ಲಿ ನಡೆಯಿತು. ಈ ಸಮ್ಮೇಳನದಲ್ಲಿ ಜಿಲ್ಲೆಯ ಪ್ರಮುಖ ಸಮಾಜವಾದಿಗಳಾದ ಗೋಪಾಲಗೌಡರು,

ಜಿ.ಸದಾಶಿವರಾವ್, ವೈ.ಆರ್. ಪರಮೇಶ್ವರಪ್ಪ, ಎನ್.ಕೆ.ಸೀತಾರಾಮ ಐಯ್ಯಂಗಾರ್, ಹೆಚ್.ಎಂ.ಶಿವರಾಂ, ಎಂ.ಪಿ.ಈಶ್ವರಪ್ಪ, ಡಿ.ಪರಮೇಶ್ವರಪ್ಪ, ಎ.ವಿ.ಶ್ರೀನಿವಾಸ್, ಎಂ.ಸಿ.ಮಹೇಶ್ವರಪ್ಪ, ಡಿ.ರೇವಳಪ್ಪ, ಮುಂತಾದ ಪ್ರಮುಖರು ಹಾಗೂ ರಾಜ್ಯ ಮಟ್ಟದ ಅನೇಕ ನಾಯಕರು ಭಾಗವಹಿಸಿದ್ದರು. ಧಾರವಾಡದಿಂದ ಬಂದಿದ್ದ ಗುಂಡಪ್ಪ ನರಬೋಳಿ ಎಂಬುವವರು ಶಿವಮೊಗ್ಗ ಸಮಾಜವಾದಿಗಳ ಘಟಕಕ್ಕೆ ಮಾರ್ಗದರ್ಶನ ನೀಡುತ್ತಿದ್ದರೆಂದು ಹೇಳಲಾಗಿದೆ. ಪ್ರಥಮ ರಾಜ್ಯ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಿದ ಶಿವಮೊಗ್ಗ ಜಿಲ್ಲೆ ಸಮಾಜವಾದಿಗಳ ಪ್ರಮುಖ ಕೇಂದ್ರವಾಗಿತ್ತೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಈ ಸಮ್ಮೇಳನದಲ್ಲಿ ದೀನ-ದಲಿತರ, ರೈತ ಕೃಷಿ ಕಾರ್ಮಿಕರ ಹಾಗೂ ಕೈಗಾರಿಕಾ ಕಾರ್ಮಿಕರ ಏಳ್ಗೆಗಾಗಿ ಪಕ್ಷ ತನ್ನ ಹೋರಾಟಗಳನ್ನು ರೂಪಿಸಿಕೊಳ್ಳಬೇಕೆಂದು ನಿರ್ಧರಿಸಲಾಯಿತು.

ರಾಜ್ಯಮಟ್ಟದ ಪ್ರಥಮ ಸಮ್ಮೇಳನವನ್ನು ನಡೆಸುವ ಮೂಲಕ ತನ್ನ ಶಕ್ತಿಯನ್ನು ಹೆಚ್ಚಿಸಿಕೊಂಡ ಜಿಲ್ಲೆಯ ಸಮಾಜವಾದಿಗಳು, ಅದೇ ವರ್ಷ ಸೋಷಲಿಸ್ಟ್ ಪಕ್ಷದ ಧ್ಯೇಯವಾದ ರೈತರ ಸಮಸ್ಯೆಗಳಿಗೆ ಆದ್ಯತೆ ನೀಡುವ ದೃಷ್ಟಿಯಿಂದ ರೈತರ ಬೃಹತ್ ಸಮಾವೇಶವನ್ನು ಜಿಲ್ಲೆಯಲ್ಲಿ ನಡೆಸಲು ನಿರ್ಧರಿಸಿದರು. ಜಿಲ್ಲೆಯ ಗೇಣಿದಾರರ ಹಿತರಕ್ಷಣೆಗಾಗಿ 1946 ರಲ್ಲಿ ಹುಟ್ಟಿಕೊಂಡಿದ್ದ 'ಮಲೆನಾಡು ಗೇಣಿದಾರರ ಸಂಘ' ಮತ್ತು ಇದೇ ರೀತಿಯ ಉದ್ದೇಶವನ್ನಿಟ್ಟುಕೊಂಡು 1948ರಲ್ಲಿ ಹುಟ್ಟಿದ್ದ 'ಸಾಗರ ತಾಲ್ಲೂಕು ರೈತ ಸಂಘ' ಮತ್ತು 'ಹಿಂದ್ ಕಿಸಾನ್ ಪಂಚಾಯತ್' ಇವುಗಳ ಸಂಯುಕ್ತ ಆಶ್ರಯದಲ್ಲಿ ಸಮ್ಮೇಳನಕ್ಕೆ ರಾಷ್ಟ್ರಮಟ್ಟದ ಸಮಾಜವಾದಿ ಮುಖಂಡರಾದ ಕಮಲಾದೇವಿ ಚಟ್ಟೋಪಾಧ್ಯಾಯ, ರಮಾನಂದನ ಮಿಶ್ರ ಮುಂತಾದವರನ್ನು ಕರೆಸಲಾಗಿತ್ತು. ಈ ಸಮ್ಮೇಳನ ಅತ್ಯಂತ ಯಶಸ್ವಿಯಾಗಿದ್ದು ಜಿಲ್ಲೆಯಾದ್ಯಂತದ ರೈತರು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಈ ಸಮ್ಮೇಳನ ಜಿಲ್ಲೆಯ ಸಮಾಜವಾದಿಗಳಿಗೆ ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಹೆಸರನ್ನು ತಂದಿತು.

[illegible]

[illegible]

[illegible]

ಈ ಸಮ್ಮೇಳನದಲ್ಲಿ ರಾಷ್ಟ್ರಮಟ್ಟದ ನಾಯಕರ ಗಮನಸೆಳೆದ ಶಾಂತವೇರಿ ಗೋಪಾಲಗೌಡರು, ಇದೇ ಸಂದರ್ಭದಲ್ಲಿ ಬಿಹಾರದಲ್ಲಿ ನಡೆದ ರೈತ ಸಮ್ಮೇಳನದಲ್ಲಿ ಭಾಗವಹಿಸಿದರು. ಅಲ್ಲಿನ ರೈತ ಸಂಘಟನೆಯಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸಿ ಸಾಕಷ್ಟು ಅನುಭವ ಪಡೆದರು. ಈ ಭೇಟಿಯ ಅವಧಿಯಲ್ಲಿ ಗೌಡರಿಗಾದ ಮತ್ತೊಂದು ಲಾಭವೆಂದರೆ ರಾಷ್ಟ್ರದ ಅಗ್ರಗಣ್ಯ ಸಮಾಜವಾದಿಯಾದ ರಾಮಮನೋಹರ ಲೋಹಿಯಾರ ಪರಿಚಯವಾದದ್ದು. ಲೋಹಿಯಾರ ಸಂಪರ್ಕದಿಂದ ಗಾಢವಾಗಿ ಪ್ರಭಾವಿತರಾದ ಗೌಡರು ತಮ್ಮ ಕೊನೆಯವರೆಗೂ ಅವರ ಅನುಯಾಯಿಯಾಗಿಯೇ ಉಳಿದರು. ಈ ಪರಿಚಯ ಮುಂದೆ ನಡೆದ ಕಾಗೋಡು ಸತ್ಯಾಗ್ರಹದಲ್ಲಿ ಲೋಹಿಯಾ ಭಾಗವಹಿಸಲು ಕಾರಣವಾಯಿತೆನ್ನಬಹುದು.

ಮುಂದೆ ರಾಷ್ಟ್ರಮಟ್ಟದಲ್ಲಿ ಪಕ್ಷದಲ್ಲುಂಟಾದ ಆಂತರಿಕ ಕಲಹ, ಒಡಕು, ವಿಲೀನದ ಪ್ರಕ್ರಿಯೆಗಳು ನಿರಂತರವಾಗಿ ನಡೆದು ಪಕ್ಷ ಅಧೋಗತಿಯತ್ತ ನಡೆದಿದ್ದಾಗಲೂ ಜಿಲ್ಲೆಯ ಸೋಷಲಿಸ್ಟ್ ಪಕ್ಷದಲ್ಲಿ ಒಡಕುಂಟಾಗಲಿಲ್ಲ. ಬದಲಾಗಿ ಲೋಹಿಯಾ ಯಾವ ಪಕ್ಷದಲ್ಲಿರುತ್ತಿದ್ದರೋ ಜಿಲ್ಲೆಯ ಸೋಷಲಿಸ್ಟರೂ ಅದೇ ಪಕ್ಷದಲ್ಲಿರುತ್ತಿದ್ದರು. ಕಾಗೋಡು ಸತ್ಯಾಗ್ರಹದ ನಂತರವೂ ಲೋಹಿಯಾ ಅನೇಕ ಭಾರಿ ಜಿಲ್ಲೆಗೆ ಭೇಟಿಕೊಟ್ಟಿದ್ದರು. ಇವರ ಪ್ರಭಾವ ಎಷ್ಟಿತ್ತೆಂದರೆ ಸಮಾಜವಾದೀ ಚಳುವಳಿಯ ಜೊತೆಯಲ್ಲೇ ಬೆಳೆದ ಜಿಲ್ಲೆಯ ಪ್ರಮುಖ ಸಾಹಿತಿಗಳಾದ ಯು.ಆರ್.ಅನಂತಮೂರ್ತಿ, ಪೂರ್ಣಚಂದ್ರ ತೇಜಸ್ವಿ, ಪಿ.ಲಂಕೇಶ್, ಕೆ.ವಿ.ಸುಬ್ಬಣ್ಣ ಇನ್ನುಮುಂತಾದವರನ್ನು ಲೋಹಿಯಾವಾದಿ ಚಿಂತಕರೆಂದೇ ಗುರುತಿಸಲಾಗುತ್ತಿದೆ. ಇವರು ತಮ್ಮ ಬರವಣಿಗೆಗಳಲ್ಲೂ ಹಾಗೆ ಹೇಳಿಕೊಂಡಿದ್ದಾರೆ.

ಸಮಾಜವಾದಿ ಚಟುವಟಿಕೆಗಳು ಜಿಲ್ಲೆಯಲ್ಲಿ ಪ್ರಾರಂಭವೆಂದು ಗುರುತಿಸಬಹುದಾದ 1942 ರಿಂದ 1951ರ ಕಾಗೋಡು ಸತ್ಯಾಗ್ರಹವರೆಗೆ ಅನೇಕ ಹೋರಾಟಗಳನ್ನು ಮತ್ತು ಸಮ್ಮೇಳನಗಳನ್ನು ನಡೆಸಿದ ಸಮಾಜವಾದಿಗಳು ಜಿಲ್ಲೆಯ ಪ್ರಮುಖ ಸಂಘಟನೆಯಾಗಿ ರೂಪುಗೊಂಡಿದ್ದರು. ಈ ರೀತಿ ಪ್ರಬಲ ಸಂಘಟನೆಯಾಗಿ ರೂಪುಗೊಂಡ ಸಮಾಜವಾದಿಗಳು ಮುಂದೆ ಕಾಗೋಡು ಸತ್ಯಾಗ್ರಹದಂತಹ ಹೋರಾಟ ನಡೆಸುವಲ್ಲಿ ಪ್ರಮುಖ ಪಾತ್ರವಹಿಸಿದರೆಂಬುದು ಗಮನಿಸಬೇಕಾದ ಅಂಶ.

[illegible]

[illegible]

[illegible]

[illegible]

****

ಅಧ್ಯಾಯ : 5

ಸಮಾಜವಾದಿಗಳ ಮುಖ್ಯ ಹೋರಾಟಗಳು

(ಅ) ಕಾಗೋಡು ಸತ್ಯಾಗ್ರಹ

(ಆ) 1952 ಮತ್ತು 1954-55ರ ಭೂ ಸುಧಾರಣಾ ಶಾಸನಗಳು ಮತ್ತು ಸಮಾಜವಾದಿಗಳು

(ಇ) ಭೂಮಿ ಆಂದೋಲನ : 1969

****

5. ಸಮಾಜವಾದಿಗಳ ಮುಖ್ಯ ಹೋರಾಟಗಳು

ಭಾರತೀಯ ಸಮಾಜವಾದಿ ಚಳುವಳಿಯಲ್ಲಿ ಶಿವಮೊಗ್ಗ ಜಿಲ್ಲೆ ಪ್ರಮುಖ ಸ್ಥಾನ ಹೊಂದಿರಲು ಕಾರಣ ಸಮಾಜವಾದಿಗಳು ನಡೆಸಿದ ಗಮನಾರ್ಹ ಹೋರಾಟಗಳು ಎಂದು ನಿಸ್ಸಂಶಯವಾಗಿ ಹೇಳಬಹುದು. ಭಾರತದ ಸಮಾಜವಾದಿ ಸಿದ್ಧಾಂತದ ಮುಖ್ಯ ಉದ್ದೇಶ ಸಾಮಾಜಿಕ, ಧಾರ್ಮಿಕ ಹಾಗೂ ಆರ್ಥಿಕ ಅಸಮಾನತೆಯ ವಿರುದ್ಧ ಹೋರಾಡುವುದಾಗಿತ್ತು ಎಂದು ಈಗಾಗಲೆ ಹೇಳಲಾಗಿದೆ. ಈ ಅಸಮಾನತೆಗಳಿಗೆ ಭೂಮಿಯ ಅಸಮಾನ ಹಂಚಿಕೆ ಪ್ರಮುಖ ಕಾರಣವಾಗಿದ್ದಿತೆನ್ನಬಹುದು. ಅದರಲ್ಲೂ ಶಿವಮೊಗ್ಗ ಜಿಲ್ಲೆಯ ಮಲೆನಾಡು ಭಾಗದಲ್ಲಿ ಭೂಮಿ ಮೇಲ್ಜಾತಿಯ ಕೆಲವೇ ಜಮೀನ್ದಾರರಲ್ಲಿ ಹಂಚಿಹೋಗಿತ್ತು. ಉಳಿದ ಶೇ.90 ಕ್ಕೂ ಹೆಚ್ಚು ಜನ ಈ ಜಮೀನ್ದಾರರನ್ನೇ ಅವಲಂಬಿಸಿ ಬದುಕಬೇಕಾಗಿತ್ತು. ಬೇರೆ ಅನ್ಯಮಾರ್ಗವಿರಲಿಲ್ಲ. ಅವಲಂಬನೆ ಹೆಚ್ಚಾದಷ್ಟೂ ಶೋಷಣೆ ಹೆಚ್ಚಾಗುತ್ತದೆಂಬುದು ಚಾರಿತ್ರಿಕ ಸತ್ಯ. ಈ ಕಾರಣಕ್ಕಾಗಿಯ ಲೋಹಿಯಾರಂತಹ ಪ್ರಮುಖ ಭಾರತೀಯ ಸಮಾಜವಾದಿಗಳು ಭೂ ಸಂಬಂಧೀ ಹೋರಾಟಗಳಿಗೆ ಪ್ರಥಮ ಆದ್ಯತೆ ನೀಡಿದರು.

ಸಮಾಜವಾದಿಗಳು ಜಿಲ್ಲೆಯಲ್ಲಿ ಅನೇಕ ಹೋರಾಟಗಳನ್ನು ನಡೆಸಿದರು, ಮುಖ್ಯವಾಗಿ ಕಾಗೋಡು ಸತ್ಯಾಗ್ರಹ, 1952 — 54 ರಲ್ಲಿ ಜಾರಿಗೆ ಬಂದ ಭೂ ಸುಧಾರಣಾ ಶಾಸನಗಳಿಂದ ಗೇಣಿ ರೈತರಿಗಾಗುತ್ತಿದ್ದ ಅನ್ಯಾಯವನ್ನು ಪ್ರತಿಭಟಿಸಿದ್ದು, 1969 ರಲ್ಲಿ ಸರ್ಕಾರಿ ಭೂಮಿಯನ್ನು ವಶಪಡಿಸಿಕೊಂಡು ಭೂಹೀನ ರೈತರಿಗೆ ಹಂಚುವ ಭೂಮಿ ಆಂದೋಲನ ಕೈಗೊಂಡಿದ್ದು,ಇತ್ಯಾದಿ. ಈ ಹೋರಾಟಗಳಲ್ಲೆಲ್ಲ ಕಾಗೋಡು ಸತ್ಯಾಗ್ರಹ ಮುಖ್ಯವಾಗಿದ್ದು, ಮಲೆನಾಡು ಭಾಗದಲ್ಲಿ ಜಮೀನ್ದಾರರ ವಿರುದ್ಧ ಗೇಣಿ ರೈತರು ಮೊದಲಬಾರಿಗೆ ಧ್ವನಿಯೆತ್ತಿದ್ದು ಚಾರಿತ್ರಿಕ ಘಟನೆ.

[illegible]

[illegible]

[illegible]

[illegible]

(ಅ) ಕಾಗೋಡು ಸತ್ಯಾಗ್ರಹ :

ಶಿವಮೊಗ್ಗ ಜಿಲ್ಲೆಯಲ್ಲಿ ಸಮಾಜವಾದಿಗಳು ನಡೆಸಿದ ಪ್ರಮುಖ ಹೋರಾಟ ವೆಂದರೆ ಕಾಗೋಡು ಸತ್ಯಾಗ್ರಹ. ಇದು ಜಿಲ್ಲೆಯಲ್ಲಿ ಸಮಾಜವಾದಿಗಳು ನಡೆಸಿದ ಪ್ರಥಮ ಹೋರಾಟ ಕೂಡ ಆಗಿತ್ತು. ವಾಸ್ತವದಲ್ಲಿ ಕಾಗೋಡು ಸತ್ಯಾಗ್ರಹ ವನ್ನು ಪ್ರಾರಂಭಿಸಿದ್ದು ಸಮಾಜವಾದಿಗಳಲ್ಲವಾದರೂ ಆ ಹೋರಾಟಕ್ಕೆ ಮುಖ್ಯ ಚಾಲನೆ ನೀಡಿದವರು ಇವರೇ. ಈ ಹೋರಾಟಕ್ಕೆ ಸಂಬಂಧಿಸಿದಂತೆ ಹೋರಾಟದ ಹಿನ್ನೆಲೆಯನ್ನು ಇಲ್ಲಿ ಗಮನಿಸುವುದು ಅವಶ್ಯಕ.

ಕಾಗೋಡು ಸತ್ಯಾಗ್ರಹವನ್ನು ಪ್ರಾರಂಭಿಸಿದವರು ಸಮಾಜವಾದಿಗಳಲ್ಲ ವಾದರೂ ಸಮಾಜವಾದಿ ಧೋರಣೆಯನ್ನು ಹೊಂದಿದಂತಹ ಸಂಘಟನೆಗಳು ಎಂಬುದು ಗಮನಿಸಬೇಕಾದ ಅಂಶ. ಈ ಹೋರಾಟಕ್ಕೆ ಸಂಬಂಧಿಸಿದಂತೆ ಆಗ ಜಿಲ್ಲೆಯಲ್ಲಿದ್ದ ಎರಡು ಸಂಘಟನೆಗಳ ಹಿನ್ನೆಲೆಯನ್ನು ನೋಡಬೇಕಾಗುತ್ತದೆ. ಅವುಗಳೆಂದರೆ,

1. ಮಲೆನಾಡು ಗೇಣಿದಾರರ ಸಂಘ,
2. ಸಾಗರ ತಾಲ್ಲೂಕು ರೈತಸಂಘ.

ಮಲೆನಾಡು ಗೇಣಿದಾರರ ಸಂಘ : ಈ ಸಂಘ 1946 ರಲ್ಲಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯಲ್ಲಿ ಪ್ರಾರಂಭವಾಯಿತು. 1947 ರಲ್ಲಿ ಇದು ಸರ್ಕಾರದ ಅನುಮತಿ ಯನ್ನು ಪಡೆದುಕೊಂಡಿತು. ಈ ಸಂಘ ಪ್ರಾರಂಭವಾಗಲು ಪ್ರಮುಖ ಕಾರಣಕರ್ತ ರೆಂದರೆ ಕಡಿದಾಳು ಮಂಜಪ್ಪ. ಇವರು ಕಾಂಗ್ರೆಸ್ ಪಕ್ಷದಲ್ಲಿದ್ದವರಾದರೂ ಮೂಲತಃ ಗೇಣಿದಾರ ಕುಟುಂಬದಿಂದ ಬಂದವರಾಗಿದ್ದರು. ಹೀಗಾಗಿ ಗೇಣಿರೈತರ ಸಮಸ್ಯೆಯ ಸ್ಪಷ್ಟ ಅರಿವು ಮಂಜಪ್ಪನವರಿಗಿತ್ತು. ಈ ಸಂಘವನ್ನು ಸ್ಥಾಪಿಸಿದ ಮುಖ್ಯ ಉದ್ದೇಶ ಮಲೆನಾಡು ಪ್ರದೇಶದಲ್ಲಿ ವ್ಯಾಪಕವಾಗಿದ್ದ ಗೇಣಿದಾರರ ಸಮಸ್ಯೆಯನ್ನು ಚರ್ಚಿಸಿ ಅವುಗಳಿಗೆ ಪರಿಹಾರವನ್ನು ಬಯಸುವುದಾಗಿತ್ತು. ಇದಕ್ಕೆ ಉದಾಹರಣೆಯಾಗಿ ಸಂಘದ

[illegible]

[illegible]

[illegible]

[illegible]

[illegible]

ಪ್ರಮುಖ ಬೇಡಿಕೆಗಳನ್ನು ನೋಡಬಹುದು (ವಿವರಗಳಿಗೆ: ಜಿ.ರಾಜಶೇಖರ, 1980, ಪು: 36). ಈ ಸಂಘ ಮಲೆನಾಡು ಪ್ರದೇಶದಲ್ಲಿ ಬಡರೈತರ ಸಮಸ್ಯೆಯನ್ನು ಚರ್ಚಿಸಲಿಕ್ಕೆ ಸ್ಥಾಪನೆಯಾದ ಮೊದಲವೇದಿಕೆಯಾಗಿತ್ತೆಂಬುದು ಗಮನಿಸಬೇಕಾದ ಅಂಶವೆನ್ನಬಹುದು.

ಸಂಘದ ಮೊದಲ ಸಭೆ ಅದು ಸ್ಥಾಪನೆಯಾದ ತೀರ್ಥಹಳ್ಳಿಯಲ್ಲಿಯೇ ನಡೆಯಿತು. ಇದರ ಮೊದಲ ಅಧಿವೇಶನದಲ್ಲಿ ಪ್ರಮುಖ ಸಮಾಜವಾದಿ ಮುಖಂಡರಾದ ರಮಾನಂದನ ಮಿಶ್ರ, ಕಮಲಾದೇವಿ ಚಟ್ಟೋಪಾಧ್ಯಾಯ ಮುಂತಾದವರು ಭಾಗವಹಿಸಿದ್ದರು. ಇದನ್ನು ಗಮನಿಸುವುದಾದರೆ ಸಂಘ ಮೊದಲಿನಿಂದಲೂ ಸಮಾಜವಾದಿಗಳ ನಿಕಟ ಸಂಪರ್ಕವಿರಿಸಿಕೊಂಡಿತ್ತೆಂಬುದು ಸ್ಪಷ್ಟ. ಜೊತೆಗೆ ಕಾಂಗ್ರೆಸ್ ಮುಖಂಡರೂ ಸಂಘದ ಸಭೆಗಳಲ್ಲಿ ಭಾಗವಹಿಸುತ್ತಿದ್ದರು.

<u>ಸಾಗರ ತಾಲ್ಲೂಕು ರೈತಸಂಘ</u> : ಮಲೆನಾಡು ಗೇಣಿದಾರರ ಸಂಘದಂತೆಯೇ ಆ ವೇಳೆಗೆ ಜಿಲ್ಲೆಯಲ್ಲಿದ್ದ ಇನ್ನೊಂದು ಸಂಘಟನೆ ಸಾಗರ ತಾಲ್ಲೂಕು ರೈತಸಂಘ. ಇದು 1948 ರಲ್ಲಿ ಮಲೆನಾಡು ಗೇಣಿದಾರರ ಸಂಘ ಸ್ಥಾಪನೆಯಾದ ಎರಡು ವರ್ಷಗಳ ನಂತರ ಸ್ಥಾಪನೆಯಾಯಿತು. ಈ ಸಂಘ ಸ್ಥಾಪನೆಯಾಗಲು ಕಾರಣನಾದ ಪ್ರಮುಖ ವ್ಯಕ್ತಿ ಗಣಪತಿಯಪ್ಪ. ಸಂಘ ದೀವರಜಾತಿಯವರಿಗೆ ಸಂಬಂಧಪಟ್ಟಿತ್ತಾದರೂ ವಾಸ್ತವವಾಗಿ ಅದು ಆ ಪ್ರದೇಶದ ಗೇಣಿದಾರರ ಸಂಘವೇ ಆಗಿತ್ತು. ಕಾರಣ ಆ ಪ್ರದೇಶದ ಗೇಣಿದಾರರಲ್ಲಿ ಮತ್ತು ಗೇಣಿ ಜಮೀನನ್ನು ನಂಬಿಕೊಂಡು ಬದುಕುವವರಲ್ಲಿ ಶೇ.90 ಕ್ಕೂ ಹೆಚ್ಚು ಜನ ದೀವರ ಜಾತಿಯವರಾಗಿದ್ದರು. ಸಂಘದ ಹೆಸರನ್ನು ಮೊದಲಿಗೆ ದೀವರ ಸಂಘವೆಂದು ಇಡಲು ಕೆಲವರು ತೀರ್ಮಾನಿಸಿದ್ದರಾದರೂ ಗಣಪತಿಯಪ್ಪನ ಸಲಹೆಯ ಮೇರೆಗೆ ಸಂಘಕ್ಕೆ 'ಸಾಗರ ತಾಲ್ಲೂಕು ರೈತಸಂಘ' ಎಂದು ಹೆಸರಿಟ್ಟರು ಎಂಬುದು ಇದಕ್ಕೆ ಉದಾಹರಣೆ.

ಈ ಸಂಘದ ಉದ್ದೇಶ ಕೂಡ ಮಲೆನಾಡು ಗೇಣಿದಾರರ ಸಂಘದ ಉದ್ದೇಶಕ್ಕಿಂತ ಹೆಚ್ಚಿನ ಭಿನ್ನತೆ ಇರಲಿಲ್ಲ. ಸಂಘದ ಬೇಡಿಕೆಗಳು ಗೇಣಿರೈತರ ಸಮಸ್ಯೆಯನ್ನು ಕುರಿತವೇ ಆಗಿದ್ದುವು ಹಾಗೂ ಮಲೆನಾಡು ಗೇಣಿದಾರರ ಸಂಘದ ಬೇಡಿಕೆಗಳನ್ನೇ ಹೆಚ್ಚಾಗಿ ಹೋಲುತ್ತಿದ್ದುವು (ಹೆಚ್ಚಿನ ವಿವರಕ್ಕೆ ನೋಡಿ:ಗಣಪತಿಯಪ್ಪ:(ಸಂ) ಕೋಣಂದೂರು ವೆಂಕಪ್ಪಗೌಡ, 1981, ಪು: 120). ಸಂಘದ ಪ್ರಮುಖ ಚಟುವಟಿಕೆಗಳೆಂದರೆ ಪ್ರತಿ ಗ್ರಾಮದಲ್ಲಿಯೂ ರೈತರ ಸಭೆಗಳನ್ನು ನಡೆಯಿಸಿ ಅವರ ಮುಂದೆ ರೈತರ ಸಮಸ್ಯೆಗಳನ್ನು ವಿವರಿಸಿ ಹೇಳುವುದು; ಸಣ್ಣಸಣ್ಣ ಪುಸ್ತಕಗಳನ್ನು ಪ್ರಕಟಿಸುತ್ತ, ಲಭ್ಯವಿರುವ ಪತ್ರಿಕಾ ಪ್ರಚಾರವನ್ನು ಪಡೆಯುವುದು. ಒಟ್ಟಿನಲ್ಲಿ ರೈತರಲ್ಲಿ ಜಾಗೃತಿಯನ್ನು ಮೂಡಿಸುವುದಾಗಿತ್ತು.

ಈ ಸಂಘ ಕೂಡ ಮಲೆನಾಡು ಗೇಣಿದಾರರ ಸಂಘದಂತೆಯೆ ಮೊದಲಿನಿಂದಲೂ ಸಮಾಜವಾದಿಗಳ ನಿಕಟ ಸಂಪರ್ಕವನ್ನಿಟ್ಟುಕೊಂಡಿದ್ದಿತು. ಸಂಘದ ಕಾರ್ಯದರ್ಶಿ ಗಣಪತಿಯಪ್ಪನವರೆ ಹೇಳುವಂತೆ, ಸಂಘದ ಸಭೆಗಳಲ್ಲಿ ಸಮಾಜವಾದಿಗಳು ಹೆಚ್ಚಾಗಿ ಭಾಗವಹಿಸಿ ರೈತರನ್ನು ಹುರಿದುಂಬಿಸುತ್ತಿದ್ದರು. ಜೊತೆಗೆ ಸಭೆಗಳಲ್ಲಿ ಭಾಗವಹಿಸಿದ್ದ ಕೆಲವು ಸಮಾಜವಾದಿಗಳ ಹೆಸರನ್ನು ಸಹ ಗೋಪಾಲಗೌಡರ ಸ್ಮಾರಕ ಗ್ರಂಥವಾದ 'ಜೀವಂತ ಜ್ವಾಲೆ'ಯಲ್ಲಿ ಬರೆದ ಲೇಖನದಲ್ಲಿ ಹೆಸರಿಸಿದ್ದಾರೆ (ವಿವರಕ್ಕೆ ನೋಡಿ:ಪು: 120).

ಹೀಗೆ ಸಮಾನ ಆಸಕ್ತಿಯನ್ನಿಟ್ಟುಕೊಂಡಿದ್ದ ಈ ಎರಡೂ ಸಂಘಟನೆಗಳೂ 1951 ರಲ್ಲಿ ಒಂದುಗೂಡಿದವು. ಸಮಾನ ಆಸಕ್ತಿಯನ್ನು ಇಟ್ಟುಕೊಂಡ ಸಂಘಟನೆಗಳು ಒಂದುಗೂಡುವುದು ಸಹಜವೇ ಆಗಿತ್ತು. 'ಸಾಗರ ತಾಲ್ಲೂಕಿನ ರೈತಸಂಘ' ಮಲೆನಾಡು ಗೇಣಿದಾರರ ಸಂಘದ ಸಾಗರ ತಾಲ್ಲೂಕಿನ ಶಾಖೆಯಾಯಿತು.

ಮಲೆನಾಡು ಗೇಣಿದಾರರ ಸಂಘ ಸಾಗರ ತಾಲ್ಲೂಕು ರೈತಸಂಘಗಳ ಜೊತೆ ಜೊತೆಯಲ್ಲಿ ಸಮಾಜವಾದಿಗಳು ಸೇರಿಕೊಂಡು ಜಿಲ್ಲೆಯಲ್ಲಿ ಗೇಣಿ ರೈತರ ಮತ್ತು ಹಿಂದುಳಿದ ರೈತರಲ್ಲಿ ಜಾಗೃತಿಯನ್ನುಂಟು ಮಾಡುತ್ತಿದ್ದರು. ಈ ರೀತಿಯ

[illegible]

[illegible]

[illegible]

[illegible]

ಜಾಗೃತಿ ಕಾಗೋಡು ಸತ್ಯಾಗ್ರಹದಂತಹ ಹೋರಾಟಕ್ಕೆ ವೇದಿಕೆಯಾಯಿತೆಂದು ಹೇಳಬಹುದು.

ಸತ್ಯಾಗ್ರಹ ಪ್ರಾರಂಭವಾದುದು ಗೇಣಿಭತ್ತ ಅಳೆಯುತ್ತಿದ್ದ ಕೊಳಗದ ಗಾತ್ರಕ್ಕೆ ಸಂಬಂಧಿಸಿದಂತೆ. ಸಂಘದ ಹಲವು ಬೇಡಿಕೆಗಳಲ್ಲಿ ಗೇಣಿಭತ್ತವನ್ನು ಮೂರು ಸೇರಿನ ಕೊಳಗದಲ್ಲೇ ಅಳೆಯಬೇಕೆಂಬುದೂ ಒಂದು ಬೇಡಿಕೆಯಾಗಿತ್ತು. ಸಾಮಾನ್ಯವಾಗಿ ಒಂದು ಕೊಳಗ ಎಂದರೆ ಮೂರು ಸೇರಿನದಾಗಿತ್ತು. ಸರ್ಕಾರದ ಮಾನ್ಯತೆಪಡೆದ ಕೊಳಗ ಕೂಡ ಮೂರು ಸೇರಿನದಾಗಿರುತ್ತಿತ್ತು. ಆದರೆ ಜಮೀನ್ದಾರರು ಗೇಣಿ ಅಳೆಸಿಕೊಳ್ಳುವಾಗ ಮೂರು ಕಾಲು, ಮೂರುವರೆ, ಮೂರು ಮುಕ್ಕಾಲು- ಹೀಗೆ ನಿರ್ದಿಷ್ಟ ಗಾತ್ರಕ್ಕಿಂತ ಹೆಚ್ಚಿನ ಗಾತ್ರದ ಕೊಳಗವನ್ನು ಬಳಸುತ್ತಿದ್ದರು. ಹೀಗೆ ಗೇಣಿ ಅಳೆಯಿಸಿಕೊಳ್ಳುತ್ತಿದ್ದ ಜಮೀನ್ದಾರರಲ್ಲಿ ಕಾಗೋಡು ಗೌಡರೂ ಒಬ್ಬರಾಗಿದ್ದರು.

ಸಂಘ ತನ್ನ ಈ ಬೇಡಿಕೆಯನ್ನು ತಾಲ್ಲೂಕಿನ ಜಮೀನ್ದಾರರ ಮುಂದಿಟ್ಟಿತು. ಹಲವು ಜಮೀನ್ದಾರರು ಸಂಘದ ಈ ಬೇಡಿಕೆಯನ್ನು ಮನ್ನಿಸಿದರು. ಆದರೆ ಕಾಗೋಡು ಗೌಡರು ಮಾತ್ರ ಇದನ್ನು ಒಪ್ಪಲಿಲ್ಲ. ಗೇಣಿದಾರರೂ ತಮ್ಮ ಬೇಡಿಕೆಯನ್ನು ಹಿಂತೆಗೆದುಕೊಳ್ಳಲಿಲ್ಲ. ಹೀಗೆ ಸಣ್ಣ ಕಾರಣಕ್ಕಾಗಿ ಆದರೆ ಮಹತ್ವದ ಬೇಡಿಕೆಯಾಗಿ ಪ್ರಾರಂಭವಾದ ವಿವಾದ ಮುಂದೆ ಜಮೀನ್ದಾರರು ಗೇಣಿಗೆ ಗದ್ದೆಯನ್ನು ಕೊಡುವುದಿಲ್ಲವೆಂದು ಪಟ್ಟು ಹಿಡಿದಾಗ ವಿವಾದ ಹೊಸ ತಿರುವು ಪಡೆಯಿತು.

ಸತ್ಯಾಗ್ರಹದ ಈ ಹಂತದಲ್ಲಿ ಸೋಷಲಿಸ್ಟ್ ಪಕ್ಷ ಪ್ರತ್ಯಕ್ಷವಾಗಿ ಭಾಗವಹಿಸದಿದ್ದರೂ ಸತ್ಯಾಗ್ರಹದ ಬಗ್ಗೆ ಆಸ್ಥೆ ತಳೆದಿತ್ತು. ಚಳುವಳಿ ನಡೆಯುತ್ತಿದ್ದ ಸಂದರ್ಭದಲ್ಲಿ ಜಿಲ್ಲೆಯ ಪ್ರಮುಖ ಸಮಾಜವಾದಿಗಳಾದ ಪಕ್ಷದ ರಾಜ್ಯ ಕಾರ್ಯದರ್ಶಿ ಜಿ.ಸದಾಶಿವರಾವ್, ಗೋಪಾಲಗೌಡರು, ವೈ.ಆರ್. ಪರಮೇಶ್ವರಪ್ಪ ಮೊದಲಾದವರು ಕಾಗೋಡಿಗೆ ಭೇಟಿಯಿತ್ತು, ಸತ್ಯಾಗ್ರಹದ ಬಗ್ಗೆ ಗಣಪತಿಯಪ್ಪನವರೊಂದಿಗೆ ಚರ್ಚಿಸುತ್ತಿದ್ದರು ಹಾಗೂ ಪಕ್ಷ ಮುಂದೆ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ವರದಿ ತಯಾರಿಸಲು ಒಂದು ಸಮಿತಿಯನ್ನು ರಚಿಸಿದರು. ಇದೇ ವೇಳೆ

ಯಲ್ಲಿ ಪಕ್ಷದ ರಾಜ್ಯ ಅಧ್ಯಕ್ಷರಾಗಿದ್ದ ಸಿ.ಜಿ.ಕೆ.ರೆಡ್ಡಿಯವರು ' The Genesis of Kagodu' ಎಂಬ ಕಿರು ಹೊತ್ತಿಗೆಯನ್ನು ತಂದು ಎ.ಐ.ಸಿ.ಸಿ.ಅಧಿವೇಶನದಲ್ಲಿ ಭಾಗವಹಿಸಿದ್ದ ಕಾಂಗ್ರೆಸ್ ಮುಖಂಡರಿಗೆ ಹಂಚಿದರು (ಜಿ.ರಾಜಶೇಖರ, 1981, ಪು:67 — 68).

ಈ ನಿದರ್ಶನವನ್ನು ಗಮನಿಸಿದರೆ ಸೋಷಲಿಸ್ಟ್ ಪಕ್ಷ ಮೊದಲಿನಿಂದಲೂ ಸತ್ಯಾಗ್ರಹದ ಬಗ್ಗೆ ಆಸಕ್ತಿ ವಹಿಸಿದ್ದಿತೆಂಬುದು ಸ್ಪಷ್ಟವಾಗುತ್ತದೆ. ಪಕ್ಷ ಮೊದಲಿನಿಂದಲೂ ಕಾಗೋಡು ಗೇಣಿದಾರರನ್ನು ಬೆಂಬಲಿಸುತ್ತ ಬಂದಿತ್ತು ಮತ್ತು ಚಳುವಳಿಯ ಬಗ್ಗೆ ಸಾರ್ವಜನಿಕ ವಲಯದಲ್ಲಿ ಸಾಕಷ್ಟು ಪ್ರಚಾರವನ್ನು ನೀಡಿತ್ತು. ಈ ಉದ್ದೇಶಕ್ಕಾಗಿ ಒಂದು ಕರಪತ್ರ ಕೂಡ ಹೊರಡಿಸಿತ್ತು. ಅದರ ವಿವರ ಹೀಗಿದೆ :

1. ಕಾಗೋಡು ರೈತರು ನೂರಾರು ವರ್ಷಗಳಿಂದ ಸಾಗುವಳಿ ಮಾಡುತ್ತ ಬಂದಿರುವ ಜಮೀನಿನಲ್ಲಿ ಪ್ರವೇಶಿಸಿದೊಡನೆ ದಸ್ತಗಿರಿ ಮಾಡಲಾಗುತ್ತಿದೆ.

2. ಈವರೆಗೂ ಯಾವ ರೈತರು ಜಮೀನನ್ನು ಬಿಟ್ಟಿರುವುದಾಗಿ ಹಿಡುವಳಿದಾರರಿಗೆ ಬರೆದುಕೊಟ್ಟಿರುವುದಿಲ್ಲ; ಇಲ್ಲವೇ ಬಿಡುತ್ತೇವೆಂದು ಹೇಳಿಕೆ ಕೊಟ್ಟಿರುವುದಿಲ್ಲ.

3. ಹಿಡುವಳಿದಾರರು ರೈತರಿಗೆ ಯಾವುದೇ ವಿಧವಾದ ಲೇಖೀ ನೋಟೀಸುಗಳನ್ನು ಕೊಟ್ಟು ಜಮೀನು ಬಿಡುವುದಕ್ಕೆ ತಿಳಿಸಿರುವುದಿಲ್ಲ.

4. 1942ನೇ ಸಾಲಿನಿಂದೀಚೆಗೆ ಶೇ.30 ರಷ್ಟು ಗೇಣಿ ಹೆಚ್ಚಿಸಿದ್ದಾರೆ. ಆದರೆ ಜಮೀನಿನಲ್ಲಿ ಯಾವ ಹೊಸ ಕಾಮಗಾರಿಯನ್ನೂ ಮಾಡಿಸಿರುವುದಿಲ್ಲ.

5. ಪ್ರತಿಯೊಂದು ರೈತ ಕುಟುಂಬದಿಂದ ವರ್ಷಕ್ಕೆ ಐವತ್ತು ಆಳುಗಳವರೆಗೆ ಬಿಟ್ಟಿ ದುಡಿಮೆ ಮಾಡಿಸಿ ಪ್ರಯೋಜನ ಪಡೆಯುತ್ತಿದ್ದಾರೆ. ಮತ್ತು ರೈತರ ಆತ್ಮಗೌರವಕ್ಕೂ ಸಾಮಾಜಿಕ ಗೌರವಕ್ಕೂ ಕುಂದುಬರುವ ರೀತಿಯಲ್ಲಿ ಕೆಲಸಗಳನ್ನು ಮಾಡಿಸುತ್ತಿದ್ದರು.

6. ಅಳತೆಯ ವಿಷಯದಲ್ಲಿ ವಿವಾದ ಬಂದ 49 — 50 ಮತ್ತು 50 — 51 ನೇ ಸಾಲಿನಲ್ಲಿ ಹಿಡುವಳಿದಾರರಿಗೆ ಕೊಡಬೇಕಾದ ಗೇಣಿಯ ಧಾನ್ಯವನ್ನು ಹಿಡುವಳಿದಾರರು ತೆಗೆದುಕೊಂಡು ಕ್ರಮವಾದ ರಸೀದಿ ಕೊಡಲು ಒಪ್ಪದಿರುವುದರಿಂದ ಸರ್ಕಾರೀ ಡಿಪೋಕ್ಕೆ ಹಿಡುವಳಿದಾರರ

[illegible]

[illegible]

[illegible]

[illegible]

[illegible]

[illegible]

ಹೆಸರಿನಲ್ಲಿ ಪಾವತಿ ಮಾಡಿ ರಸೀದಿ ಪಡೆಯಲಾಗಿದೆ. ಡಿಪೋದಲ್ಲಿಯೂ ಈ ಬಾಬ್ತು ಹಣವನ್ನೆಲ್ಲ ಹಿಡುವಳಿದಾರರು ತೆಗೆದುಕೊಂಡಿರುತ್ತಾರೆ-ಎಂದು ಆಪಾದಿಸಿತ್ತು. (ಉದ್ಧೃತ: ಜಿ.ರಾಜಶೇಖರ್, ಪು: 81 — 82).

ಸೋಷಲಿಸ್ಟ್ ಪಕ್ಷ ಕಾಗೋಡು ರೈತನ ಸಮಸ್ಯೆಗಳ ಮೇಲ್ಕಂಡ ಅಂಶಗಳನ್ನು ಸರ್ಕಾರದ ಗಮನಕ್ಕೆ ತಂದಿತು. ಇದೇ ಸಮಯದಲ್ಲಿ ಪಕ್ಷದ ರಾಜ್ಯಾಧ್ಯಕ್ಷರಾಗಿದ್ದ ಸಿ.ಜಿ.ಕೆ.ರೆಡ್ಡಿಯವರು ಈ ಸಮಸ್ಯೆಗಳಿಗೆ ಪರಿಹಾರ ಸೂಚಿಸಿ ಅವುಗಳನ್ನೆಲ್ಲ ಕೂಡಲೆ ಬಗೆಹರಿಸುವಂತೆ ಅಂದಿನ ಗೃಹಮಂತ್ರಿಗಳಿಗೆ ಪತ್ರ ಬರೆದಿದ್ದರು.(ಜಿ.ರಾಜಶೇಖರ್, ಪು: 82).

ಹೀಗೆ ಸತ್ಯಾಗ್ರಹ ನಡೆಯುತ್ತಿದ್ದಾಗ ಸರ್ಕಾರದ ಗಮನ ಈ ಸಮಸ್ಯೆಯ ಕಡೆ ಹರಿಯಿತು. 1951ರ ಮೇ 18 ರಂದು ಈ ಸಮಸ್ಯೆಯ ಇತ್ಯರ್ಥಕ್ಕೆ ಶಿವಮೊಗ್ಗದಲ್ಲಿ ಒಂದು ಸಂಧಾನ ಸಭೆಯನ್ನು ಸರ್ಕಾರ ಏರ್ಪಡಿಸಿತು. ಆದರೆ ಜಮೀನ್ದಾರರು ಯಾವ ರಾಜಿಗೂ ಸಿದ್ಧರಿರಲಿಲ್ಲ. ಗೇಣಿ ಕಡಿಮೆ ಮಾಡಲಿಕ್ಕೂ ಒಪ್ಪದೆ ರೈತರಿಗೆ ಗದ್ದೆಯನ್ನು ನೀಡುವುದಿಲ್ಲವೆಂದು ಹಟಹಿಡಿದರು. ಆಗ ಸರ್ಕಾರ ಸಮಸ್ಯೆಯನ್ನು ಇತ್ಯರ್ಥಗೊಳಿಸಲು ಬೇರೆಯದೇ ಆದ ಪರಿಹಾರವನ್ನು ರೈತರ ಮುಂದಿಟ್ಟಿತು. ರೈತರು ಕಾಗೋಡು ಜಮೀನ್ದಾರರಿಗೆ ಭೂಮಿಯನ್ನು ಬಿಟ್ಟುಕೊಟ್ಟರೆ ಪರಿಹಾರರೂಪವಾಗಿ ಪಕ್ಕದ ಗ್ರಾಮವಾದ ಕೆಂಚಾಪುರದಲ್ಲಿ ಉಚಿತ ದರಖಾಸ್ತು ಭೂಮಿಯನ್ನು ನೀಡುವುದಾಗಿ ತಿಳಿಸಿತು. ಈ ಸಲಹೆಯನ್ನು ಮಲೆನಾಡು ಗೇಣಿದಾರರ ಸಂಘ ಒಪ್ಪಿಕೊಂಡಿತು. ರೈತ ಸಂಘದವರೂ ಇದನ್ನು ಒಪ್ಪಿಕೊಂಡಿದ್ದರೆಂದು ಹೇಳಲಾಗಿದೆ. ಹೋರಾಟದಲ್ಲಿ ಸಾಕಷ್ಟು ನೊಂದಿದ್ದ ರೈತಸಂಘದವರು ಈ ಸಲಹೆಯನ್ನು ಒಪ್ಪಿಕೊಂಡಿದ್ದರಲ್ಲಿ ಆಶ್ಚರ್ಯವಿಲ್ಲ.

ಈ ಹಂತದಲ್ಲಿ ಅಂದರೆ ಸರ್ಕಾರ ಸೂಚಿಸಿದ ಸಲಹೆಯನ್ನು ರೈತಸಂಘ ಒಪ್ಪಿಕೊಂಡಿದ್ದನ್ನು ಸೋಷಲಿಸ್ಟ್ ಪಕ್ಷ ತೀವ್ರವಾಗಿ ವಿರೋಧಿಸಿ ತಾನೇ ಸತ್ಯಾಗ್ರಹ ಮುಂದುವರಿಸಲು ನಿರ್ಧರಿಸಿತು. ಇದಕ್ಕೆ ಉದಾಹರಣೆ ಸಂಧಾನ ನಡೆದ ದಿನವೇ ಸಂಘದ ಪ್ರತಿನಿಧಿಗಳಿಗೆ ಗೋಪಾಲ ಗೌಡರು ಸಿಕ್ಕಾಗ ವಿಷಯವನ್ನೆಲ್ಲ ತಿಳಿದು, ಕಾಗೋಡು ಭೂಮಿಯನ್ನು ಜಮೀನ್ದಾ

[illegible]

ರರಿಗೇ ಬಿಟ್ಟುಕೊಟ್ಟು ಕೆಂಜಿಗಾಪುರಕ್ಕೆ ತೆರಳುವ ನಿರ್ಧಾರವನ್ನು ತೀವ್ರವಾಗಿ ವಿರೋಧಿಸಿದರು. ಗೋಪಾಲಗೌಡರ ಮಾತನ್ನು ರೈತಸಂಘದ ಮುಖಂಡ ಮೂಕಪ್ಪನವರು ಹೀಗೆ ಹೇಳಿದ್ದಾರೆ:'' ಇವತ್ತು ಕಾಗೋಡಿನಲ್ಲಿ ಒಕ್ಕಲುಗಳು ಭೂಮಿ ಬಿಡಿಸಿದರೆ ನಾಳೆ ಪ್ರಾಂತ್ಯದಲ್ಲಿ ಎಲ್ಲಾ ಜಮೀನ್ದಾರರೂ ತಮ್ಮ ಒಕ್ಕಲುಗಳನ್ನು ಹೊಡೆದು ಓಡಿಸಿದ್ದಾರೆ'' (ಉದ್ಧೃತ: ಅದೇ,ಪುಟ: 86). ಈ ಮಾತನ್ನು ಹೇಳಿ ಸತ್ಯಾಗ್ರಹವನ್ನು ಸಮಾಜವಾದಿಗಳು ಮುಂದುವರಿಸುತ್ತೇವೆ ಎಂದು ಹೇಳಿದರಂತೆ. ನಂತರ ಮೇ ತಿಂಗಳ 21 ರ ಸಂಜೆ ಸಾಗರದಲ್ಲಿ ನಡೆದ ರೈತಸಂಘದ ಸಭೆಯಲ್ಲಿ ರೈತಸಂಘದ ಗಣಪತಿಯಪ್ಪ ಮತ್ತು ಗೋಪಾಲಗೌಡರು ಮಾತನಾಡಿ ಹೋರಾಟವನ್ನು ಮುಂದುವರಿಸುವ ನಿರ್ಧರವನ್ನು ಪ್ರಕಟಿಸಿದರು. ಸೋಷಲಿಸ್ಟ್ ಪಕ್ಷದ ಈ ನಿರ್ಧಾರ ಕೇಳಿ ಮಲೆನಾಡು ರೈತಸಂಘ ಸತ್ಯಾಗ್ರಹದಿಂದ ಹಿಂದೆ ಸರಿಯಿತು.

ಸತ್ಯಾಗ್ರಹದಲ್ಲಿ ಸೋಷಲಿಸ್ಟ್ ಪಕ್ಷ ನೇರವಾಗಿ ಭಾಗವಹಿಸಿದ ನಂತರ ಹೋರಾಟಕ್ಕೆ ಹೊಸ ತಿರುವು ನೀಡಿದಂತಾಯಿತು. ಕೆಂಪುಟೋಪಿ, ಕೆಂಪು ಬಾವುಟ ಹಿಡಿದ ಸೋಷಲಿಸ್ಟ್ ಪಕ್ಷದ ಕಾರ್ಯಕರ್ತರು ಮಲೆನಾಡಿನಲ್ಲಿ ಮೊದಲಬಾರಿಗೆ 'ಉಳುವವನೇ ನೆಲದೊಡೆಯ' ಎಂಬ ಘೋಷಣೆಯನ್ನು ಕೂಗಿದರೆಂದು ಹೇಳಲಾಗಿದೆ. ಇದುವರೆಗೆ ಕಾಗೋಡಿಗೆ ಮಾತ್ರ ಸೀಮಿತವಾಗಿದ್ದ ಸತ್ಯಾಗ್ರಹ ಸಮಾಜವಾದಿಗಳ ಆಗಮನದ ನಂತರ ರಾಜ್ಯ ಹಾಗೂ ರಾಷ್ಟ್ರಮಟ್ಟದ ಗಮನಸೆಳೆಯಿತು. ಅಲ್ಲದೆ, ಇದುವರೆಗೆ ಸಾಗರ ತಾಲ್ಲೂಕು ರೈತಸಂಘ ಅರ್ಥಾತ್ ದೀವ ಗೇಣಿದಾರರ ಹೋರಾಟವಾಗಿದ್ದ ಸತ್ಯಾಗ್ರಹ ಮೊದಬಾರಿಗೆ ಜಾತ್ಯತೀತ ಸ್ವರೂಪ ಪಡೆಯಿತು. ಕಾರಣ ರಾಜ್ಯದ ಬೇರೆ ಬೇರೆ ಭಾಗಗಳಿಂದ ಬಂದ ಸೋಷಲಿಸ್ಟ್ ಪಕ್ಷದ ಕಾರ್ಯಕರ್ತರು ಒಂದೇ ಜಾತಿಯವರಾಗಿರಲಿಲ್ಲವೆಂಬುದು ಒಂದು ಕಾರಣವಾದರೆ, ಸಮಾಜವಾದಿ ಸಿದ್ಧಾಂತದ ಪ್ರಮುಖ ಉದ್ದೇಶ ಜಾತ್ಯತೀತ, ವರ್ಗರಹಿತ ಸಮಾಜದ ಸ್ಥಾಪನೆಯ ಗುರಿ ಸಹಾ ಅಷ್ಟೇ ಮುಖ್ಯವಾದುದು.

ಶಿವಮೊಗ್ಗದಲ್ಲಿ ಸಂಧಾನ ಸಭೆ ನಡೆದು (18.5.51) ವಿಫಲವಾದ ಮರು ದಿವಸ, 19.5.51 ರಂದು ಸಮಾಜವಾದಿಗಳು ಸತ್ಯಾಗ್ರಹದಲ್ಲಿ ಧುಮುಕಿದರೆಂದು ಹೇಳಲಾಗಿದೆ. ಅಂದು ಪಕ್ಷದ ರಾಜ್ಯ ಕಾರ್ಯದರ್ಶಿ ಜಿಲ್ಲೆಯ ಪ್ರಮುಖ ಸಮಾಜವಾದಿ ಮುಖಂಡರೂ ಆದ ಜಿ.ಸದಾಶಿವರಾವ್ 5 ಜನ ರೈತರೊಡನೆ ಸತ್ಯಾಗ್ರಹ ಆಚರಿಸಿ ಬಂಧಿತರಾದರೆಂದೂ

[illegible]

[illegible]

[illegible]

[illegible]

ಗಣಪತಿಯಪ್ಪನವರ ಡೈರಿಯನ್ನು ಉಲ್ಲೇಖಿಸಿ ಹೆಚ್.ಸಿ.ವಿಷ್ಣುಮೂರ್ತಿಯವರು 'ಗೋಪಾಲಗೌಡ ಶಾಂತವೇರಿ' ಎಂಬ ಪುಸ್ತಕದಲ್ಲಿ ತಿಳಿಸಿದ್ದಾರೆ.

ಸೋಷಲಿಸ್ಟ್ ಪಕ್ಷ ಸತ್ಯಾಗ್ರಹಕ್ಕೆ ಇಳಿದಮೇಲೆ ಸತ್ಯಾಗ್ರಹ ಇನ್ನಷ್ಟು ಚುರುಕುಗೊಂಡಿತ್ತು. ಜಿಲ್ಲೆ ಹಾಗೂ ರಾಜ್ಯದ ಬೇರೆಬೇರೆ ಭಾಗಗಳಿಂದ ಬಂದ ಕಾರ್ಯಕರ್ತರು ಪ್ರತಿನಿತ್ಯ ಸತ್ಯಾಗ್ರಹವನ್ನಾಚರಿಸಿ ಜೈಲುಸೇರುವುದು ಒಂದು ಕಡೆಯಾದರೆ, ಹೋರಾಟವನ್ನು ಜೀವಂತವಾಗಿಡಲು ಹಾಗೂ ಅದರ ವ್ಯಾಪ್ತಿಯನ್ನು ಇನ್ನಷ್ಟು ವಿಸ್ತರಿಸಲು ಜಿಲ್ಲೆಯ ಪ್ರಮುಖ ಸಮಾಜವಾದಿ ಸಂಘಟಕರಾದ ಗೋಪಾಲಗೌಡರು, ವೈ.ಆರ್. ಪರಮೇಶ್ವರಪ್ಪ ಮುಂತಾದವರು ಮಲೆನಾಡಿನ ಹಳ್ಳಿಹಳ್ಳಿಗೂ ಭೇಟಿಕೊಟ್ಟರು. ಸತ್ಯಾಗ್ರಹದ ಮಹತ್ವ ಮತ್ತು ಅದಕ್ಕೆ ಬೆಂಬಲ ನೀಡುವುದರ ಮಹತ್ವನ್ನು ರೈತರಲ್ಲಿ ಮೂಡಿಸುವುದರ ಜೊತೆಗೆ ಹೋರಾಟವನ್ನು ಜಾಗೃತಗೊಳಿಸಿ ಪ್ರಬಲ ಸಂಘಟನೆಯನ್ನು ಕಟ್ಟುವುದಕ್ಕೋಸ್ಕರ ಬಿರುಸಿನ ಪ್ರಚಾರ ಕಾರ್ಯವನ್ನು ಕೈಗೊಂಡಿದ್ದರು. ಈ ಸಂದರ್ಭದಲ್ಲಿ ಹೋರಾಟ ಚುರುಕುಗೊಂಡು ರಾಜ್ಯಾದ್ಯಂತ ವ್ಯಾಪಿಸುವ ಸಾಧ್ಯತೆಯನ್ನು ಮನಗಂಡ ರಾಜ್ಯ ಸರ್ಕಾರ ಸಮಸ್ಯೆಯನ್ನು ಇತ್ಯರ್ಥಗೊಳಿಸಲು ಒಂದು ಸಂಧಾನ ಸಭೆಯನ್ನು ದಿನಾಂಕ 26.5.51 ರಂದು ಅಂದರೆ ಸಮಾಜವಾದಿಗಳು ಸತ್ಯಾಗ್ರಹದಲ್ಲಿ ಭಾಗವಹಿಸಿದ ಒಂದೇವಾರದಲ್ಲಿ ಸಾಗರದಲ್ಲಿ ಕರೆದರು. ಸರ್ಕಾರದ ಪರವಾಗಿ ಗೃಹಮಂತ್ರಿ ಟಿ.ಮರಿಯಪ್ಪ ರೈತರೊಡನೆ ಚರ್ಚಿಸಿ ಸಂಧಾನಮಾಡಲು ಪ್ರಯತ್ನಿಸಿದರು. ಆದರೆ ಸಂಧಾನ ವಿಫಲವಾಯಿತೆಂದು ತಿಳಿದುಬರುತ್ತದೆ.

ಸಮಾಜವಾದಿಗಳು ಸತ್ಯಾಗ್ರಹದಲ್ಲಿ ಭಾಗವಹಿಸಿದ ನಂತರ ಸತ್ಯಾಗ್ರಹಕ್ಕೆ ಒಂದು ಸೈದ್ಧಾಂತಿಕ ಚೌಕಟ್ಟನ್ನು ನೀಡಿದಂತಾಯಿತು. ಹೋರಾಟ ಇನ್ನಷ್ಟು ಚುರುಕುಗೊಂಡಿತು. ಹಾಗೂ ಅದರ ಸ್ವರೂಪಕೂಡ ಬದಲಾಯಿತು. ಆದರೆ ಸತ್ಯಾಗ್ರಹದ ಉದ್ದೇಶದಲ್ಲಿ ಯಾವುದೇ ಬದಲಾವಣೆಯಾಗಲಿಲ್ಲ ಎಂಬ ಮಾತು ನಿಜ. 'ಇಂಕ್ವಿಲಾಬ್ ಜಿಂದಾಬಾದ್', 'ಉಳುವವನೆ ನೆಲದೊಡೆಯ', 'ಜಮೀನ್ದಾರಿ ರದ್ದಾಗಲಿ' ಎಂಬ ಘೋಷಣೆ

[illegible]

ಗಳು ಕೇಳಿ ಬಂದವೆಂಬುದೂ ನಿಜ. ಆದರೆ ಇವುಗಳ ಅರ್ಥ ಗೌಣವಾಗಿತ್ತು. ಅದಕ್ಕೆ ಕಾರಣ ಸಮಾಜವಾದಿಗಳು ಕ್ರಾಂತಿಕಾರಕ ಬದಲಾವಣೆಗೆ ಕೈ ಹಾಕುವಷ್ಟು ಪ್ರಬಲರಾಗಿರಲಿಲ್ಲ. ಆರ್ಥಿಕ ಹಾಗೂ ಜನ ಬೆಂಬಲ ಈ ಎರಡೂ ದೃಷ್ಟಿಯಿಂದ. ಇದಕ್ಕೆ ಉದಾಹರಣೆಯಾಗಿ ಕಾಗೋಡು ಸತ್ಯಾಗ್ರಹ ಸಮಯದಲ್ಲಿ ಸೋಷಲಿಸ್ಟ್ ಪಕ್ಷದ ಸ್ಥಿತಿಗತಿಯ ಬಗ್ಗೆ ಡಾ.ರಾಜಶೇಖರ ತಮ್ಮ 'ಕಾಗೋಡು ಸತ್ಯಾಗ್ರಹ' ಪುಸ್ತಕದಲ್ಲಿ ಹೇಳಿರುವ ಸಾಲುಗಳನ್ನು ಉಲ್ಲೇಖಿಸಿ ಮೇಲಿನ ಅಂಶವನ್ನು ಸ್ಪಷ್ಟಪಡಿಸಿಕೊಳ್ಳಬಹುದು: ''ರಾಜಕೀಯ ಪಕ್ಷವೊಂದಕ್ಕೆ ಮೂಲಭೂತ ಬದಲಾವಣೆಯ ಹಂಬಲವೊಂದಿದ್ದರೆ ಸಾಲದು ಸಂಘಟನೆಯ ಮುಖಾಂತರ ಅದಕ್ಕೋಸ್ಕರ ಯತ್ನಿಸುವುದಕ್ಕೆ ಜನ ಬೆಂಬಲವೂ ಬೇಕು. ಪ್ರಾಂತ್ಯದಲ್ಲಿ ಆಗ ಸೋಷಲಿಸ್ಟ್ ಪಕ್ಷಕ್ಕೆ ಇಂತಹ ಹಂಬಲ ಮಾತ್ರ ಇತ್ತು. ಜನ ಬೆಂಬಲ ಏನೇನೂ ಇರಲಿಲ್ಲ'' (ಪು:97).

ಹೀಗಿದ್ದೂ ಸಮಾಜವಾದಿಗಳು ಹೋರಾಟವನ್ನು ಜೀವಂತವಾಗಿಡಲು ಶಕ್ತಿ ಮೀರಿ ಶ್ರಮಿಸಿದರು. ಆರ್ಥಿಕ ಸಮಸ್ಯೆ ತೀವ್ರವಾಗಿದ್ದರೂ ರಾಜ್ಯದ ಬೇರೆ ಬೇರೆ ಪ್ರದೇಶಗಳಾದ ಕೋಲಾರ, ದಾವಣಗೆರೆ, ದಕ್ಷಿಣಕನ್ನಡ ಮುಂತಾದ ಪ್ರದೇಶಗಳಿಂದ ಸತ್ಯಾಗ್ರಹಿಗಳು ಬಂದು ಸತ್ಯಾಗ್ರಹ ಆಚರಿಸುತ್ತಿದ್ದರು. ಸತ್ಯಾಗ್ರಹ ಅಹಿಂಸಾತ್ಮಕವಾಗಿತ್ತು. ಸಮಾಜವಾದಿಗಳು ಎಲ್ಲೂ ಹಿಂಸೆಗೆ ಎಡೆಕೊಡಲಿಲ್ಲ ಎಂದು ತಿಳಿದು ಬರುತ್ತದೆ. ಹೀಗಿದ್ದೂ ಸರ್ಕಾರ ಹೋರಾಟವನ್ನು ಹತ್ತಿಕ್ಕಲು ಹಿಂಸಾಮಾರ್ಗವನ್ನೇ ಅನುಸರಿಸಿತೆಂದು ಕಂಡು ಬರುತ್ತದೆ. ಸರ್ಕಾರ ಸಂಪೂರ್ಣ ಜಮೀನ್ದಾರರ ಪರವಹಿಸಿತ್ತೆಂದು ಹೇಳಲಾಗಿದೆ.

ಹೋರಾಟಕ್ಕೆ ಇನ್ನಷ್ಟು ಜನ ಬೆಂಬಲಗಳಿಸಲು ಸಮಾಜವಾದಿಗಳು ಮಲೆನಾಡು ಪ್ರದೇಶಗಳಲ್ಲಿ ವ್ಯಾಪಕ ಪ್ರಚಾರ ಕಾರ್ಯ ನಡೆಸಿದರು. ಪೋಲೀಸ್ ವಾರೆಂಟ್ ಇದ್ದರೂ ಪ್ರಮುಖ ಸಮಾಜವಾದಿ ಮುಖಂಡರಾದ ಗೋಪಾಲಗೌಡ, ಭಾ.ಸು. ಕೃಷ್ಣಮೂರ್ತಿ, ಎ.ವಿ.ಶ್ರೀನಿವಾಸ, ಸೀತಾರಾಮ ಅಯ್ಯಂಗಾರ್, ಗರುಡಶರ್ಮ ಮುಂತಾದವರು ತಲೆ ಮರೆಸಿಕೊಂಡು ಪ್ರಚಾರ ಕಾರ್ಯ ನಡೆಸಿದರು. ಗೋಪಾಲಗೌಡರು 3.7.51 ರಂದು ಪೋಲೀಸರ ಕೈಗೆ ಸೆರೆಸಿಕ್ಕಾಗ ಚಳುವಳಿಗೆ ಚಾಲನಾ ಶಕ್ತಿ ನಿಂತಂತಾಯಿತು.

[illegible]

[illegible]

[illegible]

ಹೋರಾಟ ಮುಂದುವರಿಯುತ್ತಾದರೂ ಅದು ಮೊದಲಿನ ಪ್ರಖರತೆಯನ್ನು ಕಳೆದುಕೊಂಡಿತ್ತು. ಸತ್ಯಾಗ್ರಹ ಹಿನ್ನಡೆ ಅನುಭವಿಸಲು ಇನ್ನೊಂದು ಪ್ರಮುಖ ಕಾರಣವೆಂದರೆ ಸತ್ಯಾಗ್ರಹ ಜೂನ್ ತಿಂಗಳಿಗೆ ಕಾಲಿಟ್ಟ ನಂತರ ಅಕ್ಕಪಕ್ಕದ ಹಳ್ಳಿಯ ರೈತರು ಸತ್ಯಾಗ್ರಹದಲ್ಲಿ ಭಾಗವಹಿಸುವುದು ಕಡಿಮೆಯಾಯಿತು. ಕಾರಣ ಮಳೆಗಾಲ ಆರಂಭವಾಗಿದ್ದು ರೈತರು ತಮ್ಮ ತಮ್ಮ ಹೊಲಗಳಲ್ಲಿ ಬಿತ್ತನೆ ಕಾರ್ಯದಲ್ಲಿ ಮಗ್ನರಾದರು. ಆದರೂ ಸಮಾಜವಾದಿಗಳು ಹೋರಾಟವನ್ನು ಕೈಬಿಡಲಿಲ್ಲ. ಹೋರಾಟಕ್ಕೆ ಪುನಃ ಚಾಲನೆ ನೀಡುವ ದೃಷ್ಟಿಯಿಂದ ಲೋಹಿಯಾರನ್ನು ಕಾಗೋಡು ಸತ್ಯಾಗ್ರಹದಲ್ಲಿ ಭಾಗವಹಿಸುವ ವ್ಯವಸ್ಥೆ ಮಾಡಿದರು.

ಲೋಹಿಯಾ ಜೂನ್ 13 – 1951 ರಂದು ಸಾಗರಕ್ಕೆ ಬಂದು ಸತ್ಯಾಗ್ರಹದ ಉದ್ದೇಶ ಮತ್ತು ಮಹತ್ವದ ಬಗ್ಗೆ ಮಾತನಾಡಿದರು. ಹಾಗೂ ಜೈಲಿನಲ್ಲಿದ್ದ ಸತ್ಯಾಗ್ರಹಿಗಳೊಡನೆ ಚರ್ಚಿಸಿದರೆಂದು ಗಣಪತಿಯಪ್ಪನವರ ಡೈರಿಯನ್ನು ಉಲ್ಲೇಖಿಸಿ ಹೆಚ್.ಸಿ. ವಿಷ್ಣುಮೂರ್ತಿಯವರು ತಾವು ಬರೆದ 'ಗೋಪಾಲ ಗೌಡ ಶಾಂತವೇರಿ' ಎಂಬ ಪುಸ್ತಕದಲ್ಲಿ ತಿಳಿಸಿದ್ದಾರೆ. ಇದರ ಮಾರನೆಯ ದಿನ ಲೋಹಿಯಾರವರು ಕರ್ನಾಟಕದ ಇನ್ನಿತರ ಸಮಾಜವಾದಿಗಳಾದ ಬಾದ್ರಿ ಶಾಮಣ್ಣ, ಮುಲ್ಕಾಗೋವಿಂದರೆಡ್ಡಿ, ಎಂ.ಪಿ.ಈಶ್ವರಪ್ಪ, ಶ್ರೀಕಂಠಯ್ಯ ಹಾಗೂ ಇನ್ನಿತರರೊಡನೆ ಸತ್ಯಾಗ್ರಹ ಆಚರಿಸಿದರು. ಜೊತೆಗೆ ಸುಮಾರು ಎರಡುಸಾವಿರ ಜನ ರೈತರು ಅಂದಿನ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರೆಂದು ತಿಳಿದುಬರುತ್ತದೆ. ಸರ್ಕಾರ ಲೋಹಿಯಾ ಮತ್ತು ಅವರ ಸಂಗಡಿಗರನ್ನು ಬಂಧಿಸಿತು.

ಕಾಗೋಡು ಸತ್ಯಾಗ್ರಹದಲ್ಲಿ ಲೋಹಿಯಾ ಭಾಗವಹಿಸಿದ್ದು, ತುಂಬ ಮಹತ್ವಪೂರ್ಣವಾದ ಪರಿಣಾಮ ಬೀರಿತ್ತು. ಹೋರಾಟಕ್ಕೆ ರಾಷ್ಟ್ರಮಟ್ಟದ ಪ್ರಚಾರ ಸಿಕ್ಕಿದ್ದು ಒಂದು ಕಡೆಯಾದರೆ, ರೈತ ಸಮುದಾಯದಲ್ಲಿ ಹೊಸ ಚೈತನ್ಯ ಮೂಡಿದಂತಾಯಿತು. ಜೊತೆಗೆ ರಾಜ್ಯಸರ್ಕಾರ ಸಮಸ್ಯೆಯನ್ನು ಶೀಘ್ರವೇ ಪರಿಹರಿಸುವುದಕ್ಕಾಗಿ ತನ್ನ ಗಮನವನ್ನು ಇತ್ತ ಕಡೆ ಹರಿಸಿತು.

ಲೋಹಿಯಾ ಬಂದು ಹೋದನಂತರ ಸತ್ಯಾಗ್ರಹ ಪುನಃ ಮುಂದುವರಿಯಿತಾದರೂ ಅದು ನೀರಸವಾಗಿತ್ತು. ಕಾರಣ ಸಮಾಜವಾದಿಗಳೆಲ್ಲ ಜೈಲು ಸೇರಿದ್ದರು. ಲೋಹಿಯಾ ಕೂಡ ಬಂಧನಕ್ಕೊಳಗಾಗಿ ಬಿಡುಗಡೆ ಹೊಂದಿದ್ದರು. ರೈತರು ಸತ್ಯಾಗ್ರಹ ಮುಂದುವರಿಸುವಷ್ಟು ಶಕ್ತರಾಗಿರಲಿಲ್ಲ. ಇಂತಹ ಸಮಯದಲ್ಲಿ ಸತ್ಯಾಗ್ರಹ ಮುಂದುವರಿಸುವುದು ಕಷ್ಟ ಎಂದು ತಿಳಿದಿದ್ದರೂ ಸಮಾಜವಾದಿಗಳು ಹೋರಾಟವನ್ನು ಮುಂದುವರಿಸಿದರು. ಜೊತೆ ಜೊತೆಗೆ ಸರ್ಕಾರದೊಡನೆ ಸಮಸ್ಯೆಯನ್ನು ಚರ್ಚಿಸಿ ಆದಷ್ಟು ಶೀಘ್ರ ಇತ್ಯರ್ಥಗೊಳಿಸಲು ಸಿದ್ಧರಾಗಿದ್ದರೆಂದು ತಿಳಿದುಬರುತ್ತದೆ. ಈ ಸಮಯದಲ್ಲಿ ಸರ್ಕಾರ ಕೂಡ ಸಮಸ್ಯೆಯನ್ನು ಇತ್ಯರ್ಥಗೊಳಿಸಲು ಉತ್ಸುಕವಾಗಿತ್ತೆಂದು ತಿಳಿದುಬರುತ್ತದೆ. ಕಾರಣ 1952 ರಲ್ಲಿ ನಡೆಯಬೇಕಾಗಿದ್ದ ಪ್ರಥಮ ಸಾರ್ವತ್ರಿಕ ಚುನಾವಣೆ ಆಗಲೇ ಘೋಷಣೆಯಾಗಿತ್ತು.

ಹೀಗೆ ಸಮಸ್ಯೆಯ ಇತ್ಯರ್ಥಕ್ಕೆ ತಕ್ಕ ಸನ್ನಿವೇಶ ನಿರ್ಮಾಣವಾದೊಡನೆ ಸೋಷಲಿಸ್ಟ್ ಪಕ್ಷದ ಮುಖಂಡರಾದ ಸಿ.ಜಿ.ಕೆ.ರೆಡ್ಡಿ ಹಾಗೂ ಹಿಂದಕಿಸಾನ ಪಂಚಾಯತನ ರಾಮಾನಂದನ ಮಿಶ್ರ ಸರ್ಕಾರದೊಡನೆ ಮಾತುಕತೆ ನಡೆಸಿದರು. ಸಿ.ಜಿ.ಕೆ.ರೆಡ್ಡಿಯವರು ರೈತರ ಪರವಾಗಿ ಈ ಕೆಳಕಂಡ ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟರು:

1. ಗೇಣಿದಾರರಿಗೆ ಭೂಮಿಯನ್ನು ಹಿಂತಿರುಗಿಸುವುದು ;
2. ವಿವಾದಾಂಶಗಳು ಮತ್ತು ಪೋಲೀಸ್ ದೌರ್ಜನ್ಯದ ಬಗ್ಗೆ ವಿಚಾರಣೆ;
3. ಎಲ್ಲ ಮೊಕದ್ದಮೆಗಳ ವಾಪಸಾತಿ;
4. ಸತ್ಯಾಗ್ರಹಿಗಳ ಬಿಡುಗಡೆ.

ಈ ಮೇಲಿನ ಬೇಡಿಕೆಗಳ ಬಗ್ಗೆ ಸರ್ಕಾರಕ್ಕೆ ಯಾವುದೇ ರೀತಿಯ ಭಿನ್ನಾಭಿಪ್ರಾಯವಿರಲಿಲ್ಲ. ಭೂಮಾಲೀಕರು ಗೇಣಿದಾರರನ್ನು ಒಕ್ಕಲೆಬ್ಬಿಸಬಾರದೆಂಬ ವಿಷಯದ ಬಗ್ಗೆ ಸರ್ಕಾರಕ್ಕೂ ಸಹಾನುಭೂತಿಯಿತ್ತು. ಉಳಿದ ಇನ್ನಿತರ ಬೇಡಿಕೆಗಳನ್ನು ಸರ್ಕಾರ ನಿಧಾನವಾಗಿ ಬಗೆಹರಿಸಿದಂತೆ ಕಂಡುಬರುತ್ತದೆ. 1952ರ ಆರಂಭದ ವೇಳೆಗೆ ಜೈಲಿನಲ್ಲಿದ್ದ ಎಲ್ಲ ಸತ್ಯಾಗ್ರಹಿಗಳನ್ನು ಬಂಧಮುಕ್ತಗೊಳಿಸುವ ಮೂಲಕ ಸತ್ಯಾಗ್ರಹಕ್ಕೆ ಅಂತಿಮ ತೆರೆಳೆದಂತೆ ತಿಳಿದುಬರುತ್ತದೆ.

[illegible]

(ಆ) 1952 ಮತ್ತು 1954 – 55 ರ ಭೂ ಸುಧಾರಣಾ ಶಾಸನಗಳು ಮತ್ತು ಸಮಾಜವಾದಿಗಳು :

ಕಾಗೋಡು ಸತ್ಯಾಗ್ರಹ ಜಿಲ್ಲೆಯ ಸೋಷಲಿಸ್ಟ್ ಪಕ್ಷ ನಡೆಸಿದ ಅತ್ಯಂತ ಮಹತ್ವದ ಹೋರಾಟವೆಂಬುದು ನಿರ್ವಿವಾದ. ಈ ಸತ್ಯಾಗ್ರಹದ ನಂತರವೂ ಸಮಾಜವಾದಿಗಳು ಜಿಲ್ಲೆಯಲ್ಲಿ ಸಾಕಷ್ಟು ಹೋರಾಟಗಳನ್ನು ನಡೆಸಿದರು. ಆದರೆ ಅವು ಕಾಗೋಡು ಸತ್ಯಾಗ್ರಹಕ್ಕೆ ಸರಿಸಾಟಿಯಾಗಲಿಲ್ಲ. ಅದಕ್ಕೆ ಕಾರಣಗಳು ಹಲವು. ಸತ್ಯಾಗ್ರಹ ಮುಗಿಯುತ್ತಿದ್ದಂತೆಯೇ ದೇಶದಲ್ಲಿ ಮೊಟ್ಟಮೊದಲ ಸಾರ್ವತ್ರಿಕ ಚುನಾವಣೆಗಳು ಘೋಷಿಸಲ್ಪಟ್ಟವು. (ಕಾಗೋಡು ಸತ್ಯಾಗ್ರಹ ಬೇಗನೆ ಮುಗಿಯಲಿಕ್ಕೆ ಇದೂ ಒಂದು ಕಾರಣವಾಗಿತ್ತು). ಜಿಲ್ಲೆಯ ಸಮಾಜವಾದಿಗಳು ಚುನಾವಣೆಯತ್ತ ತಮ್ಮ ಗಮನವನ್ನು ಹರಿಸಿದರು. ಜಿಲ್ಲೆಯ ಎಲ್ಲ 8 ವಿಧಾನ ಸಭಾಕ್ಷೇತ್ರಗಳಿಗೆ ಸ್ಪರ್ಧಿಸಿದರಾದರೂ ಗೋಪಾಲ ಗೌಡರೊಬ್ಬರು ಮಾತ್ರ ಸಾಗರ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾದರು. ಕಾಗೋಡು ಸತ್ಯಾಗ್ರಹ ನಿಸ್ಸಂದೇಹವಾಗಿ ಗೋಪಾಲಗೌಡರ ಗೆಲುವಿಗೆ ಕಾರಣವಾಗಿತ್ತು. ತಾಲ್ಲೂಕಿನ ಬಹುಸಂಖ್ಯಾತ ಗೇಣಿ ರೈತರು ಸೋಷಲಿಸ್ಟ್ ಪಕ್ಷವನ್ನು ಬೆಂಬಲಿಸಿದ್ದರೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಗೋಪಾಲಗೌಡರು ವಿಧಾನಸಭೆಗೆ ಆಯ್ಕೆಯಾಗಿದ್ದು ಜಿಲ್ಲೆಯ ಸಮಾಜವಾದಿ ಆಂದೋಲನದ ಮೇಲೆ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಸಾಕಷ್ಟು ಪರಿಣಾಮವನ್ನುಂಟು ಮಾಡಿತು. ಕಾಗೋಡು ಸತ್ಯಾಗ್ರಹ ಸೇರಿದಂತೆ ಅನೇಕ ಹೋರಾಟಗಳನ್ನು, ಸಮ್ಮೇಳನಗಳನ್ನು ನಡೆಸುವಲ್ಲಿ ಪ್ರಮುಖ ಪಾತ್ರವಹಿಸಿದ್ದ ಗೋಪಾಲಗೌಡರು ರಾಜ್ಯ ಹಾಗೂ ರಾಷ್ಟ್ರಮಟ್ಟದ ಹೋರಾಟದತ್ತ ಹೆಚ್ಚಿನ ಗಮನಕೊಟ್ಟರು. ಇದು ಜಿಲ್ಲೆಯ ಸಮಾಜವಾದಿ ಆಂದೋಲನದ ದೃಷ್ಟಿಯಿಂದ ನಷ್ಟವೇ ಆಗಿತ್ತು. ಜಿಲ್ಲೆಯಲ್ಲಿ ಮುಂದಿನ ಹೋರಾಟಗಳಿಗೆ ಮಾರ್ಗದರ್ಶಕರಾಗುವಂತಹ ಸಮರ್ಥರು ಇದ್ದರಾದರೂ ಗೋಪಾಲಗೌಡರಷ್ಟು ಸಾಮರ್ಥ್ಯ ಹೊಂದಿದವರು ಇರಲಿಲ್ಲವೆಂಬುದನ್ನು ಈಗ ಉಳಿದಿರುವ ಗೌಡರ ಸಂಗಾತಿಗಳೇ ಒಪ್ಪಿಕೊಳ್ಳುತ್ತಾರೆ.

[illegible]

[illegible]

[illegible]

ಕಾಗೋಡು ಸತ್ಯಾಗ್ರಹ ನಂತರ ಸೋಷಲಿಸ್ಟ್ ಪಕ್ಷ ಕೈಗೊಂಡ ಪ್ರಮುಖ ಹೋರಾಟ ಅಂದಿನ ಮೈಸೂರು ರಾಜ್ಯಸರ್ಕಾರ ಜಾರಿಗೆ ತಂದ 1952 ರ 'ಟೆನೆನ್ಸಿ ಕಾಯಿದೆ' ಮತ್ತು 1954 – 55 ರ 'ಧಾರ್ಮಿಕ ಜಹಗೀರಿ ಮತ್ತು ಇನಾಂ ರದ್ದಿಯಾತಿ' ಶಾಸನಗಳಿಗೆ ಸಂಬಂಧಿಸಿದ್ದು.

1952ರ ಶಾಸನ ಗೇಣೀರೈತರಿಗೆ ಭದ್ರತೆಯನ್ನೊದಗಿಸುವ ದೃಷ್ಟಿಯಿಂದ ರಚಿತವಾಗಿದ್ದರೂ ಜಮೀನ್ದಾರರಿಗೆ ತಮ್ಮ ಜಮೀನಿನಿಂದ ಗೇಣೀರೈತರನ್ನು ಹೊರ ಹಾಕಲಿಕ್ಕೆ ಸದಾವಕಾಶವನ್ನು ಕಲ್ಪಿಸಿಕೊಟ್ಟಿತ್ತು. ಈ ಲೋಪದೋಷವನ್ನು ಸೋಷಲಿಸ್ಟ್ ಪಕ್ಷ ತೀವ್ರವಾಗಿ ಖಂಡಿಸಿತು. ಪಕ್ಷದ ಕಾರ್ಯಕರ್ತರಾದ ಎನ್.ಕೆ.ಸೀತಾರಾಮ ಐಯ್ಯಂಗಾರ್ ಅವರು ಜುಲೈ 19, 1954ರ 'ತಾಯಿನಾಡು' ಪತ್ರಿಕೆಯಲ್ಲಿ ಈ ರೀತಿ ಬರೆದಿದ್ದಾರೆ: ''ಗೇಣಿ ಕಾನೂನಿನಲ್ಲಿ ಗೇಣಿದಾರ ರೈತನಿಗೆ ಉಳುಮೆಯಂತ ಹಕ್ಕನ್ನು ಕೊಟ್ಟಿದ್ದಾರೆ, ನಿಜ. ಆದರೆ ಕಾನೂನಿನಲ್ಲಿ ಒದಗಿರುವ ಈ ಅಲ್ಪ ಸೌಲಭ್ಯಗಳನ್ನು ರೈತರಿಗೆ ತಲುಪಿಸಬೇಕೆಂಬ ಕರ್ತವ್ಯವನ್ನು ಸರ್ಕಾರ ಮರೆತಂತಿದೆ. ಮೇಲಿನ ವರ್ಗಕ್ಕೆ ಸೇರಿದ ಜಮೀನ್ದಾರರು, ಹಿಡುವಳಿದಾರರುಗಳು ಮತ್ತು ಇನಾಂದಾರರುಗಳು ಓದುಬರಹ ತಿಳಿದವರಾಗಿದ್ದು ಕಾನೂನಿನಲ್ಲಿ ತಮಗಿರುವ ರಕ್ಷಣೆಯ ಭಾಗದ ಪೂರ್ಣ ಉಪಯೋಗವನ್ನು ಪಡೆಯುತ್ತಿದ್ದಾರೆ. ಈಗಾಗಲೇ ಶಿವಮೊಗ್ಗ ಜಿಲ್ಲೆಯಾದ್ಯಂತ ನೂರಾರು ಗೇಣಿದಾವಾಗಳು ಟೆನೆನ್ಸಿ ಕೋರ್ಟಿನ ತುಂಬಾ ಬರುತ್ತಿದ್ದು ಒಕ್ಕಲೆಬ್ಬಿಸುವ ಪ್ರಕರಣ ಅವ್ಯಾಹತವಾಗಿ ಸಾಗುತ್ತಿದೆ. ಇದನ್ನು ಸೋಷಲಿಸ್ಟ್ ಪಕ್ಷ ತೀವ್ರವಾಗಿ ಖಂಡಿಸಿ ಹೋರಾಟವನ್ನು ಕೈಗೆತ್ತಿಕೊಳ್ಳುತ್ತದೆ'' ಎಂದು ಹೇಳಿದ್ದಾರೆ.

ಇದೇ ರೀತಿ ವ್ಯತಿರಿಕ್ತ ಪರಿಣಾಮ ಬೀರಿದ ಇನ್ನೊಂದು ಶಾಸನವೆಂದರೆ 1954 – 55 ರಲ್ಲಿ ಜಾರಿಗೆ ಬಂದ ಧಾರ್ಮಿಕ ಜಹಗೀರಿ ಮತ್ತು ಇನಾಂ ರದ್ದಿಯಾತಿ ಶಾಸನ. ಈ ಶಾಸನದ ಉದ್ದೇಶ ಧರ್ಮದ ಹೆಸರಿನಲ್ಲಿ ದೇವಾಲಯಗಳಿಗೆ ಜಹಗೀರು ಬಿಟ್ಟಿದ್ದ ಆಸ್ತಿಯ ಹಕ್ಕನ್ನು ರದ್ದು ಮಾಡಿ ಆ ಭೂಮಿಯನ್ನು ಉಳುವವನಿಗೆ ನೀಡುವುದು ಮತ್ತು ಹಿಂದಿನ

[illegible]

[illegible]

[illegible]

[illegible]

ಶತಮಾನದಿಂದಲೂ ಮುಂದುವರೆದುಕೊಂಡು ಬಂದಿದ್ದ ಇನಾಂದಾರಿ ಹಕ್ಕು (ಕಂದಾಯ
ವಸೂಲಿಗಾಗಿ ಭೂಮಿಯ ಮೇಲೆ ಜಹಗೀರುದಾರರಿಗೆ ನೀಡಿದ ಹಕ್ಕು) ರದ್ದುಪಡಿಸು
ವುದಾಗಿತ್ತು.

ಧಾರ್ಮಿಕ ಜಹಗೀರು ಕಡಿಮೆ ಇದ್ದುದರಿಂದ ಅದರ ಪರಿಣಾಮ ಅಷ್ಟೇನೂ ಮಹ
ತ್ವದ್ದಾಗಿರಲಿಲ್ಲ. ಆದರೆ ಇನಾಂ ರದ್ದು ಮಾಡುವ ಮಸೂದೆ ಶಾಸನಸಭೆಯಲ್ಲಿ ಅಂಗೀ
ಕೃತವಾಗಿ, ಇನ್ನೇನು ಜಾರಿಗೆಬರಲಿದೆ ಎನ್ನುವಾಗ ಇನಾಂದಾರರು ಜಿಲ್ಲೆಯಲ್ಲಿ ವ್ಯಾಪಕ
ವಾಗಿ ಗೇಣಿದಾರರನ್ನು ಒಕ್ಕಲೆಬ್ಬಿಸ ತೊಡಗಿದ್ದರು.

ಹೀಗೆ ಈ ಎರಡೂ ಶಾಸನಗಳಿಂದ ಗೇಣಿ ರೈತರಿಗೆ ಆಗುತ್ತಿದ್ದ ಅನ್ಯಾಯವನ್ನು
ಪ್ರತಿಭಟಿಸಿ, ರೈತರ ಹಿತರಕ್ಷಣೆಗಾಗಿ ಸಮಾಜವಾದಿಗಳು ಜಿಲ್ಲೆಯಾದ್ಯಂತ ಚಳುವಳಿಯನ್ನು
ಕೈಗೊಂಡರು ಹಾಗೂ ರೈತರನ್ನು ಒಕ್ಕಲೆಬ್ಬಿಸದಂತೆ ತಡೆಯುವಲ್ಲಿ ಯಶಸ್ವಿಯಾದ
ರೆಂದು ತಿಳಿದುಬರುತ್ತದೆ. ಇದಕ್ಕೆ ಉದಾಹರಣೆಯಾಗಿ 1956 ಜೂನ 16 ರ 'ಮಿಂಚು'
ಪತ್ರಿಕೆಯಲ್ಲಿ ಆಗ ಜಿಲ್ಲೆಯ ಸೋಷಲಿಸ್ಟ್ ಪಕ್ಷದ ಕಾರ್ಯದರ್ಶಿಯಾಗಿದ್ದ ಎಂ.ಸಿ.
ಮಹೇಶ್ವರಪ್ಪನವರ ಹೇಳಿಕೆ ಈ ರೀತಿ ಇದ್ದಿತು: '' ಶಿವಮೊಗ್ಗ ತಾಲ್ಲೂಕು ಕುಸ್ಕೂರು
ಇನಾಂ ಗ್ರಾಮದಲ್ಲಿ ಈಚೆಗೆ ಇನಾಂದಾರರು ರೈತರಿಗೆ ಇಲ್ಲದ ಹಿಂಸೆಯನ್ನು ಕೊಡುತ್ತಿರು
ವುದನ್ನು ಸೋಷಲಿಸ್ಟ್ ಪಾರ್ಟಿ ಖಂಡಿಸುತ್ತದೆ. ಇನಾಂದಾರರು ಇನಾಂರದ್ದು ಶಾಸನ
ವಾಗುವ ಮೊದಲೇ ಭೂಮಿಯನ್ನು ಬೇರೆಯವರಿಗೆ ಕೈದಾಟಿಸಿ ಲಾಭಪಡೆಯಬೇಕೆಂದು
ಈಗ ಎರಡು ವರ್ಷಗಳಿಂದಲೂ ಪ್ರಯತ್ನ ನಡೆಯುತ್ತಿದೆ. ತುಂಗಾ ಅಣೆಕಟ್ಟು ನಿರ್ಮಾ
ಣದಿಂದಾಗಿ ಹತ್ತಿರದ ಎಲ್ಲಾ ಭೂಮಿಗಳಿಗೂ ನೀರು ಬರುವಂತಾಗಿ ಹತ್ತಿರದಲ್ಲೇ ಸಕ್ಕರೆ
ಕಾರ್ಖಾನೆಯೊಂದು ನಿರ್ಮಾಣವಾಗಿ ಸಕ್ಕರೆ ಕಾರ್ಖಾನೆಯವರು ಹೆಚ್ಚಿನ ಬೆಲೆಕೊಟ್ಟು
ಭೂಮಿಯನ್ನು ಕೊಳ್ಳಲು ನಿರ್ಧರಿಸಿದ್ದಾರೆ. ಈಗ ಒಂದು ವರ್ಷದ ಹಿಂದೆ ಕುಸ್ಕೂರು
ಇನಾಂಭೂಮಿಯನ್ನು ರೈತರಿಗೆ ಮೋಸಮಾಡಿ ಮಾರುವ ಪ್ರಯತ್ನ ನಡೆಯಿತು.
ರೈತರು ಪಾರ್ಟಿಗೆ ತಿಳಿಸಿದಾಗ ನಾವುಗಳು ಕುಸ್ಕೂರಿಗೆ ಹೋಗಿ ರೈತರ ಸಭೆನಡೆಸಿ ಸಂಘಟನೆ

[illegible]

ಯನ್ನು ರೂಪಿಸಿದೆವು. ಭೂಮಿ ಮಾರಾಟವಾಗದಂತೆ ಪ್ರತಿಭಟಿಸಿದುದರ ಪರಿಣಾಮವಾಗಿ ಈ ಪ್ರಯತ್ನ ನಿಂತುಹೋಯಿತು. ಇನಾಂದಾರರು ನಿರಾಶರಾದರು.''

ಇದೇ ಪತ್ರಿಕೆಯಲ್ಲಿ ಜಿಲ್ಲೆಯ ಹೊನ್ನಾಳಿ ತಾಲ್ಲೂಕು ಕುಳಗಟ್ಟೆ ಇನಾಂ ಗ್ರಾಮದಲ್ಲಿ ನಡೆಯುತ್ತಿದ್ದ ದೌರ್ಜನ್ಯದ ಬಗ್ಗೆ ಸೋಷಲಿಸ್ಟ್ ಕಾರ್ಯಕರ್ತರಾದ ಎನ್.ಕೆ.ಸೀತಾರಾಮ ಐಯ್ಯಂಗಾರ್ ಮತ್ತು ಡಿ.ಪರಮೇಶ್ವರಪ್ಪ ಈ ರೀತಿ ಹೇಳಿಕೆ ಯನ್ನಿತ್ತರು: ''ಇನಾಂ ರದ್ದು ಶಾಸನವಾಗುವುದೆಂದು ಕುಳಗಟ್ಟೆ ಇನಾಂ ಗ್ರಾಮದ ವೃತ್ತಿದಾರರು ಕೆಲವರು ರೈತರನ್ನು ಒಕ್ಕಲೆಬ್ಬಿಸುವ ಪ್ರಯತ್ನ ನಡೆಸುತ್ತಿದ್ದಾರೆಂದು ಶಿವಮೊಗ್ಗ ಜಿಲ್ಲಾ ಪ್ರಜಾ ಸೋಷಲಿಸ್ಟ್ ಪಾರ್ಟಿಯ ಪರವಾಗಿ ನಾವಿಬ್ಬರು ಮತ್ತು ಎಂ.ಎಸ್. ಪಾಪಣ್ಣನವರು ಕುಳಗಟ್ಟೆ ಗ್ರಾಮಕ್ಕೆ ದಿನಾಂಕ:25.05.1955 ರಂದು ಹೋಗಿ ಗೇಣಿರೈತರ ಸಭೆಯನ್ನು ನಡೆಸಿ ಹೋರಾಟವನ್ನು ರೂಪಿಸಿದೆವೆಂದು ತಿಳಿಸಿ ದ್ದಾರೆ.''

''ಮತ್ತೊಮ್ಮೆ ಇನಾಂ ಗ್ರಾಮಕ್ಕೆ ಸೇರಿದ ಮಳಲಗೊಪ್ಪ — ಸೂಳೆಬಯಲು ಪ್ರದೇಶದ ಗೇಣಿ ರೈತರಿಗೂ ಭೂಮಿ ಕೈತಪ್ಪುವ ಪರಿಸ್ಥಿತಿ ಒದಗಿದುದನ್ನು ಸೋಷಲಿಸ್ಟ್ ಪಾರ್ಟಿ ಎದುರಿಸಿ ಅನ್ಯಾಯವನ್ನು ತಡೆಗಟ್ಟಿದೆ'' (ಜಾಗೃತಿ ಪತ್ರಿಕೆ, 1956 ನವೆಂಬರ್ 20). ಇನಾಂದಾರರುಗಳು ಜಿಲ್ಲೆಯಾದ್ಯಂತ ರೈತರನ್ನು ಒಕ್ಕಲೆಬ್ಬಿಸಲು ಪ್ರಯತ್ನಿಸಿದ ವರದಿ ಗಳು ಈ ರೀತಿ ಪತ್ರಿಕೆಗಳಲ್ಲಿ ಪ್ರಕಟಗೊಂಡವು. ಇವು ಕೆಲವು ಉದಾಹರಣೆಗಳು ಮಾತ್ರ.

ಪತ್ರಿಕೆಗಳಲ್ಲಿ ಸಿಗುವ ಮಾಹಿತಿಯಂತೆ ಮತ್ತು ಹಿರಿಯ ಸಮಾಜವಾದಿಗಳ ಅಭಿಪ್ರಾಯ ದಂತೆ ಸೋಷಲಿಸ್ಟ್ ಪಕ್ಷ ರೈತರ ಹಿತರಕ್ಷಣೆ ಕಾಪಾಡುವಲ್ಲಿ ಯಶಸ್ವಿಯಾಯಿತು. ಹಾಗೆಯೇ ಸರ್ಕಾರ ಇನಾಂ ರದ್ದುಗೊಳಿಸುವ ನಿರ್ಧಾರವನ್ನು ಕೈಗೊಂಡಿದ್ದು ಅದನ್ನು ಜಾರಿಗೆ ತರುವಲ್ಲಿ ವಿಳಂಬ ಮಾಡುತ್ತಿದ್ದುದನ್ನು ಪ್ರತಿಭಟಿಸಿ, ಶಾಸನ ಶೀಘ್ರವೇ ಜಾರಿಗೆ ತರುವಂತೆ ನೋಡಿ ಕೊಳ್ಳುವಲ್ಲಿ ಸೋಷಲಿಸ್ಟ್ ಪಕ್ಷ ಪ್ರಮುಖ ಪಾತ್ರವಹಿಸಿತೆಂದು ತಿಳಿದುಬರುತ್ತದೆ. ಇಷ್ಟಾದರೂ ಕೆಲವುಕಡೆ ರೈತರಿಗೆ ಆದ ಅನ್ಯಾಯವನ್ನು ತಡೆಯಲಿಕ್ಕಾಗಲಿಲ್ಲವೆಂಬುದನ್ನು ಕೆಲವು ಹಿರಿಯ ಸಮಾಜವಾದಿಗಳು ಒಪ್ಪಿಕೊಂಡಿರುವರು.

[illegible]

(ಇ) ಭೂಮಿ ಆಂದೋಲನ — 1969 :

1969ರ ಹೊತ್ತಿಗೆ ಸೋಷಲಿಸ್ಟ್ ಪಕ್ಷ ಇದುವರೆಗೆ ನಡೆಸಿದ ಹೋರಾಟಗಳಿಗಿಂತ ಭಿನ್ನವಾದ ಹೋರಾಟವನ್ನು ಕೈಗೆತ್ತಿಕೊಂಡಿತು. ಕಾಗೋಡು ಸತ್ಯಾಗ್ರಹ ಗೇಣಿ ರೈತರ ಸಮಸ್ಯೆಗೆ ಸಂಬಂಧಿಸಿದ್ದರೆ, 1952 – 56 ರ ಶಾಸನಗಳ ಜಾರಿಯ ಸಂದರ್ಭದಲ್ಲಿ ನಡೆದ ಹೋರಾಟ ಕೂಡ ಇದಕ್ಕಿಂತ ಭಿನ್ನವಾಗಿರಲಿಲ್ಲ. 1969ರ ಹೋರಾಟದ ಉದ್ದೇಶ ಸಾಗುವಳಿಗೆ ಯೋಗ್ಯವಾಗಿದ್ದು, ಸಾಗುವಳಿಗೊಳಪಡದೆ ಇರುವ ಭೂಮಿಯನ್ನು ಭೂಹೀನರಿಗೆ ಹಂಚುವ ಕಾರ್ಯಕ್ರಮವಾಗಿತ್ತು. ವಾಸ್ತವವಾಗಿ, ಸಾಗುವಳಿಗೆ ಒಳಪಡದ ಭೂಮಿ ಸರ್ಕಾರದ ನಿಯಂತ್ರಣದಲ್ಲಿತ್ತು. ಅದನ್ನು ಸಾಗುವಳಿ ಮಾಡಲು ಸರ್ಕಾರ ಅನುಮತಿಯನ್ನು ನೀಡುತ್ತಿರಲಿಲ್ಲ. ಇಂತಹ ಸಂದರ್ಭದಲ್ಲಿ ಸೋಷಲಿಸ್ಟ್ ಪಕ್ಷ ಸರ್ಕಾರಿ ಭೂಮಿಯನ್ನು ಭೂಹೀನ ರೈತರಿಗೆ ದೊರಕಿಸಿಕೊಡುವ ಉದ್ದೇಶದಿಂದ ಒಂದು ಚಳುವಳಿಯನ್ನು ಹಮ್ಮಿಕೊಳ್ಳಲು 1969 ರಲ್ಲಿ ರಾಯಚೂರಿನಲ್ಲಿ ನಡೆದ ರಾಜ್ಯಘಟಕದ ವಾರ್ಷಿಕ ಸಮ್ಮೇಳನದಲ್ಲಿ ನಿರ್ಧರಿಸಿತು.

ರಾಯಚೂರಿನ ಸಮ್ಮೇಳನ ನಿರ್ಣಯವನ್ನು ಕೈಗೊಂಡ ಸಂದರ್ಭದಲ್ಲಿ ಹೋರಾಟದ ಉದ್ದೇಶವನ್ನು ಪಕ್ಷ ಈ ರೀತಿ ವಿವರಿಸಿತು: ''ನೂರಾರು ವರ್ಷಗಳಿಂದ ಭೂಮಿಯನ್ನೇ ನಂಬಿ ಬದುಕುತ್ತಿರುವ ಬೇಸಾಯ ಕೂಲಿಗಾರರು ಹಾಗೂ ಭೂಹೀನ ರೈತರಿಗೆ ಅದರಲ್ಲೂ ಸಮಾಜದಲ್ಲಿ ತುಳಿದಿಟ್ಟ ಹರಿಜನ, ಗಿರಿಜನ, ಇನ್ನಿತರ ಹಿಂದುಳಿದ ಜನರಿಗೆ ಗಾಂಧಿ ಜನ್ಮಶತಾಬ್ದಿಯ ಈ ವರ್ಷದಲ್ಲಿ ಭೂಮಿ ದೊರಕಿಸಿಕೊಡುವ ಉದ್ದೇಶದ ಚಳುವಳಿಯನ್ನು ಕರ್ನಾಟಕದಲ್ಲಿ ಹೂಡಲು ಸೋಷಲಿಸ್ಟ್ ಪಕ್ಷ ತೀರ್ಮಾನಿಸಿದೆ.''

''ಇಂತಹ ಚಳುವಳಿಯಿಂದ ದೇಶದಲ್ಲಿ ಸಾಗುವಳಿಗೆ ಯೋಗ್ಯವಾಗಿದ್ದು ವ್ಯರ್ಥ ಬೀಳುಬಿದ್ದಿರುವ ಲಕ್ಷಾಂತರ ಎಕರೆ ಭೂಮಿ ಬೇಸಾಯಕ್ಕೆ ಸಿದ್ಧಗೊಳಿಸಲ್ಪಡುವುದಲ್ಲದೆ, ಸ್ವಾತಂತ್ರ್ಯ ನಂತರದ ಇಪ್ಪತ್ತೆರಡು ವರ್ಷಗಳಿಂದ ಬೇಸಾಯಕ್ಕಾಗಿ ಭೂಮಿ ಪಡೆಯಲು

[illegible]

[illegible]

[illegible]

ಪ್ರಯತ್ನಿಸಿ ವಿಫಲವಾಗಿರುವ ಭೂಹೀನ ರೈತರಿಗೆ ಈ ಮೂಲಕ ಪರಿಹಾರ ದೊರಕುವುದು.." (ಸಿ.ಪುಟ್ಟಸ್ವಾಮಿ, 1969,'ಮಾನವ' ಪತ್ರಿಕೆ).

ಈ ಚಳುವಳಿಯನ್ನು ನಿರ್ದೇಶಿಸಲು ರಾಜ್ಯ ಮಟ್ಟದ ಪ್ರಮುಖ ಕಾರ್ಯಕರ್ತರ ಒಂದು ಸಮಿತಿಯನ್ನು ರಚಿಸಲಾಯಿತು. ಅದರಲ್ಲಿದ್ದ ಪ್ರಮುಖರೆಂದರೆ ಗೋಪಾಲ ಗೌಡ ಶಾಂತವೇರಿ, ವೈ.ಆರ್. ಪರಮೇಶ್ವರಪ್ಪ, ಬಿ.ಎಸ್.ಚಂದ್ರಶೇಖರ, ಎಸ್.ಎಸ್.ಕುಮಟಾ, ಬಿ.ಬಿ.ಮಾಧವನ್, ಎಸ್.ಬಂಗಾರಪ್ಪ, ಕಾಗೋಡು ತಿಮ್ಮಪ್ಪ, ಎಂ.ಡಿ.ನಂಜುಂಡಸ್ವಾಮಿ, ವೀರಣ್ಣ ತಿಮ್ಮಾಪುರ ಹಾಗೂ ದಯಾನಂದ ಬಿರಾದಾರ್.

ಮೇಲಿನವರಲ್ಲಿ ಹೆಚ್ಚಿನವರು ಶಿವಮೊಗ್ಗ ಜಿಲ್ಲೆಯವರಾಗಿದ್ದು, ಸಹಜವಾಗಿಯೇ ಜಿಲ್ಲೆಯಲ್ಲೂ ಚಳುವಳಿಯನ್ನು ಪ್ರಮುಖವಾಗಿ ಹಮ್ಮಿಕೊಂಡರು. ಸೋಷಲಿಸ್ಟ ಪಕ್ಷದ ಪ್ರಭಾವ ಹೆಚ್ಚಾಗಿದ್ದ ಜಿಲ್ಲೆಯ ಶಿಕಾರಿಪುರ, ಸೊರಬ, ಸಾಗರ, ಶಿವಮೊಗ್ಗ ತಾಲ್ಲೂಕುಗಳನ್ನು ಹೋರಾಟಕ್ಕೆ ಆಯ್ಕೆ ಮಾಡಿಕೊಳ್ಳಲಾಯಿತು. ಈ ತಾಲ್ಲೂಕುಗಳನ್ನು ಮುಖ್ಯವಾಗಿ ಆಯ್ಕೆಮಾಡಿಕೊಳ್ಳಲು, ಈ ಭಾಗ ಅರಣ್ಯದಿಂದ ಕೂಡಿದ ಪ್ರದೇಶವಾಗಿದ್ದು ವ್ಯವಸಾಯಕ್ಕೊಳಪಟ್ಟ ಭೂಮಿ ತೀರ ಕಡಿಮೆಯಿತ್ತು ಎಂಬುದೇ ಕಾರಣವಾಗಿದ್ದಿತು. ವ್ಯವಸಾಯಕ್ಕೊಳಪಡಿಸಬಹುದಾಗಿದ್ದ ಭೂಮಿ ಸಾಕಷ್ಟಿತ್ತು. ಜೊತೆಗೆ ಭೂಹೀನ ಕೃಷಿಕರ ಸಂಖ್ಯೆ ಈ ಭಾಗಗಳಲ್ಲಿ ಹೆಚ್ಚಾಗಿದ್ದಿತು.

1969, ಆಗಸ್ಟ 15 ರಂದು ಸ್ವಾತಂತ್ರ್ಯ ಆಚರಣೆಯ ದಿನ ಚಳುವಳಿಯನ್ನು ಪ್ರಾರಂಭಿಸಲಾಯಿತು. ಈ ಸಂದರ್ಭದಲ್ಲಿ ಸುಮಾರು 10,000 ಎಕರೆ ಭೂಮಿಯನ್ನು ಆಕ್ರಮಿಸಲಾಯಿತೆಂದು 'ಮಾನವ' ಪತ್ರಿಕೆಯಿಂದ ತಿಳಿದುಬರುತ್ತದೆ. ಈ ಸಂದರ್ಭದಲ್ಲಿ ಸರ್ಕಾರ ಚಳುವಳಿಯನ್ನು ತಡೆಯುವ ಉದ್ದೇಶದಿಂದ ಚಳುವಳಿಗಾರರನ್ನು ಬಂಧಿಸಿತು. ಸೊರಬ, ಶಿಕಾರಿಪುರ ತಾಲ್ಲೂಕುಗಳಲ್ಲಿ ಚಳುವಳಿ ಹೆಚ್ಚು ತೀವ್ರವಾಗಿತ್ತೆಂದು ತಿಳಿದುಬರುತ್ತದೆ. ಕೇವಲ ಶಿಕಾರಿಪುರ ತಾಲ್ಲೂಕಿನಲ್ಲಿ 4,700 ಎಕರೆ ಭೂಮಿಯನ್ನು

[illegible]

[illegible]

[illegible]

[illegible]

ಪಕ್ಷದವತಿಯಿಂದ ಭೂಹೀನರಿಗೆ ಹಂಚಲಾಯಿತು ಎಂದು ತಿಳಿದುಬರುತ್ತದೆ.

ಈ ಚಳುವಳಿಯ ಉದ್ದೇಶ ಬಹಳ ಮಹತ್ವಪೂರ್ಣವಾದುದು. ಕಾರಣ ಸೋಷಲಿಸ್ಟ ಪಕ್ಷ ಭೂಹೀನ ಕೃಷಿ ಕಾರ್ಮಿಕರಿಗಾಗಿ ಕೈಗೊಂಡ ಮೊಟ್ಟಮೊದಲ ಹೋರಾಟವಾಗಿತ್ತು. ಭಾರತದ ಸನ್ನಿವೇಶದಲ್ಲಿ ಉಳ್ಳವರಿಂದ ಭೂಮಿಯನ್ನು ಪಡೆದು ಇಲ್ಲದವರಿಗೆ ಹಂಚುವುದು ಕಷ್ಟದ ಕೆಲಸವೆಂದರಿತಿದ್ದ ಸಮಾಜವಾದಿಗಳು, ಈ ರೀತಿಯ ಆಂದೋಲನಗಳಿಗೆ ಗಮನಕೊಟ್ಟಿದ್ದರಲ್ಲಿ ಆಶ್ಚರ್ಯವಿಲ್ಲ.

ಅಧ್ಯಾಯ : 6

ಚುನಾವಣಾ ಕಣದಲ್ಲಿ ಸೋಷಲಿಸ್ಟ ಪಕ್ಷ

6. ಚುನಾವಣಾ ಕಣದಲ್ಲಿ ಸೋಷಲಿಸ್ಟ್ ಪಕ್ಷ

ಭಾರತದ ಸಮಾಜವಾದಿಗಳು ಒಪ್ಪಿಕೊಂಡ ಹೋರಾಟದ ಹಲವು ಮಾರ್ಗಗಳಲ್ಲಿ, ಚುನಾವಣೆಯಲ್ಲಿ ಭಾಗವಹಿಸುವಿಕೆಯೂ ಒಂದಾಗಿತ್ತು. ಸಮಾಜವಾದಿ ಮಾರ್ಗದಿಂದ ಸಮಾಜ ನಿರ್ಮಾಣದ ಹಾದಿಯಲ್ಲಿ ಅದು ನಡೆಸುವ ಹೋರಾಟಗಳು ಬಹಳ ಮುಖ್ಯ ಮಾರ್ಗವೆಂಬುದು ಎಲ್ಲಾ ಎಡಪಂಥೀಯರೂ ಒಪ್ಪಿಕೊಂಡ ವಿಧಾನ. ಹೋರಾಟದ ಜೊತೆಗೆ ಚುನಾವಣೆಯಲ್ಲಿ ಭಾಗವಹಿಸಿ ಅಧಿಕಾರ ಪಡೆದು ತನ್ಮೂಲಕ ವ್ಯವಸ್ಥೆಯನ್ನು ಬದಲಿಸುವ ಉದ್ದೇಶ ಹೊಂದಿದ್ದ ಭಾರತೀಯ ಸಮಾಜವಾದಿಗಳು ಸಹಜವಾಗಿಯೇ ಚುನಾವಣೆಗಳನ್ನು ತಮ್ಮ ಹೋರಾಟದ ಮಾರ್ಗ ಎಂದು ಒಪ್ಪಿಕೊಂಡಿದ್ದರು.

ಭಾರತೀಯ ಸಮಾಜವಾದಿ ಆಂದೋಲನದ ಏರಿಳಿತ, ಅಧಃಪತನ ಅಡಕವಾಗಿರುವುದು ಈ ಅಂಶದಲ್ಲಿ ಎಂದರೆ ತಪ್ಪಾಗಲಾರದು. ಒಂದು ಸಂಘಟನೆ ಪ್ರಬಲಶಕ್ತಿಯಾಗಿ ಹೊರಹೊಮ್ಮುವಲ್ಲಿ ಅದು ನಡೆಸುವ ಹೋರಾಟಗಳು ನಿರ್ಣಾಯಕವಾಗಿರುತ್ತವೆ. ಈ ಅಂಶವನ್ನು ನಾವು ಇತಿಹಾಸದುದ್ದಕ್ಕೂ ನೋಡಬಹುದು. ಉದಾಹರಣೆಗೆ: ಭಾರತದ ರಾಷ್ಟ್ರೀಯ ಕಾಂಗ್ರೆಸ್. ಅದು ಸ್ಥಾಪನೆಯಾದ 1985ರಿಂದ 1947ರವರೆಗೆ ಸತತವಾಗಿ ನಡೆಸಿದ ಹೋರಾಟಗಳಿಂದಾಗಿಯೇ ಪ್ರತಿ ಹಂತದಲ್ಲೂ ವಿಸ್ತಾರವಾಗಿ ಬೆಳೆಯುತ್ತಾ ಬಂದಿತು. ಅದೇ ಕಾಂಗ್ರೆಸ್ 1947ರ ನಂತರ ಏನಾಯಿತು ಎಂಬುದು ಎಲ್ಲರಿಗೂ ತಿಳಿದಿರುವ ವಿಷಯ. ಯಾವುದೇ ಒಂದು ಸಂಘಟನೆ, ಒಂದು ಪಕ್ಷವಾಗಿ ಅಧಿಕಾರ ಪಡೆಯು ಅಕ್ಕೆ ಹೆಚ್ಚಿನ ಗಮನವನ್ನು ನೀಡಿದಾಗ ಆಂತರಿಕ ಕಲಹ, ಸೈದ್ಧಾಂತಿಕ ಭಿನ್ನಾಭಿಪ್ರಾಯ, ಸೈದ್ಧಾಂತಿಕ ಮಾರ್ಪಾಡು-ಹೀಗೆ ಅನೇಕ ಕಾರಣಗಳಿಂದ ಅದು ತನ್ನ ಅಧಃಪತನಕ್ಕೆ ತಾನೇ ಗುರಿಯಾಗುತ್ತದೆ.

ಇದೇ ಅಭಿಪ್ರಾಯವನ್ನು ಸಮಾಜವಾದಿ ಪಕ್ಷಕ್ಕೂ ಅದರಂತೆ ಶಿವಮೊಗ್ಗ ಜಿಲ್ಲೆಯ ಸಮಾಜವಾದಿ ಚಳುವಳಿಯ ಅಧಃಪತನಕ್ಕೂ ಹೋಲಿಸಬಹುದು. ಜಿಲ್ಲೆಯಲ್ಲಿ ಸಮಾಜವಾದಿ ಚಟುವಟಿಕೆಗಳು ಪ್ರಾರಂಭವಾದ 1942ರ ನಂತರ 1952ರ ಮೊದಲ ಚುನಾವಣೆಯವರೆಗೂ ಸಮಾಜವಾದಿಗಳು ಒಂದು ಪ್ರಬಲ ಸಂಘಟನೆಯಾಗುತ್ತಾ ಬಂದಿದ್ದನ್ನು ನೋಡಬಹುದು. ಅನೇಕ ಯಶಸ್ವಿ ಸಮ್ಮೇಳನಗಳ ಜೊತೆಗೆ 1951ರಲ್ಲಿ ಕಾಗೋಡು

[illegible]

ಸತ್ಯಾಗ್ರಹದಂತಹ ಪ್ರಮುಖ ಹೋರಾಟವನ್ನು ಈ ಅವಧಿಯಲ್ಲಿ ಸೋಷಲಿಸ್ಟರು ನಡೆಸಿದ್ದರು. ಕಾಗೋಡು ಸತ್ಯಾಗ್ರಹ ಸೋಷಲಿಸ್ಟರಿಗೆ ಜಿಲ್ಲೆಯಲ್ಲಿ ಒಂದು ಭದ್ರ ನೆಲೆಯನ್ನು ದೊರಕಿಸಿಕೊಟ್ಟಿದಿತು. ಮುಂದೆ ಸೋಷಲಿಸ್ಟರು ನಡೆಸಿದ ಹೋರಾಟಗಳು ಮತ್ತು ಅವರು ಭಾಗವಹಿಸಿದ ಚುನಾವಣೆಗಳು ಅದರ ಫಲಿತಾಂಶದಂತೆಯೇ ಕಂಡುಬರುತ್ತವೆ.

ಶಿವಮೊಗ್ಗ ಜಿಲ್ಲೆಯಲ್ಲಿ ಸೋಷಲಿಸ್ಟರು ಒಟ್ಟು ಐದು ಚುನಾವಣೆಗಳನ್ನು ಎದುರಿಸಿದರು. ಈ ಅವಧಿಯಲ್ಲಿ ರಾಷ್ಟ್ರ ಹಾಗೂ ರಾಜ್ಯ ಮಟ್ಟದಲ್ಲಿ ಪಕ್ಷದಲ್ಲಿ ಒಡಕುಂಟಾದವು. ಆದರೆ ಜಿಲ್ಲೆಯಲ್ಲಿ ಈ ಪ್ರಕ್ರಿಯೆ ಕಡಿಮೆ. ಜಿಲ್ಲೆಯಲ್ಲಿ ಸೋಷಲಿಸ್ಟರು ಸಂಪೂರ್ಣವಾಗಿ ಲೋಹಿಯಾರ ಅನುಯಾಯಿಗಳಾಗಿದ್ದರು. ಇದಕ್ಕೆ ಕಾರಣ ಲೋಹಿಯಾ ಕಾಗೋಡು ಸತ್ಯಾಗ್ರಹದಲ್ಲಿ ಭಾಗವಹಿಸಿದ್ದುದು ಮತ್ತು ಗೋಪಾಲಗೌಡರ ಹಾಗೂ ಲೋಹಿಯಾರ ನಿಕಟ ಸಂಪರ್ಕ. ಹೀಗಾಗಿ ಜಿಲ್ಲೆಯ ಸೋಷಲಿಸ್ಟರು ಹೆಚ್ಚು ಕಡಿಮೆ ಲೋಹಿಯಾ ಯಾವ ಪಕ್ಷದಲ್ಲಿರುತ್ತಿದ್ದರೋ ಅದೇ ಪಕ್ಷದಲ್ಲಿರುತ್ತಿದ್ದರು.

1952 ರಲ್ಲಿ ನಡೆದ ಮೊದಲ ಚುನಾವಣೆಯಲ್ಲಿ ಸೋಷಲಿಸ್ಟರು ಎಲ್ಲ ಕ್ಷೇತ್ರಗಳಲ್ಲಿ ಸ್ಪರ್ಧಿಸಿದರು. ಗೋಪಾಲಗೌಡರೊಬ್ಬರು ಮಾತ್ರ ಸಾಗರ ಕ್ಷೇತ್ರದಿಂದ ಜಯಗಳಿಸಿದರು. ಇದು ನಿಸ್ಸಂಶಯವಾಗಿ ಕಾಗೋಡು ಸತ್ಯಾಗ್ರಹದ ಪರಿಣಾಮವಾಗಿತ್ತು. ಸತ್ಯಾಗ್ರಹದ ಅವಧಿಯಲ್ಲಿ ಜನಬೆಂಬಲಗಳಿಸಲು ಆ ಪ್ರದೇಶದಲ್ಲೆಲ್ಲ ಸುತ್ತಿ ಚಿರಪರಿಚಿತರಾಗಿದ್ದ ಗೌಡರು ಗೇಣಿ ರೈತರೆಲ್ಲರ ಬೆಂಬಲ ಪಡೆದಿದ್ದರೆಂದರೆ ತಪ್ಪಾಗಲಾರದು.

1957 ರಲ್ಲಿ ನಡೆದ ದ್ವಿತೀಯ ಚುನಾವಣೆಯಲ್ಲಿ ಸೋಷಲಿಸ್ಟರು ಎಲ್ಲ ಎಂಟು ಕ್ಷೇತ್ರಗಳಲ್ಲಿ ಸ್ಪರ್ಧಿಸಿದರಾದರೂ ಯಾರೊಬ್ಬರೂ ಗೆಲ್ಲಲಿಲ್ಲ. ಕ್ಷೇತ್ರಗಳ ಮರು ವಿಂಗಡಣೆಯಾಗಿ ಗೋಪಾಲಗೌಡರು ತಮ್ಮ ಸ್ವಕ್ಷೇತ್ರವಾದ ತೀರ್ಥಹಳ್ಳಿಯಿಂದ ಸ್ಪರ್ಧಿಸಿ ಸೋತಿದ್ದರು. ಈ ಅವಧಿಯಲ್ಲಿ ಗೋಪಾಲಗೌಡರು ಸ್ಥಳೀಯ ಸಮಸ್ಯೆಗಳಿಗೆ ಹೆಚ್ಚಿನ ಆದ್ಯತೆಕೊಟ್ಟರು. ಪರಿಣಾಮವಾಗಿ ಮುಂದೆಂದೂ ಅವರು ಸೋಲಲಿಲ್ಲ. ಜೊತೆಗೆ

ಜಿಲ್ಲೆಯಲ್ಲಿ ಈ ಅವಧಿಯಲ್ಲಿ ಪಕ್ಷವನ್ನು ಪುನರ್ ಸಂಘಟಿಸಿದರು.

1962 ರಲ್ಲಿ ನಡೆದ ಮೂರನೇ ಚುನಾವಣೆಯಲ್ಲಿ ಪಕ್ಷ ಪುನಃ ಎಲ್ಲಾ ಸ್ಥಾನಗಳಿಗೂ ಸ್ಪರ್ಧಿಸಿತ್ತು. ಈ ಬಾರಿ ಗೋಪಾಲಗೌಡರೊಬ್ಬರು ತಮ್ಮ ಸ್ವಕ್ಷೇತ್ರವಾದ ತೀರ್ಥಹಳ್ಳಿಯಿಂದ ಜಯಗಳಿಸಿದ್ದರು. ಉಳಿದಂತೆ ಹೆಚ್ಚಿನ ಬದಲಾವಣೆ ಕಂಡುಬರಲಿಲ್ಲ.

1969 ರಲ್ಲಿ ನಡೆದ ನಾಲ್ಕನೇ ಚುನಾವಣೆ ಹಿಂದಿನ ಚುನಾವಣೆಗಳಿಗೆ ಹೋಲಿಸಿದರೆ ಬಹಳ ಮಹತ್ವದ್ದು. ಈ ಬಾರಿ ಸೋಷಲಿಸ್ಟ್ ಪಕ್ಷ ಎಂಟು ವಿಧಾನ ಸಭಾ ಕ್ಷೇತ್ರಗಳ ಪೈಕಿ ನಾಲ್ಕರಲ್ಲಿ ಜಯಗಳಿಸುವುದರ ಜೊತೆಗೆ, ಪ್ರಥಮ ಬಾರಿಗೆ ಲೋಕಸಭೆಗೆ ತಮ್ಮ ಪಕ್ಷದ ಅಭ್ಯರ್ಥಿಯನ್ನು ಆಯ್ಕೆಮಾಡಿ ಕಳಿಸಿದ ಕೀರ್ತಿ ಪಡೆಯಿತು. ವಿಧಾನಸಭೆಗೆ ತೀರ್ಥಹಳ್ಳಿಯಿಂದ ಗೋಪಾಲಗೌಡರು, ಸೊರಬದಿಂದ ಎಸ್.ಬಂಗಾರಪ್ಪ, ಶಿಕಾರಿಪುರದಿಂದ ಜಿ. ಬಸವಣಪ್ಪ ಮತ್ತು ಚನ್ನಗಿರಿಯಿಂದ ಎನ್.ಜಿ.ಹಾಲಪ್ಪ ಆಯ್ಕೆಯಾಗಿದ್ದರು. ಜೆ.ಹೆಚ್. ಪಾಟೀಲ್ ಲೋಕಸಭೆಗೆ ಆಯ್ಕೆಯಾದ ಪ್ರಥಮ ವ್ಯಕ್ತಿಯಾಗಿದ್ದರು. ನಂತರ ಇದೇ ಅವಧಿಯಲ್ಲಿ ಜಿಲ್ಲೆಯಲ್ಲಿ ಸೋಷಲಿಸ್ಟ್ ಸಂಘಟನೆ ಕಟ್ಟಿ ಬೆಳೆಸಿದ ವೈ.ಆರ್.ಪರಮೇಶ್ವರಪ್ಪ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾಗಿದ್ದರು. ಈ ಅವಧಿ ರಾಜಕೀಯವಾಗಿ ಸೋಷಲಿಸ್ಟರು ಪಡೆದಿದ್ದ ಅತ್ಯುನ್ನತ ಘಟ್ಟವಾಗಿತ್ತು. ಇದು ಕೇವಲ ಒಂದೆರಡು ವರ್ಷದ ಪ್ರತಿಫಲವಾಗಿರದೆ ಜಿಲ್ಲೆಯ ಸಮಾಜವಾದಿ ಚಳುವಳಿಯ ಪ್ರತಿಫಲದಂತಿತ್ತು.

1972 ರಲ್ಲಿ ನಡೆದ ಐದನೇ ಚುನಾವಣೆಯ ವೇಳೆಗೆ ಜಿಲ್ಲೆಯ ಹಾಗೂ ರಾಷ್ಟ್ರದ ರಾಜಕೀಯದಲ್ಲಿ ಹಲವಾರು ಬದಲಾವಣೆಗಳಾಗಿದ್ದವು. ಈ ವೇಳೆಗೆ ಜಿಲ್ಲೆಯಲ್ಲಿ ಸಮಾಜವಾದಿ ಸಂಘಟನೆ ಕಟ್ಟಿಬೆಳೆಸಿದ್ದ ಗೋಪಾಲಗೌಡರು ಕಾಯಿಲೆಯಿಂದ ಹಾಸಿಗೆ ಹಿಡಿದಿದ್ದರು. 1971 ರಲ್ಲಿ ಲೋಕಸಭೆಗೆ ಅವಧಿಗಿಂತ ಮೊದಲು ನಡೆದ ಚುನಾವಣೆಯಲ್ಲಿ ಜೆ.ಎಚ್.ಪಟೇಲ್ ಜಿಲ್ಲೆಯಿಂದ ಪುನಃ ಸ್ಪರ್ಧಿಸಿದರಾದರೂ ಜಯಗಳಿಸಲಿಲ್ಲ. ಹೀಗಿದ್ದೂ 1972ರ ವಿಧಾನ ಸಭಾ ಚುನಾವಣೆಯಲ್ಲಿ ಪಕ್ಷ ಪುನಃ ಎಲ್ಲ ಎಂಟು ಕ್ಷೇತ್ರಗಳಿಗೂ ಸ್ಪರ್ಧಿಸಿತು. ತೀರ್ಥಹಳ್ಳಿ

[illegible]

[illegible]

[illegible]

[illegible]

ಕ್ಷೇತ್ರಕ್ಕೆ ಈ ಬಾರಿ ಕೋಣಂದೂರು ಲಿಂಗಪ್ಪ ಸ್ಪರ್ಧಿಸಿದ್ದರು. ಈ ಚುನಾವಣೆಯಲ್ಲಿ ಸೋಷಲಿಸ್ಟರು ಹಿಂದಿನ ಚುನಾವಣೆಯಲ್ಲಿ ಪಡೆದಷ್ಟು ಸ್ಥಾನಗಳನ್ನು ಪಡೆದಿದ್ದರು. ಈ ಬಾರಿಯ ವಿಶೇಷವೆಂದರೆ ಸಂಪೂರ್ಣ ಮಲೆನಾಡು ಪ್ರದೇಶದಲ್ಲಿ ಸೋಷಲಿಸ್ಟರು ಜಯಗಳಿಸಿದ್ದರು. ಈ ಭಾಗದ ಕ್ಷೇತ್ರಗಳಾದ ತೀರ್ಥಹಳ್ಳಿ, ಹೊಸನಗರ, ಸಾಗರ, ಸೊರಬಗಳಿಂದ ಕ್ರಮವಾಗಿ ಕೋಣಂದೂರು ಲಿಂಗಪ್ಪ, ಬಿ.ಸ್ವಾಮಿರಾವ್, ಕಾಗೋಡು ತಿಮ್ಮಪ್ಪ ಮತ್ತು ಬಂಗಾರಪ್ಪ ಜಯಗಳಿಸಿದ್ದರು.

ಇದು ಸೋಷಲಿಸ್ಟರು ಎದುರಿಸಿದ ಕೊನೆಯ ಚುನಾವಣೆಯೂ ಆಗಿತ್ತು. ಕಾರಣ ಮುಂದೆ 1975 ರಲ್ಲಿ ತುರ್ತುಪರಿಸ್ಥಿತಿ ಘೋಷಣೆಯಾದಾಗ ರಾಷ್ಟ್ರ ರಾಜಕಾರಣದಲ್ಲಿ ಹಲವಾರು ಬದಲಾವಣೆಗಳಾದವು. ಕಾಂಗ್ರೆಸ್ಸಿಗೆ ವಿರುದ್ಧವಾಗಿ ಪ್ರಬಲ ಪಕ್ಷ ಕಟ್ಟುವ ನೆಪದಲ್ಲಿ ಸೋಷಲಿಸ್ಟರು ತಮ್ಮ ಸಿದ್ಧಾಂತವನ್ನು ಬದಿಗೊತ್ತಿ ಜನತಾ ಪಕ್ಷದಲ್ಲಿ ವಿಲೀನವಾದರು. ಜೊತೆಗೆ ದೇವರಾಜ ಅರಸು ಅವರ ಸರ್ಕಾರ 1974 ರಲ್ಲಿ ತಂದ ಭೂ ಸುಧಾರಣಾ ಶಾಸನ ಸೋಷಲಿಸ್ಟರಿಗಿದ್ದ ಬೆಂಬಲವನ್ನು ಕಾಂಗ್ರೆಸ್ಸಿನತ್ತ ತಿರುಗಿಸಿತ್ತು. ಹೀಗಾಗಿ ಸೋಷಲಿಸ್ಟರು 1977 ರ ಚುನಾವಣೆಯ ವೇಳೆಗೆ ಜನತಾ ಪಕ್ಷದಲ್ಲಿ ವಿಲೀನವಾಗುವುದರ ಮೂಲಕ ಛಿದ್ರವಾಗಿ ಹೋದರು.

ಅಧ್ಯಾಯ : 7

ತುರ್ತುಪರಿಸ್ಥಿತಿಯಲ್ಲಿ ಸೋಷಲಿಸ್ಟ ಪಕ್ಷ

---

7. ತುರ್ತುಪರಿಸ್ಥಿತಿಯಲ್ಲಿ ಸೋಷಲಿಸ್ಟ್ ಪಕ್ಷ

1975 ರ ಜೂನ 25 ರಂದು ಘೋಷಿತವಾದ ತುರ್ತುಪರಿಸ್ಥಿತಿ ಭಾರತದ ರಾಜಕಾರಣದಲ್ಲಿ ಮಹತ್ತರ ಘಟನೆ. ತುರ್ತುಪರಿಸ್ಥಿತಿಯನ್ನು ಘೋಷಿಸುವ ಮೂಲಕ ಆಗಿನ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿ ತಮ್ಮ ವೈಯುಕ್ತಿಕ ಸರ್ವಾಧಿಕಾರವನ್ನು ಹೇರಿದ್ದರು. ಇದನ್ನು ರಾಷ್ಟ್ರದ್ಯಂತ ಸೋಷಲಿಸ್ಟ್ ಪಕ್ಷವೂ ಸೇರಿದಂತೆ ಎಲ್ಲ ವಿರೋಧ ಪಕ್ಷದವರೂ ಜೊತೆಗೆ ಕೆಲವು ಕಾಂಗ್ರೆಸ್ಸಿಗರೂ ತೀವ್ರವಾಗಿ ಪ್ರತಿಭಟಿಸಿದರು. ಅದೇ ರೀತಿ ರಾಜ್ಯದಲ್ಲೂ ತೀವ್ರ ಪ್ರತಿಭಟನೆಯ ಅಲೆ ಎದ್ದಿತು.

ತುರ್ತುಪರಿಸ್ಥಿತಿಯನ್ನು ಜಿಲ್ಲೆಯಲ್ಲಿ ಸೋಷಲಿಸ್ಟ್ ಪಕ್ಷ ತೀವ್ರವಾಗಿ ಪ್ರತಿಭಟಿಸಬಹುದೆಂದು ನಿರೀಕ್ಷೆಯಿತು. ಆದರೆ ಈ ವೇಳೆಗೆ ಜಿಲ್ಲೆಯಲ್ಲಿ ರಾಜಕೀಯ ಪರಿಸ್ಥಿತಿ ಗೊಂದಲಮಯವಾಗಿತ್ತು. ಸಮಾಜವಾದಿಗಳು ಸ್ವತಃ ಆಂತರಿಕ ಸಮಸ್ಯೆಯಲ್ಲಿ ಸಿಲುಕಿಕೊಂಡಿದ್ದರು. ಇದಕ್ಕೆ ಕಾರಣಗಳು ಹಲವಾರು.

ಮೊದಲನೆಯದಾಗಿ, 1972 ರಲ್ಲಿ ಗೋಪಾಲಗೌಡರು ನಿಧನರಾದ ನಂತರ ಪಕ್ಷವನ್ನು ಸಮರ್ಥವಾಗಿ ಮುನ್ನಡೆಸುವ ನಾಯಕನಿಲ್ಲದೆ ಸೋಷಲಿಸ್ಟರು ದಾರಿತೋಚದವರಂತಾಗಿದ್ದರು. ಇನ್ನೊಬ್ಬ ಪ್ರಮುಖ ಮುತ್ಸದ್ದಿ ಎಂ.ಆರ್. ಪರಮೇಶ್ವರಪ್ಪ ಪಕ್ಷದೊಳಗಿನ ಆಂತರಿಕ ವಿದ್ಯಮಾನಗಳಿಂದ ಬೇಸತ್ತು ತಟಸ್ಥರಾಗಿದ್ದರೆಂದು ತಿಳಿದುಬರುತ್ತದೆ. ಇದಕ್ಕೆ ಕಾರಣ ತುರ್ತುಪರಿಸ್ಥಿತಿಯಲ್ಲಿ ತೀವ್ರವಾದ ಜನಾಂದೋಲನ ನಡೆಸಬಹುದಾಗಿದ್ದ ಜಿಲ್ಲೆಯ ಪ್ರಮುಖ ಸಮಾಜವಾದಿ ಮುಖಂಡರಾದ ಎಸ್.ಬಂಗಾರಪ್ಪ, ಕಾಗೋಡು ತಿಮ್ಮಪ್ಪ, ಬಿ.ಸ್ವಾಮಿರಾವ್, ಕೋಣಂದೂರು ಲಿಂಗಪ್ಪ ಇವರುಗಳು ತಟಸ್ಥರಾಗಿದ್ದು, ಕಾಂಗ್ರೆಸ್ ಪಕ್ಷ ಸೇರಲು ಸನ್ನದ್ಧರಾಗಿದ್ದರು. ಇದಕ್ಕೆ ಜಿಲ್ಲೆಯ ಹಿರಿಯ ಸಮಾಜವಾದಿ ಮುಖಂಡ ಎ.ವಿ.ಶ್ರೀನಿವಾಸ ಕೊಡುವ ಕಾರಣವೆಂದರೆ,''ಹಿಂದೆ ಇದ್ದ ಭೂ ಸುಧಾರಣೆಗೆ ಹೊಸ ರೂಪ ಕೊಟ್ಟಿದ್ದರು ದೇವರಾಜ ಅರಸ್. ಇದಲ್ಲದೆ ಬಲಿಷ್ಠ ಕೋಮುಗಳ ಹಿಡಿತದಿಂದ

ರಾಜಕೀಯ ಶಕ್ತಿಯನ್ನು ಕಸಿದುಕೊಂಡು ಹಿಂದುಳಿದ ಜಾತಿ ವರ್ಗಕ್ಕೆ ಹಸ್ತಾಂತರಿಸಿದ್ದರಿಂದ ಸ್ವಾಭಾವಿಕವಾಗಿಯೇ ಈ ನಾಲ್ವರು ಸಮಾಜವಾದಿಗಳು ಮಾನಸಿಕವಾಗಿ ಅರಸರ ಸಮೀಪವರ್ತಿಗಳಾಗಿದ್ದರು. ಕಾಂಗ್ರೆಸ ಬಗ್ಗೆ ವಿಶೇಷ ಒಲವು ಇಲ್ಲದಿದ್ದರೂ ಅರಸರ ವ್ಯಕ್ತಿತ್ವಕ್ಕೆ, ಕ್ರಿಯಾಶಕ್ತಿಗಳಿಗೆ ಮಾರುಹೋಗಿದ್ದ ಇವರುಗಳು ತುರ್ತುಪರಿಸ್ಥಿತಿ ವಿರುದ್ಧ ಉಗ್ರರೀತಿಯ ಪ್ರತಿಭಟನೆ ಮಾಡುವ ಸ್ಥಿತಿಯಲ್ಲಿರಲಿಲ್ಲ.

ಹೀಗಾಗಿ ಸೊರಬ, ಸಾಗರ, ಹೊಸನಗರ, ತೀರ್ಥಹಳ್ಳಿ ಕ್ಷೇತ್ರಗಳಲ್ಲಿ ಪ್ರತಿಭಟನೆ ನೀರಸವಾಗಿತ್ತು. ತುರ್ತುಪರಿಸ್ಥಿತಿಯ ಅವಧಿಯಲ್ಲಿ ಸೋಷಲಿಸ್ಟ್ ಪಾರ್ಟಿ ಒಂದು ರೀತಿ ಮೂರ್ಛಾವಸ್ಥೆಯಲ್ಲಿತ್ತು. (ಕ್ರಾಂತಿದೀಪ, 1995, ಸಂಚಿಕೆ:236, ಸಂಪುಟ:166). ಈ ಹೇಳಿಕೆ ಜಿಲ್ಲೆಯಲ್ಲಿ ಸೋಷಲಿಸ್ಟ್ ಪಕ್ಷ ಆಗ ಎದುರಿಸುತ್ತಿದ್ದ ಸಮಸ್ಯೆಯ ನೈಜ ಚಿತ್ರಣವಾಗಿದೆ.

ಇಷ್ಟಲ್ಲದೆ, ದೇವರಾಜ ಅರಸರು ಬಂಗಾರಪ್ಪ, ಕಾಗೋಡು ತಿಮ್ಮಪ್ಪನವರನ್ನು ಕಾಂಗ್ರೆಸ ಸೇರುವಂತೆ ಬಹಿರಂಗವಾಗಿ ಕರೆನೀಡಿದ್ದರು. ಈ ಕರೆಗೆ ಓಗೊಟ್ಟ ಮೊದಲ ವ್ಯಕ್ತಿ ಬಂಗಾರಪ್ಪನವರೆಂದು ತಿಳಿದು ಬರುತ್ತದೆ. ಇವರ ಬೆನ್ನು ಹಿಂದೆಯೇ ಕಾಗೋಡು ತಿಮ್ಮಪ್ಪ, ಸ್ವಾಮಿರಾವ್, ಕೋಣಂದೂರು ಲಿಂಗಪ್ಪ-ಹೀಗೆ ಸಾಲುಸಾಲಾಗಿ ಕಾಂಗ್ರೆಸ್ಸಿಗೆ ಸೇರಿದರು. ಈ ಘಟನೆ ಉಳಿದ ಸೋಷಲಿಸ್ಟರನ್ನು ಮಾನಸಿಕವಾಗಿ ಗೊಂದಲಕ್ಕೀಡು ಮಾಡಿತು.

ಇನ್ನುಳಿದ ಪ್ರಮುಖ ಮುಖಂಡರೆಂದರೆ ಜೆ.ಎಚ್.ಪಟೇಲ್, ಎ.ವಿ.ಶ್ರೀನಿವಾಸ ಮತ್ತು ಧರ್ಮಪ್ಪ ಪ್ರತಿಭಟನೆಗಿಳಿದು ಜೈಲು ಸೇರಿದ್ದರು. ಇವರ ಬಂಧನವನ್ನು ಜನತೆ ತೀವ್ರವಾಗಿ ಪ್ರತಿಭಟಿಸಬಹುದೆಂದು ಸಮಾಜವಾದಿಗಳು ನಿರೀಕ್ಷಿಸಿದ್ದರು. ಆದರೆ ಹಾಗಾಗಲಿಲ್ಲ. ಇದರಿಂದ ತೀವ್ರ ಬೇಸರಗೊಂಡ ಪಟೇಲರು ಹಾಗೂ ಅವರ ಇನ್ನುಳಿದ ಸಂಗಡಿಗರು ಮೌನವಹಿಸುವುದು ಅನಿವಾರ್ಯವಾಯಿತು ಎಂದು ಎ.ವಿ.ಶ್ರೀನಿವಾಸ ಹೇಳಿದ್ದಾರೆ.

ಇನ್ನುಳಿದಂತೆ ತುರ್ತುಪರಿಸ್ಥಿತಿಯ ಕಾಲದಲ್ಲಿ ಕೆಲವು ಕರಪತ್ರ ಮುದ್ರಿಸಿ ಹಂಚುವುದು ಮುಂತಾದ ಸಣ್ಣಪ್ರಮಾಣದ ಪ್ರತಿಭಟನೆಯನ್ನು ಬಿಟ್ಟರೆ ಈ ಅವಧಿಯಲ್ಲಿ ಜಿಲ್ಲೆಯಲ್ಲಿ ಸೋಷಲಿಸ್ಟರು ನಿಷ್ಕ್ರಿಯರಾಗಿದ್ದರೆಂದೇ ಹೇಳಬಹುದು.

ಸೋಷಲಿಸ್ಟ್ ಪಕ್ಷದ ಅಂತ್ಯ – ಜನತಾಪಕ್ಷದಲ್ಲಿ ವಿಲೀನ :

ತುರ್ತುಪರಿಸ್ಥಿತಿಯ ವೇಳೆಗಾಗಲೇ ಅಧೋಗತಿಯತ್ತ ಸಾಗಿದ್ದ ಸಮಾಜವಾದಿಗಳು 1977ರ ಚುನಾವಣೆಯ ವೇಳೆಗೆ ತಮ್ಮ ಅಸ್ತಿತ್ವವನ್ನು ಕಳೆದುಕೊಂಡರು. ಹೀಗೆ ಅಸ್ತಿತ್ವವನ್ನು ಕಳೆದುಕೊಳ್ಳಲಿಕ್ಕೆ ಕಾರಣಗಳು ಹಲವು. ಅವುಗಳಲ್ಲಿ ಮುಖ್ಯವಾದುದೆಂದರೆ ಕಾಂಗ್ರೆಸ್ ಪಕ್ಷಕ್ಕೆ ಪರ್ಯಾಯವಾಗಿ ಒಂದು ಪ್ರಬಲ ವಿರೋಧಪಕ್ಷವನ್ನು ಕಟ್ಟುವುದಾಗಿತ್ತು.

ಸ್ವಾತಂತ್ರ್ಯ ಬಂದ ತರುವಾಯ 1952ರ ಮೊದಲ ಚುನಾವಣೆಯಿಂದ 1977ರ ವರೆಗೂ ಕಾಂಗ್ರೆಸ್ ಪಕ್ಷವೇ ಆಡಳಿತ ನಡೆಸಿದ್ದಿತು. ಸೋಷಲಿಸ್ಟ್ ಪಕ್ಷ ಸೇರಿದಂತೆ ಎಲ್ಲ ವಿರೋಧ ಪಕ್ಷಗಳು ಎಷ್ಟೇ ಪ್ರಯತ್ನಿಸಿದರೂ ಕಾಂಗ್ರೆಸ್ಸ್ ಪಕ್ಷವನ್ನು ಸೋಲಿಸಲಾಗಿರಲಿಲ್ಲ. ಇದರಿಂದ ಹತಾಶೆಗೊಂಡಿದ್ದ ಸಮಾಜವಾದಿಗಳು ತಮ್ಮ ಸಿದ್ಧಾಂತವನ್ನು ಬಲಿಕೊಟ್ಟಾದರೂ ಕಾಂಗ್ರೆಸ್‌ಗೆ ಪರ್ಯಾಯ ಶಕ್ತಿಯನ್ನು ಕಟ್ಟಲು ನಿರ್ಧರಿಸಿದ್ದರು. ಜೊತೆಗೆ ತುರ್ತುಪರಿಸ್ಥಿತಿಯ ಕಾಲದಲ್ಲಿ ವಿರೋಧ ಪಕ್ಷದವರೆಲ್ಲ ಜೈಲು ಸೇರಿದ್ದು, (ಕೆಲವರು ಒಂದೇ ಜೈಲಿನಲ್ಲಿದ್ದರು) ತಮ್ಮ ತಮ್ಮ ನಡುವಿನ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಕಾಂಗ್ರೆಸ್‌ಗೆ ಪರ್ಯಾಯ ಶಕ್ತಿಯನ್ನು ಕಟ್ಟುವಂತೆ ಪ್ರೇರೇಪಿಸಿತ್ತು.

ಈ ಹಿನ್ನಲೆಯಲ್ಲಿ 1976 ರ ನವೆಂಬರ್ 27 ಮತ್ತು 28 ರಂದು ಬೊಂಬಾಯಿಯಲ್ಲಿ ನಡೆದ ಸೋಷಲಿಸ್ಟ್ ಪಕ್ಷದ ರಾಷ್ಟ್ರೀಯ ಸಮ್ಮೇಳನ ತೆಗೆದುಕೊಂಡ ನಿರ್ಣಯ ಮಹತ್ವದ್ದು. '' ಇಂಥ ಪರಿಸ್ಥಿತಿಯಲ್ಲಿ ಎಷ್ಟೇ ಉದಾತ್ತವಾದ ಬೇರೆ ಯಾವುದೇ ಧ್ಯೇಯೋದ್ದೇಶಗಳಿಗಿಂತ ಪ್ರಜಾಸತ್ತಾತ್ಮಕ ಮೌಲ್ಯಗಳ ಪುನರ್‌ಸ್ಥಾಪನೆ ಆದ್ಯತೆ ಪಡೆಯುತ್ತ

[illegible]

[illegible]

[illegible]

[illegible]

ಕಳೆದ ವಿದ್ಯಮಾನಗಳಿಂದ ಖಚಿತಗೊಂಡಿರುವ ಅಂಶಗಳೆಂದರೆ,

1. ಆಡಳಿತ ಪಕ್ಷ ಸರ್ವಾಧಿಕಾರದತ್ತ ಮುನ್ನಡೆಯುತ್ತಿರುವುದನ್ನು ಯಾವುದೇ ವಿರೋಧಿ ಪಕ್ಷ ಏಕಾಕಿಯಾಗಿ ಹೋರಾಡಿ ತಡೆಯಲಾಗದು.

2. ಪ್ರಜಾಪ್ರಭುತ್ವಕ್ಕಾಗಿ ನಡೆದ ಹೋರಾಟದಲ್ಲಿ ಯಾವುದೇ ಪಕ್ಷಕ್ಕೆ ಸೇರದ ಸಾವಿರಾರು ಯುವಕರು, ಯುವತಿಯರು ಹೋರಾಡಿ ಕಷ್ಟನಷ್ಟಗಳನ್ನು ಅನುಭವಿಸಿದ್ದಾರೆ.

''ಈ ಹಿನ್ನೆಲೆಯಲ್ಲಿ ಪರ್ಯಾಯ ಪಕ್ಷದ ರಚನೆಯನ್ನು ಬಿಟ್ಟು ಬೇರೆ ಮಾರ್ಗವಿಲ್ಲ ಎನ್ನುವುದು ಸಮಾಜವಾದಿ ಪಕ್ಷಕ್ಕೆ ಮನವರಿಕೆಯಾಗಿದೆ. ಈ ದಿಕ್ಕಿನಲ್ಲಿ ಪ್ರಯತ್ನಗಳನ್ನು ಮುಂದುವರೆಸುವಂತೆಯೂ, ವಿರೋಧಿ ಪಕ್ಷಗಳ ವಿಲೀನ ಅಸಾಧ್ಯವಾಗಿ ಜಯಪ್ರಕಾಶ ನಾರಾಯಣರು ಬೇರೊಂದು ಕ್ರಾಂತಿಕಾರಿ ಪ್ರಜಾಸತ್ತಾತ್ಮಕ ಪಕ್ಷವೊಂದನ್ನು ಹೊಸದಾಗಿ ರಚಿಸಲು ಪ್ರಯತ್ನಿಸುವುದಾದಲ್ಲಿ ಅವರಿಗೆ ಸಂಪೂರ್ಣ ಬೆಂಬಲ ನೀಡುವಂತೆಯೂ, ಸರ್ವಾಧಿಕಾರ ವಿರೋಧಿ ಮತ್ತು ಪ್ರಜಾಪ್ರಭುತ್ವವಾದಿ ಹಾಗೂ ಸಮಾಜವಾದಿ ಪಕ್ಷಗಳು ಮತ್ತು ಗುಂಪುಗಳು ಪಾಲ್ಗೊಳ್ಳುವಂತೆ ಮಾಡುವ ಪ್ರಯತ್ನಗಳನ್ನು ಸಮಾಜವಾದಿ ಪಕ್ಷದ ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಕೈಗೊಳ್ಳಬೇಕೆಂತಲೂ ಈ ಅಧಿವೇಶನ ಆದೇಶ ನೀಡುತ್ತದೆ'' ಎಂದು ಹೇಳಿತು. (ಬಾಪು ಹೆದ್ದೂರ ಶೆಟ್ಟಿ ಮತ್ತು ಹನುಮಂತ, 1979, ಪು: 158).

ಸಮಾಜವಾದಿಗಳು ತಳೆದ ಈ ನಿರ್ಣಯ ತತ್ಕ್ಷಣದ ನಿರ್ಧಾರವಾಗಿರಲಿಲ್ಲ. ಇದು ಹಲವು ವರ್ಷಗಳಿಂದ ಪಕ್ಷದಲ್ಲುಂಟಾದ ಬದಲಾವಣೆಯ ಪರಿಣಾಮವಾಗಿತ್ತು. ತಮ್ಮಲ್ಲೇ ಹಲವು ಬಾರಿ ಒಡಕು,ವಿಲೀನಗಳಿಂದ ಬೇಸತ್ತಿದ್ದರು. ಜೊತೆಗೆ ಲೋಹಿಯಾ, ಆಚಾರ್ಯ ನರೇಂದ್ರದೇವ ಮುಂತಾದವರ ಸಾವು, ಜಯಪ್ರಕಾಶ ನಾರಾಯಣರಂತಹವರು ಪಕ್ಷಬಿಟ್ಟು ಸರ್ವೋದಯದ ಹಾದಿಹಿಡಿದದ್ದು, ಯುವಪೀಳಿಗೆ ಸಿದ್ಧಾಂತಕ್ಕಿಂತ ಅಧಿಕಾರದತ್ತ ದೃಷ್ಟಿ ಹರಿಸಿದ್ದು — ಹೀಗೆ ಹಲವಾರು ಕಾರಣಗಳಿಂದ ಅದಾಗಲೇ ನೋಷರನ್ವ ಸಿದ್ಧಾಂತ

ಮರೆಯಾಗುತ್ತಾ ಕೇವಲ ರಾಜಕೀಯ ಪಕ್ಷವಾಗಿತ್ತು. ಇದು ಸಹಜವಾಗಿಯೇ ಪಕ್ಷವು ತನ್ನ ಸ್ವತಂತ್ರ ಅಸ್ತಿತ್ವವನ್ನು ಬಿಟ್ಟು ಬೇರೊಂದು ಪಕ್ಷದಲ್ಲಿ ವಿಲೀನ ವಾಗಲು ಕಾರಣವಾಗಿತ್ತು.

ಜೊತೆಗೆ ಜಯಪ್ರಕಾಶ ನಾರಾಯಣರ ಸಂಪೂರ್ಣ ಕ್ರಾಂತಿಯ ಆಂದೋಲ ನದಲ್ಲಿ ಸಂಸ್ಥಾ ಕಾಂಗ್ರೆಸ್, ಜನಸಂಘ, ಭಾರತೀಯ ಲೋಕದಳ ಹಾಗೂ ಸಮಾಜ ವಾದಿ ಪಕ್ಷಗಳು ಜೊತೆ ಸೇರಿ ಕೆಲಸ ಮಾಡಿದ್ದರಿಂದ 1977 ರಲ್ಲಿ ನಡೆಯಬೇಕಾಗಿದ್ದ ಲೋಕಸಭಾ ಚುನಾವಣೆಯಲ್ಲಿ ಈ ನಾಲ್ಕು ಪಕ್ಷಗಳು ಸೇರಿ ಸ್ಪರ್ಧಿಸಬೇಕೆಂಬ ವಿಷಯ ವನ್ನು ಚರ್ಚಿಸಲಾಯಿತು. 1977ರ ಮಾರ್ಚಿಯಲ್ಲಿ ಲೋಕಸಭೆಗೆ ಚುನಾವಣೆಗಳನ್ನು ಘೋಷಿಸಿದ್ದರಿಂದ ಈ ನಾಲ್ಕು ಪಕ್ಷಗಳು ತಮ್ಮ ಸ್ವತಂತ್ರ ಅಸ್ತಿತ್ವವನ್ನು ಬಿಟ್ಟು ಕೊಡಲು ಒಪ್ಪಿದ್ದವು. ಇದೇ ಸಮಯದಲ್ಲಿ ಗುಜರಾತ್ ವಿಧಾನಸಭೆಗೆ ಚುನಾವಣೆಗಳು ನಡೆಯುತ್ತಿದ್ದವು. ಆಗ ಈ ನಾಲ್ಕು ಪಕ್ಷಗಳು 'ಜನತಾರಂಗ' ವೆಂಬ ಹೆಸರಿನಲ್ಲಿ ಸ್ಪರ್ಧಿಸಿದವು. ನಂತರ ಅದೇ ಜನತಾಪಕ್ಷವಾಯಿತು.

ರಾಷ್ಟ್ರಮಟ್ಟದಲ್ಲಾದ ಈ ಬದಲಾವಣೆ ಸಹಜವಾಗಿಯೇ ಜಿಲ್ಲೆಗೂ ಅನ್ವಯಿ ಸಿತು. ಆದರೆ ಜಿಲ್ಲೆಯಲ್ಲಿ ಸಮಾಜವಾದಿಗಳು ಸಂಪೂರ್ಣವಾಗಿ ಜನತಾಪಕ್ಷವನ್ನು ಸೇರ ಲಿಲ್ಲ. ಕಾರಣ ಲೋಹಿಯಾರ ನಿಷ್ಠಾವಂತ ಅನುಯಾಯಿಗಳು ತಮ್ಮ ಸಿದ್ಧಾಂತ ಬಿಟ್ಟು ಜನಸಂಘದಂತಹ ಭಿನ್ನ ಸಿದ್ಧಾಂತದ ಪಕ್ಷಗಳ ಜೊತೆ ಸೇರುವುದಿಲ್ಲವೆಂದು ರಾಜಕೀಯದಿಂದ ದೂರ ಉಳಿಯಲು ನಿರ್ಧರಿಸಿದರೆಂದು ತಿಳಿದು ಬರುತ್ತದೆ. ಆದರೆ ಇಂತಹವರ ಸಂಖ್ಯೆ ತೀರ ಕಡಿಮೆಯಿದ್ದುದರಿಂದ ಸಮಾಜವಾದಿಗಳು ತಮ್ಮ ಅಸ್ತಿತ್ವವನ್ನು ಸಂಪೂರ್ಣವಾಗಿ ಕಳೆದುಕೊಂಡರು.

ಅಧ್ಯಾಯ : 8

ವಿವಿಧ ಕ್ಷೇತ್ರಗಳ ಮೇಲೆ ಸಮಾಜವಾದಿ ಚಳುವಳಿಯ ಪ್ರಭಾವ

(ಅ) 1974ರ ಭೂ ಸುಧಾರಣಾ ಶಾಸನ ಮತ್ತು ಸಮಾಜವಾದಿಗಳು

(ಆ) ರೈತ ಚಳುವಳಿಯ ಮೇಲೆ ಪ್ರಭಾವ

(ಇ) ಸಾಹಿತ್ಯದ ಮೇಲೆ ಪ್ರಭಾವ

8. ವಿವಿಧ ಕ್ಷೇತ್ರಗಳ ಮೇಲೆ ಸಮಾಜವಾದಿ ಚಳುವಳಿಯ ಪ್ರಭಾವ

ಶಿವಮೊಗ್ಗ ಜಿಲ್ಲೆಯಲ್ಲಿ ಸಮಾಜವಾದಿ ಚಳುವಳಿಯ ಪ್ರಭಾವವನ್ನು ನಾವು ಹಲವಾರು ಕ್ಷೇತ್ರಗಳಲ್ಲಿ ನೋಡಬಹುದು. ಅವುಗಳಲ್ಲಿ ಭೂ ಸುಧಾರಣಾ ಶಾಸನಗಳು, ರೈತಸಂಘಟನೆ, ಸಾಹಿತ್ಯಕ್ಷೇತ್ರಗಳು ಮುಖ್ಯವಾದವು. ಉಳಿದಂತೆ ಧಾರ್ಮಿಕ, ಸಾಮಾಜಿಕ ಕ್ಷೇತ್ರಗಳಲ್ಲೂ ಅದರ ಪ್ರಭಾವವನ್ನು ಗುರುತಿಸಬಹುದು.

(ಅ) 1974ರ ಭೂ ಸುಧಾರಣಾ ಶಾಸನ ಮತ್ತು ಸಮಾಜವಾದಿಗಳು :

ಕಾಗೋಡು ಸತ್ಯಾಗ್ರಹದಂತಹ ಹೋರಾಟಗಳು ತತ್‌ಕ್ಷಣದಲ್ಲಿ ವಿಫಲವಾದಂತೆ ಕಂಡುಬರುತ್ತದೆ. ಅದರ ಪ್ರಭಾವ ಮತ್ತು ಪರಿಣಾಮ ದೀರ್ಘಕಾಲೀನವಾದುದು. ಅದರ ಯಶಸ್ಸನ್ನು ನಾವು ನೋಡಬೇಕಾದರೆ 1974ರ ಭೂ ಸುಧಾರಣಾ ಶಾಸನದ ಮಹತ್ವವನ್ನು ನೋಡಬೇಕಾಗುತ್ತದೆ.

1974ರ ಭೂ ಸುಧಾರಣಾ ಶಾಸನವನ್ನು ಜಾರಿಗೆ ತಂದದ್ದು ಆಗ ಆಡಳಿತದಲ್ಲಿದ್ದ ಕಾಂಗ್ರೆಸ್ ಸರ್ಕಾರ. ಅದರಲ್ಲೂ ಮುಖ್ಯ ಮಂತ್ರಿಯಾಗಿದ್ದ ಡಿ.ದೇವರಾಜ ಅರಸರ ವಿಶೇಷ ಆಸಕ್ತಿ ಈ ಶಾಸನ ಜಾರಿಗೆ ಬರಲು ಕಾರಣವಾಗಿತ್ತು ಎನ್ನಬಹುದು. ಕರ್ನಾಟಕದಲ್ಲಿ ಎಲ್ಲ ಭೂ ಸುಧಾರಣಾ ಶಾಸನಗಳು ಜಾರಿಗೆ ಬಂದದ್ದು ಕಾಂಗ್ರೆಸ್ ಆಳ್ವಿಕೆಯಲ್ಲಿ. ಕಾಂಗ್ರೆಸ್ ಸರ್ಕಾರ ಈ ಸುಧಾರಣೆಗಳನ್ನು ಜಾರಿಗೆ ತರಲು ಸಮಾಜವಾದಿಗಳಿಂದ ಪ್ರಭಾವಿತರಾಗಿದ್ದರು ಎಂಬುದು ಒಂದು ಪ್ರಬಲವಾದ ವಾದ. ಇದಕ್ಕೆ ಸಂಬಂಧಿಸಿದಂತೆ, ಜಯಪ್ರಕಾಶ ನಾರಾಯಣ್ 1948 ರಲ್ಲಿ ಕಾಂಗ್ರೆಸ್ಸನ್ನು ತ್ಯಜಿಸಿ ಸಮಾಜವಾದಿ ಪಕ್ಷವನ್ನು ಕಟ್ಟುವ ಸಂದರ್ಭದಲ್ಲಿ 13 ವರ್ಷಗಳ ಕಾಂಗ್ರೆಸ್ – ಸಮಾಜವಾದಿಗಳ ಸಂಬಂಧಗಳ ಮೇಲೆ ಪಕ್ಷಿನೋಟ ಬೀರುತ್ತಾ ಹೇಳಿದ ಮಾತನ್ನು ಇಲ್ಲಿ ಉಲ್ಲೇಖಿಸಬಹುದು: ''ಪ್ರತಿಯೊಬ್ಬ ಕಾಂಗ್ರೆಸ್ಸಿಗನೂ ಇಂದು ತನ್ನನ್ನು ಸಮಾಜವಾದಿ ಎಂದು ಹೇಳಿಕೊಳ್ಳಲು ಕಾತುರನಾಗಿರುವುದಕ್ಕೆ ಕಾರಣ ನಮ್ಮ ಪಕ್ಷದ ಕೆಲಸ ಎನ್ನುವುದು ಹೆಮ್ಮೆಯ ವಿಷಯ.'

ಈ ಮಾತು ಕಾಂಗ್ರೆಸ್ – ಸಮಾಜವಾದಿಗಳ ಸಂಬಂಧದ ದೃಷ್ಟಿಯಿಂದ ಮುಖ್ಯವಾಗುತ್ತದೆ.

1952 ರ ಮೈಸೂರು ಟೆನೆನ್ಸಿ ಕಾಯಿದೆ ಮತ್ತು 1954 – 55ರ ಧಾರ್ಮಿಕ ಜಹಗೀರಿ ಮತ್ತು ಇನಾಂ ರದಿಯಾತಿ ಶಾಸನಗಳು ಜಾರಿಗೆ ಬರುವಲ್ಲಿ ಪ್ರಮುಖ ಪಾತ್ರ ವಹಿಸಿದವರು ಕಡಿದಾಳ ಮಂಜಪ್ಪನವರು ಎಂಬುದು ಗಮನಾರ್ಹ. ಮಲೆನಾಡು ಗೇಣಿದಾರರ ಸಂಘದ ಸ್ಥಾಪಕರೂ ಸಮಾಜವಾದಿಗಳ ನಿಕಟ ಸಂಪರ್ಕ ಹೊಂದಿದ್ದವರೂ ಆಗಿದ್ದ ಮಂಜಪ್ಪನವರ ವಿಶೇಷ ಆಸಕ್ತಿ ಈ ಶಾಸನಗಳ ಜಾರಿಗೆ ಕಾರಣವಾಗಿತ್ತು. ಇದೇರೀತಿ 1974ರ ಭೂ ಸುಧಾರಣಾ ಶಾಸನ ಜಾರಿಗೆ ಬರಲಿಕ್ಕೂ ಸೋಷಲಿಸ್ಟರ ಪ್ರಭಾವ ಕಾರಣವಾಗಿತ್ತು ಎಂದರೆ ತಪ್ಪಾಗಲಾರದು. ಈ ಅಂಶವನ್ನು ಅನೇಕ ಗಣ್ಯರು ಒಪ್ಪುತ್ತಾರೆ. ಕಾಗೋಡು ಸತ್ಯಾಗ್ರಹದಲ್ಲಿ ಪ್ರಮುಖ ಪಾತ್ರವಹಿಸಿದ ಗಣಪತಿಯಪ್ಪನವರ ಪ್ರಕಾರ, ''ಕರ್ನಾಟಕ ರಾಜ್ಯ ಭೂ ಸುಧಾರಣಾ ವ್ಯವಸ್ಥೆಯಲ್ಲಿ ದೇಶದ ಇತರ ರಾಜ್ಯಗಳಿಗಿಂತ ಒಂದು ಹೆಜ್ಜೆ ಮುಂದೆ ಹೋಗಿದೆ ಎಂಬ ಕೀರ್ತಿಯು ಪ್ರಸಿದ್ಧಿಗೆ ಪಾತ್ರವಾಗಿರುವುದಾದರೆ ಅದಕ್ಕೆ ಕಾಗೋಡು ಸತ್ಯಾಗ್ರಹದ ಹಿನ್ನಲೆಯೇ ಮುಖ್ಯಕಾರಣ'' (ಗಣಪತಿಯಪ್ಪ, ಜೀವಂತ ಜ್ಯೋತಿ, ಪು: 122 – 23). ತ್ಯಾನಂದೂರು ಪುಟ್ಟಣ್ಣ ಕೂಡ ತಮ್ಮ 'ನಾನು ಕಂಡ ಮಲೆನಾಡು' ಎಂಬ ಪುಸ್ತಕದಲ್ಲಿ ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಕಾಗೋಡು ತಿಮ್ಮಪ್ಪ, ಎಸ್.ಬಂಗಾರಪ್ಪ ಮುಂತಾದ ಅನೇಕ ಸಮಾಜವಾದಿಗಳೂ ಇದನ್ನೆ ವ್ಯಕ್ತಪಡಿಸಿದ್ದಾರೆ.

ಭೂ ಸುಧಾರಣಾ ಶಾಸನಗಳು ಜಾರಿಗೆ ಬರುವಲ್ಲಿ ಸಮಾಜವಾದಿ ಧೋರಣೆ ಮತ್ತು ಸಮಾಜವಾದಿಗಳ ಪ್ರಭಾವ ಸರ್ವಸಾಮಾನ್ಯವಾಗಿ ಒಪ್ಪಿಕೊಂಡ ಅಂಶ. ಅದೇರೀತಿ 1974ರ ಭೂ ಸುಧಾರಣಾ ಶಾಸನ ಯಶಸ್ವಿಯಾಗಿ ಕಾರ್ಯಾಚರಣೆಗೆ (ಶಿವಮೊಗ್ಗ ಜಿಲ್ಲೆಯಲ್ಲಿ) ಬರುವಲ್ಲಿ ಹಾಗೂ ಯಶಸ್ವಿಯಾಗಿ ಕಾರ್ಯಾಚರಣೆಯಾಗುವಂತೆ ನೋಡಿಕೊಳ್ಳುವಲ್ಲಿ ಸಮಾಜವಾದಿಗಳ ಪಾತ್ರ ಅಷ್ಟೇ ಮಹತ್ವವಾದುದು.

ಭೂ ಸುಧಾರಣಾ ಶಾಸನಗಳು ಎಷ್ಟೇ ಪರಿಣಾಮಕಾರಿಯಾಗಿದ್ದರೂ ಅವು ಕಾರ್ಯಾಚರಣೆಗೆ ಬರುವ ವೇಳೆಯಲ್ಲಿ ವಿಫಲವಾಗುತ್ತಿದ್ದುವೆನ್ನುವ ಅಂಶ ಇದುವರೆಗಿನ ಭೂ ಸುಧಾರಣಾ

ಶಾಸನಗಳ ಕಾರ್ಯಾಚರಣೆಗಳಿಂದ ಗೊತ್ತಾಗುತ್ತದೆ. 1974ರ ಶಾಸನ ಮೊದಲಿನ ಶಾಸನಗಳಿಗಿಂತ ಭಿನ್ನವಾಗಿದ್ದು ಹೆಚ್ಚು ಪರಿಣಾಮಕಾರಿಯಾಗಿದ್ದಾಗ್ಯೂ ಜಮೀನ್ದಾರರು ಸುಳ್ಳು ದಾಖಲೆಗಳನ್ನು ತೋರಿಸಿ ರೈತರನ್ನು ಒಕ್ಕಲೆಬ್ಬಿಸುವ ಸಾಧ್ಯತೆಯಿತ್ತು. ಈ ಸಂದರ್ಭದಲ್ಲಿ ಸಮಾಜವಾದಿಗಳು ಗೇಣಿರೈತರಿಗೆ ಅನ್ಯಾಯವಾಗದಂತೆ ನೋಡಿಕೊಳ್ಳುವಲ್ಲಿ ಪ್ರಮುಖ ಪಾತ್ರವಹಿಸಿದರು. ಶಾಸನ ಜಾರಿಗೆ ಬಂದ 1974ರ ವೇಳೆಯಲ್ಲಿ ಜಿಲ್ಲೆಯಲ್ಲಿ ಒಟ್ಟು 1,47,234 ಹೆಕ್ಟೇರ್ ಸಾಗುವಳಿ ಭೂಮಿಯಿದ್ದು, 28,907 ಹೆಕ್ಟೇರ್ ಗೇಣಿಗೆ ಒಳಪಟ್ಟಿತ್ತು. ಅಂದರೆ ಒಟ್ಟು ಭೂಮಿಯಲ್ಲಿ ಶೇ.21.5 ರಷ್ಟು.

ಜಿಲ್ಲೆಯಲ್ಲಿ ಧಣಿ – ಒಕ್ಕಲು ಸಂಬಂಧ ಹೆಚ್ಚಾಗಿ ಕಂಡುಬರುತ್ತಿದ್ದುದು ಮಲೆನಾಡುಭಾಗದಲ್ಲಿ. ಇದಕ್ಕೆ ಅಲ್ಲಿನ ಭೌಗೋಳಿಕ ಮತ್ತು ಜನಜೀವನ ಪದ್ಧತಿ ಕೂಡ ಕಾರಣವಾಗಿತ್ತು. ಜಿಲ್ಲೆಯ ಬಯಲು ಪ್ರದೇಶದಲ್ಲಿ ಧಣಿಒಕ್ಕಲು ಸಮಸ್ಯೆ ಇತ್ತಾದರೂ ಮಲೆನಾಡು ಪ್ರದೇಶಕ್ಕೆ ಹೋಲಿಸಿದರೆ ಕಡಿಮೆಯಿತ್ತು. ಈ ಕಾರಣದಿಂದಲೇ ಸೋಷಲಿಸ್ಟರು ಮಲೆನಾಡು ಭಾಗದಲ್ಲಿ ಹೆಚ್ಚು ಪ್ರಭಾವಶಾಲಿಗಳಾಗಿದ್ದರು. 1974ರ ಶಾಸನವು ಮಲೆನಾಡು ಭಾಗಗಳಲ್ಲಿ ಹೆಚ್ಚು ಯಶಸ್ವಿಯಾಗಲಿಕ್ಕೆ ಈ ಅಂಶ ಕಾರಣವಾಗಿದ್ದಿರಬಹುದು. ಇದು ಸೋಷಲಿಸ್ಟ್ ಪಕ್ಷ ಗೇಣಿರೈತರಲ್ಲಿ ಮೂಡಿಸಿದ ಜಾಗೃತಿಯ ಪರಿಣಾಮವೂ ಹೌದು. ಅಲ್ಲದೆ, ಜಿಲ್ಲೆಯ ಮಲೆನಾಡು ಭಾಗ 1974ರ ವೇಳೆಯಲ್ಲಿ ರಾಜಕೀಯವಾಗಿಯೂ ಸಂಪೂರ್ಣವಾಗಿ ಸೋಷಲಿಸ್ಟರ ಹಿಡಿತದಲ್ಲಿತ್ತು. ಈ ಭಾಗದ ತಾಲ್ಲೂಕುಗಳಾದ ತೀರ್ಥಹಳ್ಳಿ, ಹೊಸನಗರ, ಸಾಗರ, ಸೊರಬ, ತಾಲ್ಲೂಕುಗಳಲ್ಲಿ ಕ್ರಮವಾಗಿ ಕೋಣಂದೂರು ಲಿಂಗಪ್ಪ, ಬಿ.ಸ್ವಾಮಿರಾವ್, ಕಾಗೋಡು ತಿಮ್ಮಪ್ಪ, ಎಸ್.ಬಂಗಾರಪ್ಪ ಶಾಸಕರಾಗಿದ್ದು, ಶಾಸನ ಯಶಸ್ವಿಯಾಗಿ ಜಾರಿಗೆ ಬರುವಂತೆ ನೋಡಿಕೊಳ್ಳುವಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಆದರಲ್ಲೂ ದೀವರ ಜಾತಿಯ ಗೇಣಿದಾರರೇ ಹೆಚ್ಚಾಗಿ ಕಂಡುಬರುವ ಸಾಗರ, ಸೊರಬ ತಾಲ್ಲೂಕುಗಳಲ್ಲಿ ಶಾಸನದ ಉದ್ದೇಶ ಹೆಚ್ಚು ಯಶಸ್ವಿಯಾಯಿತು. ಬಹುಶಃ ಈ ಕಾರಣಕ್ಕಾಗಿಯೇ ಸಾಗರದಲ್ಲಿ ಕಾಗೋಡು ತಿಮ್ಮಪ್ಪನವರಿಗೆ, ಸೊರಬದಲ್ಲಿ ಎಸ್. ಬಂಗಾರಪ್ಪನವರಿಗೆ ಇಂದಿಗೂ ಜನಪ್ರಿಯತೆ ಉಳಿದುಕೊಂಡು ಬಂದಿರುವುದು.

1974ರ ಭೂ ಸುಧಾರಣಾ ಶಾಸನದ ಪ್ರಯೋಜನ ಪಡೆದವರ ಅಂಕಿಅಂಶ ನೋಡುವುದರಿಂದ ಈ ಶಾಸನದ ಯಶಸ್ಸು ಗೊತ್ತಾಗುತ್ತದೆ. ಶಾಸನ ಜಾರಿಯಾದ 1974ರಿಂದ 79ರ ವರೆಗೆ ಜಿಲ್ಲೆಯ ಭೂ ನ್ಯಾಯ ಮಂಡಳಿಯ ಮುಂದೆ 59,566 ಗೇಣಿದಾರರ ಅರ್ಜಿಗಳು ಬಂದಿದ್ದು, ಅದರಲ್ಲಿ 59, 461 ಅರ್ಜಿಗಳು ಹೆಚ್ಚಿನ ತಕರಾರು ಇಲ್ಲದೆ 1981ರ ವೇಳೆಗೆ ಅರ್ಜಿದಾರರ ಪರವಾಗಿಯೆ ಇತ್ಯರ್ಥವಾದವೆಂದು ತಿಳಿದುಬರುತ್ತದೆ. (ಎಂ.ವಿ.ಎಸ್.ರಾಜನ್, 1971, ಪು: 126 – 27). ಕರ್ನಾಟಕದಲ್ಲಿ ಯಶಸ್ವಿಯಾಗಿ ಜಾರಿಗೊಂಡ ಜಿಲ್ಲೆಗಳ ಪೈಕಿ ಶಿವಮೊಗ್ಗ ಜಿಲ್ಲೆ ಮೂರನೇ ಸ್ಥಾನದಲ್ಲಿತ್ತು.(ಮೊದಲೆರಡು ಸ್ಥಾನ ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳದು).

ಮೇಲಿನ ಅಂಶವನ್ನು ಗಮನಿಸಿದಾಗ ಶಾಸನ ಜಾರಿಯಾಗುವಲ್ಲಿ ಸಮಾಜವಾದಿಗಳ ಪ್ರಭಾವ, ಶಾಸನದ ಉದ್ದೇಶದ ಯಶಸ್ವಿಯಲ್ಲಿ ಸಮಾಜವಾದಿಗಳ ಪಾತ್ರವಿತ್ತೆಂಬುದು ನಿರ್ವಿವಾದ.

(ಅ) <u>ರೈತ ಚಳುವಳಿಯ ಮೇಲೆ ಪ್ರಭಾವ</u> :

ಸಮಾಜವಾದಿ ಚಳುವಳಿಯಿಂದ ಗಾಢವಾಗಿ ಪ್ರಭಾವಿಸಲ್ಪಟ್ಟ ಈಗಲೂ ಅದರ ಕುರುಹಾಗಿ ಮುಂದುವರಿಯುತ್ತಿರುವ ಇನ್ನೊಂದು ಕ್ಷೇತ್ರ — ರೈತಚಳುವಳಿ. ಕರ್ನಾಟಕ ರಾಜ್ಯ ರೈತ ಸಂಘ ಎಂಬ ಹೆಸರಿನಲ್ಲಿ ರಾಜ್ಯಾದ್ಯಂತ ವಿಸ್ತರಿಸಿಕೊಂಡು ವಿಶೇಷವಾಗಿ ಜಿಲ್ಲೆಯಲ್ಲಿ ಪ್ರಬಲ ಜನಾಂದೋಲನವಾಗಿ ಮುಂದುವರಿಯುತ್ತಿದೆ, ರೈತ ಸಂಘಟನೆ. ರೈತ ಸಂಘವನ್ನು ಕಟ್ಟಿ ಬೆಳೆಸಿದವರಲ್ಲಿ ಹೆಚ್ಚಿನವರು ಸಮಾಜವಾದಿ ಪಕ್ಷದಿಂದ ಬಂದವರಾಗಿದ್ದರೆಂಬುದು ಇಲ್ಲಿ ಗಮನಿಸಬೇಕಾದ ಅಂಶ. ದಿ: ಎನ್.ಡಿ.ಸುಂದರೇಶ್, ಕಡಿದಾಳ ಶಾಮಣ್ಣ, ಎಂ.ಡಿ.ನಂಜುಂಡಸ್ವಾಮಿ ಅಂತಹವರಲ್ಲಿ ಮುಖ್ಯರು. 1968 ರಲ್ಲಿ ಸಮಾಜವಾದಿ ಯುವಜನಸಭಾ ಎಂಬ ಸಹ ಸಂಘಟನೆಯನ್ನು ಕಟ್ಟಿಬೆಳೆಸಿದ್ದ ಇವರುಗಳು ಮುಂದೆ ಸಮಾಜವಾದಿ ಪಕ್ಷವು ಅವನತಿಯತ್ತ ಸಾಗುತ್ತಿದ್ದಾಗ ರೈತ ಸಂಘಟನೆಯನ್ನು ಕಟ್ಟುವುದರತ್ತ ತಮ್ಮ ಗಮನವನ್ನು ಹರಿಸಿದರು.

1970 ರಲ್ಲಿ ಪ್ರಾರಂಭವಾದ ಶಿವಮೊಗ್ಗ ಕಬ್ಬುಬೆಳೆಗಾರರ ಸಂಘ ಇಂದಿನ ಕರ್ನಾಟಕ ರಾಜ್ಯ ರೈತ ಸಂಘದ ಮೂಲ. ಇದರ ಮೊದಲ ಅಧ್ಯಕ್ಷರಾಗಿದ್ದವರು ಕಾಂಗ್ರೆಸ್‌ನ ಮಾಜಿ ಮಂತ್ರಿ ಹೆಚ್.ಎಸ್.ರುದ್ರಪ್ಪ. ಎನ್.ಡಿ.ಸುಂದರೇಶ್ ಇದರ ಮೊದಲ ಕಾರ್ಯದರ್ಶಿಯಾಗಿದ್ದರು. ಕಬ್ಬುಬೆಳೆಗಾರರ ಕುಂದುಕೊರತೆಗಳತ್ತ ಈ ಸಂಘ ಹೆಚ್ಚಿನ ಗಮನ ಹರಿಸಿತ್ತಾದರೂ ತನ್ನ ಕಾರ್ಯಕ್ಷೇತ್ರವನ್ನು ಇತರ ರೈತ ಸಮಸ್ಯೆಗಳ ಕಡೆಗೂ ವಿಸ್ತರಿಸಿಕೊಂಡಿತ್ತು. ಈ ಸಂಘ 1980 ರಲ್ಲಿ ಕರ್ನಾಟಕ ರಾಜ್ಯ ರೈತ ಸಂಘವೆಂದು ಪುನರ್ನಾಮಕರಣ ಹೊಂದಿತು. 1980 ರಲ್ಲಿ ನಡೆದ ಮಲಪ್ರಭಾ ರೈತ ಹೋರಾಟ ಹಾಗೂ ಆ ಹೋರಾಟದ ವೇಳೆಯಲ್ಲಿ ಪೋಲೀಸರ ಗೋಲಿಬಾರಿನಿಂದ ಮೂರು ಜನ ರೈತರ ಸಾವು ರೈತಸಂಘ ಹುಟ್ಟಲಿಕ್ಕೆ ತತ್‌ಕ್ಷಣದ ಕಾರಣವಾಗಿದ್ದವು.

ಮಲಪ್ರಭಾ ಘಟನೆ ಮೊದಲು ಪ್ರತಿಧ್ವನಿಸಿದ್ದು ಶಿವಮೊಗ್ಗ ಜಿಲ್ಲೆಯಲ್ಲಿ. ಕಾರಣ ಸಮಾಜವಾದಿಗಳು ಜಿಲ್ಲೆಯಲ್ಲಿ ರೈತ ಚಳುವಳಿಯ ಪರಂಪರೆಯನ್ನ ಹಾಕಿಕೊಟ್ಟಿದ್ದರು.

[illegible]

[illegible]

[illegible]

1980 ರಲ್ಲಿ ಪ್ರಾರಂಭವಾದ ರೈತ ಸಂಘ ತನ್ನ ವಿಶಿಷ್ಟ ಹೋರಾಟಗಳ ಮೂಲಕ ಬೇಗನೆ ಪ್ರವರ್ಧಮಾನಕ್ಕೆ ಬಂದಿತು. ಮುಖ್ಯವಾಗಿ ಇದು ಶಿವಮೊಗ್ಗ ಜಿಲ್ಲೆಯಲ್ಲಿ ತನ್ನ ನೆಲೆಯನ್ನು ಕಂಡುಕೊಂಡು ಉಳಿದಂತೆ ತನ್ನ ಕಾರ್ಯಕ್ಷೇತ್ರವನ್ನು ರಾಜ್ಯದ್ಯಂತ ವಿಸ್ತರಿಸಿಕೊಂಡಿತು.

ಸಮಾಜವಾದಿ ಪಕ್ಷದ ಧೋರಣೆಗೂ ರೈತ ಸಂಘದ ಧೋರಣೆಗೂ ಸಾಕಷ್ಟು ವ್ಯತ್ಯಾಸವಿತ್ತು. ಸಮಾಜವಾದಿ ಪಕ್ಷ ಜಮೀನ್ದಾರಿಯ ರದ್ದತಿ, ಉಳುವವನೇ ನೆಲದೊಡೆಯ, ಭೂಮಿಯ ಸಮಾನ ಹಂಚಿಕೆ, ಇತ್ಯಾದಿ ಭೂ – ಒಡೆತನ ಸಂಬಂಧೀ ಹೋರಾಟಗಳಿಗೆ ಹೆಚ್ಚಿನ ಮಹತ್ವ ನೀಡಿದರೆ, ರೈತಸಂಘ ಇದಕ್ಕಿಂತ ಭಿನ್ನವಾದ ಅಂದರೆ ರೈತರ ಬೆಳೆಗೆ ವೈಜ್ಞಾನಿಕ ಬೆಲೆ, ಸುಲಭ ಬಡ್ಡಿದರದ ಸಾಲ, ಸಾಲಮನ್ನಾ, ಇತ್ಯಾದಿ ಬೇಡಿಕೆಗಳತ್ತ ತನ್ನ ಗಮನಹರಿಸಿತು.

ರೈತ ಸಂಘ ತನ್ನ ಬೇಡಿಕೆಗಳನ್ನು ಭಿನ್ನ ರೀತಿಯಲ್ಲೂ ರೂಪಿಸಿಕೊಂಡಿದ್ದಕ್ಕೆ ಬದಲಾದ ಸನ್ನಿವೇಶವೂ ಕಾರಣವಾಗಿತ್ತೆಂದರೆ ತಪ್ಪಾಗಲಾರದು. ಮುಖ್ಯವಾಗಿ ನೀರಾವರಿ ಪ್ರದೇಶದಲ್ಲಿ ಜಾರಿಗೆ ಬಂದ ವೈಜ್ಞಾನಿಕ ಬೇಸಾಯಪದ್ಧತಿ ಭಿನ್ನರೀತಿಯ ಸಮಸ್ಯೆಗಳನ್ನು ಸೃಷ್ಟಿಸಿತು. ವೈಜ್ಞಾನಿಕ ಬೇಸಾಯದಿಂದ ಉತ್ಪತ್ತಿಯೇನೋ ಹೆಚ್ಚಿತು. ಜೊತೆಗೆ ಭಾರೀ ಬಂಡವಾಳವನ್ನು ಅಪೇಕ್ಷಿಸುತ್ತಿತ್ತು. ಪರಿಣಾಮವಾಗಿ ಮಧ್ಯಮ ಹಾಗೂ ಸಣ್ಣ ರೈತರು ಈ ವೆಚ್ಚವನ್ನು ನಿಭಾಯಿಸಲಾರದೆ ವ್ಯವಸಾಯದಿಂದ ವಿಮುಖರಾಗಲಾರಂಭಿಸಿದರು. ಇದರಿಂದ ಜಿಲ್ಲೆಯಲ್ಲಿ ಹೊಸ ಜಮೀನ್ದಾರಿ ವರ್ಗವೊಂದು ಹುಟ್ಟಿಕೊಂಡಿತು.

ಈ ಎಲ್ಲ ಕಾರಣಗಳಿಂದ ರೈತ ಸಂಘ ಭಿನ್ನ ದಾರಿ ಹಿಡಿಯಿತು. ಮದ್ಯಪಾನ ನಿರ್ಮೂಲನದಂತಹ ಸಾಮಾಜಿಕ ಪಿಡುಗನ್ನು ಹೋಗಲಾಡಿಸುವತ್ತ ಕೂಡ ರೈತ ಸಂಘ ತನ್ನ ಹೋರಾಟವನ್ನು ವಿಸ್ತರಿಸಿತು. ವಿಶೇಷವಾಗಿ ಮಹಿಳೆಯರನ್ನು ತನ್ನ ಹೋರಾಟದ ಕಕ್ಷೆಗೆ ಸೇರಿಸಿಕೊಂಡು ಮಹಿಳಾ ಜಾಗೃತಿಗೂ ರೈತ ಸಂಘ ಕಾರಣವಾಗಿದೆ.

(ಇ) ಸಾಹಿತ್ಯದ ಮೇಲೆ ಪ್ರಭಾವ :

ಶಿವಮೊಗ್ಗ ಜಿಲ್ಲೆಯ ಸಮಾಜವಾದಿ ಚಳುವಳಿಯಿಂದ ಪ್ರಭಾವಿಸಲ್ಪಟ್ಟ ಇನ್ನೊಂದು ಪ್ರಮುಖ ಕ್ಷೇತ್ರವೆಂದರೆ ಸಾಹಿತ್ಯ ಕ್ಷೇತ್ರ. ಜಿಲ್ಲೆಯ ಸಮಾಜವಾದಿ ಚಳುವಳಿಯ ಹಿನ್ನಲೆಯಿಂದ ಬೆಳೆದ ಪ್ರಮುಖ ಸಾಹಿತಿಗಳಾದ ಡಾ: ಯು.ಆರ್.ಅನಂತಮೂರ್ತಿ, ಪಿ.ಲಂಕೇಶ್, ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಮುಂತಾದವರ ಬರವಣಿಗೆಯಲ್ಲಿ ಸಮಾಜವಾದಿ ಧೋರಣೆಯನ್ನು ನೋಡಬಹುದು. ಇವರೆಲ್ಲರೂ ಲೋಹಿಯಾ ಮತ್ತು ಶಾಂತವೇರಿ ಗೋಪಾಲಗೌಡರ ಪ್ರಭಾವಕ್ಕೊಳಗಾದವರು. ಅನಂತಮೂರ್ತಿಯವರು ಕಾಗೋಡು ಸತ್ಯಾಗ್ರಹದ ಸಂದರ್ಭದಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ತೇಜಸ್ವಿ ಸಮಾಜವಾದಿ ಯುವಜನ ಸಭಾದ ಸ್ಥಾಪಕ ಸದಸ್ಯರಲ್ಲೊಬ್ಬರಾಗಿದ್ದರು.

ಅನಂತಮೂರ್ತಿಯವರು ಬರೆದಿರುವ 'ಅವಸ್ಥೆ' ಕಾದಂಬರಿ ಗೋಪಾಲಗೌಡರ ಜೀವನ ಚರಿತ್ರೆಯನ್ನಾಧರಿಸಿದುದು. ಗೋಪಾಲಗೌಡರ ವ್ಯಕ್ತಿತ್ವದ ಹಿನ್ನಲೆಯಲ್ಲಿ ಒಟ್ಟಾರೆ ಸಮಾಜದ ಪರಿಸ್ಥಿತಿಯನ್ನು ಹೊಸದೃಷ್ಟಿಕೋನದಲ್ಲಿ ವಿವರಿಸಿದ್ದಾರೆ. ಇವರ ಇನ್ನೊಂದು ಕಾದಂಬರಿ 'ಸಂಸ್ಕಾರ' ದಲ್ಲಿ ಜಾತಿ ವ್ಯವಸ್ಥೆಯ ಭೀಕರತೆಯನ್ನು ಚರ್ಚಿಸಲಾಗಿದೆ. ಇವರ ಬಿಡಿ ಬರಹಗಳು ಹೆಚ್ಚಾಗಿ ಲೋಹಿಯಾ ವಿಚಾರ ಧಾರೆಯಿಂದ ಪ್ರಭಾವಿತವಾಗಿವೆ. ಆದರೆ ಇವರ ಇತ್ತೀಚಿನ ಬರವಣಿಗೆಯಲ್ಲಿ ಈ ಅಂಶ ಅಷ್ಟಾಗಿ ಕಂಡುಬರುವುದಿಲ್ಲ.

ತೇಜಸ್ವಿ ಮತ್ತು ಲಂಕೇಶರ ಬರಹಗಳಲ್ಲೂ ಮೇಲಿನ ಅಂಶಗಳನ್ನು ನೋಡಬಹುದು. ಇವರ ಬರವಣಿಗೆಗಳಲ್ಲಿ ಮುಖ್ಯವಾಗಿ ಜಾತಿವ್ಯವಸ್ಥೆ, ಜಮೀನ್ದಾರಿ ವ್ಯವಸ್ಥೆಗಳನ್ನು ವಿರೋಧಿಸುವ ಧೋರಣೆಗಳಿವೆ. ಇಂದಿನ ಪ್ರಗತಿಶೀಲ, ದಲಿತ, ಬಂಡಾಯ ಸಾಹಿತ್ಯ ಪ್ರಕಾರಗಳ ಮೇಲೆ ಕೂಡ ಲೋಹಿಯಾ, ಜಯಪ್ರಕಾಶ ನಾರಾಯಣ್, ಗೋಪಾಲಗೌಡರ ವಿಚಾರಧಾರೆಗಳ ಪ್ರಭಾವವಾಗಿದೆ.

ಸಮಾಜವಾದಿ ಚಳುವಳಿಯ ಪ್ರಭಾವವನ್ನು ನಾವು ಇತರ ಕ್ಷೇತ್ರಗಳಲ್ಲೂ ನೋಡಬಹುದು. ಮುಖ್ಯವಾಗಿ ಸಮಾಜಿಕ ಕ್ಷೇತ್ರದಲ್ಲಿ ಜಾತಿ ಮತ್ತು ಧರ್ಮಗಳ ಹೆಸರಿನಲ್ಲಿ ನಡೆಯುವ ಶೋಷಣೆಯನ್ನು ಸಮಾಜವಾದಿಗಳು ತಮ್ಮ ಹೋರಾಟದುದ್ದಕ್ಕೂ ವಿರೋಧಿಸುತ್ತ ಬಂದರು. ಆದರೆ ಶತಶತಮಾನಗಳಿಂದ ಮುಂದುವರಿದುಕೊಂಡು ಜಡವಾಗಿರುವ ಈ ವ್ಯವಸ್ಥೆಯನ್ನು ಸಂಪೂರ್ಣನಾಶಮಾಡುವುದು ಅಷ್ಟು ಸುಲಭವಲ್ಲವಾದರೂ ಈ ಹೋರಾಟದ ಫಲವಾಗಿ ಸಮಾಜದಲ್ಲಿ ತುಳಿದಿಡಲ್ಪಟ್ಟವರು ತಮಗಾಗಿರುವ ಅನ್ಯಾಯವನ್ನು ಪ್ರತಿಭಟಿಸುವ ಮಟ್ಟಿಗಾದರೂ ಬೆಳೆದದ್ದು ಇಂತಹ ಹೋರಾಟಗಳಿಂದ ಎಂದರೆ ತಪ್ಪಾಗಲಾರದು.

[illegible]

ಅಧ್ಯಾಯ : 9

ಸಮಾರೋಪ

9. ಸಮಾರೋಪ

ಸ್ವಾತಂತ್ರ್ಯ ಆಂದೋಲನದ ಜೊತೆ ಜೊತೆಗೆ ಹೊಸ ಅಲೆಯಾಗಿ ಪ್ರವರ್ಧಮಾನಕ್ಕೆ ಬಂದ ಸಮಾಜವಾದಿ ಚಳುವಳಿ ಜಿಲ್ಲೆಯ ಜನಜೀವನದ ಮೇಲೆ ತನ್ನದೇ ಆದ ಪ್ರಭಾವ ಬೀರಿ ಕಾಲದ ಸುಳಿಗೆ ಸಿಕ್ಕು ಅವನತಿಯನ್ನು ಹೊಂದಿದ್ದು ಈಗ ಚರಿತ್ರೆ.

ಸಮಾಜವಾದಿ ಪಕ್ಷ ಸಾಧಕ-ಬಾಧಕಗಳೆರಡನ್ನೂ ತನ್ನ ಒಡಲಲ್ಲಿ ಇಟ್ಟುಕೊಂಡು ಬೆಳೆಯಿತು. ಕಾಗೋಡು ಸತ್ಯಾಗ್ರಹದಂತಹ ಐತಿಹಾಸಿಕ ಹೋರಾಟ ನಡೆಸಿ ಭದ್ರನೆಲೆಯನ್ನು ಕಂಡುಕೊಳ್ಳುವ ಮೂಲಕ ಶಿವಮೊಗ್ಗ ಜಿಲ್ಲೆ ರಾಷ್ಟ್ರದ ಗಮನವನ್ನು ಸೆಳೆಯಿತು. ಅದನ್ನು ಉಳಿಸಿ ಬೆಳೆಸುವಲ್ಲಿ ವಿಫಲಗೊಳ್ಳುತ್ತಾ ಹೋಯಿತು. ಇದಕ್ಕೆ ಕಾರಣಗಳು ಹಲವಾರು. ಸತ್ಯಾಗ್ರಹದ ನಂತರ ಮುಂದಾಳುಗಳು ಮುಂದಿನ ಕ್ರಮದ ಬಗ್ಗೆ ಯೋಚಿಸಲಿಲ್ಲ. ಜೊತೆಗೆ ನಿಜವಾಗಿ ಹೋರಾಟ ನಡೆಸಬೇಕಾದ ಗ್ರಾಮೀಣ ಬಡಜನರನ್ನು ಹೋರಾಟಕ್ಕೆ ಅಣಿಗೊಳಿಸುವ ತರಬೇತಿಯನ್ನು ನೀಡುವತ್ತ ಗಮನಹರಿಸಿದಂತೆ ಕಂಡುಬಂದಿಲ್ಲ. ಸತ್ಯಾಗ್ರಹದ ವೇಳೆಯಲ್ಲಿ ಕೃಷಿ ಕಾರ್ಮಿಕರ ಸಮಸ್ಯೆಗೆ ಪಕ್ಷ ಅಷ್ಟಾಗಿ ಗಮನಹರಿಸಿದಂತೆ ಕಂಡುಬಂದಿಲ್ಲ. ಇದಕ್ಕೆ ಸತ್ಯಾಗ್ರಹ ನಡೆಯುತ್ತಿದ್ದ ಸನ್ನಿವೇಶವೂ ಕಾರಣವಾಗಿರಬಹುದು.

ಕಾಗೋಡು ಸತ್ಯಾಗ್ರಹದ ನಂತರದ ಹೋರಾಟಗಳು ಸಹಾ ಬಹಳ ಮುಖ್ಯವಾದವುಗಳೇ. ಇದರಿಂದ ಜಿಲ್ಲೆಯಲ್ಲೇನೋ ಪಕ್ಷ ಭದ್ರವಾಯಿತು. ಆದರೆ ರಾಜ್ಯಮಟ್ಟಕ್ಕೆ ಅದನ್ನು ವಿಸ್ತರಿಸುವಲ್ಲಿ ಪಕ್ಷ ವಿಫಲವಾಯಿತು. ಗೋಪಾಲಗೌಡರು ರಾಜ್ಯ ಹಾಗೂ ರಾಷ್ಟ್ರ ಮಟ್ಟದ ರಾಜಕಾರಣದತ್ತ ಗಮನಕೊಡಲಾರಂಭಿಸಿದ ನಂತರ ಜಿಲ್ಲೆಯಲ್ಲಿ ಹೋರಾಟಗಳನ್ನು ಸಂಘಟಿಸುವ ನಾಯಕರ ಕೊರತೆ ಎದ್ದುಕಾಣಿಸುತ್ತಿತ್ತು. ರಾಷ್ಟ್ರಮಟ್ಟದಲ್ಲಿ ಪಕ್ಷದಲ್ಲಿ

[illegible]

[illegible]

[illegible]

[illegible]

ಒಡಕುಂಟಾದರೂ ಜಿಲ್ಲೆಯಲ್ಲಿ ಹೀಗಾಗದಂತೆ ನೋಡಿಕೊಂಡಿದ್ದ ಗೋಪಾಲಗೌಡರು 1971 ರಲ್ಲಿ ಮರಣ ಹೊಂದಿದ ನಂತರ, ಪಕ್ಷದ ಪ್ರಮುಖರೆಲ್ಲ ಕಾಂಗ್ರೆಸ್ಸಿಗೆ ಪಲಾಯನ ಮಾಡಿದರು.

ಇಲ್ಲಿ ಇನ್ನೊಂದು ವಿಷಯವನ್ನು ಗಮನಿಸುವುದು ಅವಶ್ಯ. ಜಿಲ್ಲೆಯ ಸಮಾಜವಾದಿಗಳು ಗೋಪಾಲಗೌಡರೊಬ್ಬರನ್ನೇ ಅವಲಂಬಿಸಿಕೊಂಡಿದ್ದಂತೆ ಕಂಡುಬರುತ್ತದೆ. ವ್ಯಕ್ತಿನಿಷ್ಠ ಅಂಶಗಳು ಹೆಚ್ಚಾದಾಗ ಪರ್ಯಾಯ ನಾಯಕತ್ವಕ್ಕೆ ಬೆಲೆ ಇರಲಾರದು. ಇದು ಚಾರಿತ್ರಿಕ ಸತ್ಯ. ಹೀಗಾಗಿ ಗೋಪಾಲಗೌಡರು ಮರಣ ಹೊಂದಿದ ನಂತರ ಪಕ್ಷ ಛಿದ್ರವಾಗುತ್ತಾ ಹೋಯಿತು. ಬಂಗಾರಪ್ಪ, ಕಾಗೋಡು ತಿಮ್ಮಪ್ಪ, ಕೊಣಂದೂರು ಲಿಂಗಪ್ಪ ಮುಂತಾದವರು ಕಾಂಗ್ರೆಸ್ ಪಕ್ಷ ಸೇರಿದರು. ಎ.ವಿ.ಶ್ರೀನಿವಾಸ, ಕೆ. ಶಂಕರನಾರಾಯಣ ಭಟ್, ಟಿ.ಎಸ್.ಪೊನ್ನಮ್ಮಾಳ್ ಮುಂತಾದವರು ರಾಜಕೀಯದಿಂದ ದೂರವಾದರು. ಯುವಪೀಳಿಗೆಯವರಾಗಿದ್ದ ಪೂರ್ಣಚಂದ್ರ ತೇಜಸ್ವಿ, ಎನ್.ಡಿ. ಸುಂದರೇಶ್, ಕಡಿದಾಳ ಶಾಮಣ್ಣ ಮುಂತಾದವರು ಸೇರಿ ಸಮಾಜವಾದಿ ಯುವಜನ ಸಭಾ ಎಂಬ ಸಂಘಟನೆಯನ್ನು ಕಟ್ಟಿ ಸಮಾಜವಾದಿ ಪಕ್ಷಕ್ಕೆ ಪರ್ಯಾಯವಾಗಿ ನಿಂತರು. ಆದರೆ ಈ ಸಂಘಟನೆ ಕೂಡ ಹೆಚ್ಚುಕಾಲ ಬಾಳಲಿಲ್ಲ. ಇನ್ನುಳಿದಂತೆ ಜೆ.ಎಚ್.ಪಟೇಲರಾದಿಯಾಗಿ ಜನತಾ ಪಕ್ಷದಲ್ಲಿ ವಿಲೀನವಾದರು.

ಜೊತೆಗೆ ದೇವರಾಜ ಅರಸು ಸರ್ಕಾರ 1974 ರಲ್ಲಿ ತಂದ ಭೂ ಸುಧಾರಣೆ ಸಮಾಜವಾದಿ ಪಕ್ಷಕ್ಕಿದ್ದ ಜನಬೆಂಬಲವನ್ನು ಕಾಂಗ್ರೆಸ್ಸಿನತ್ತ ತಿರುಗಿಸಿತು. ಇದಕ್ಕೆ ಮುಖಂಡರುಗಳ ಪಕ್ಷಾಂತರವೂ ಕಾರಣವಿರಬಹುದು. ನಂತರ 1975 ರಲ್ಲಿ ಘೋಷಿತವಾದ ತುರ್ತುಪರಿಸ್ಥಿತಿ ಮತ್ತು ನಂತರದ ವಿದ್ಯಮಾನಗಳು ಸಮಾಜವಾದಿಗಳ ಅಸ್ತಿತ್ವವನ್ನು ಸಂಪೂರ್ಣವಾಗಿ ಅಳಿಸಿ ಹಾಕಿದವು.


ಇಷ್ಟೆಲ್ಲ ತೊಡಕುಗಳ ನಡುವೆಯೂ ಸೋಷಲಿಸ್ಟ ಪಕ್ಷ ಜಿಲ್ಲೆಯಲ್ಲಿ ತನ್ನದೇ ಕುರುಹನ್ನು ಬಿಟ್ಟು ಹೋಗಿದೆ. 40 – 50ರ ದಶಕಕ್ಕೆ ಹೋಲಿಸಿದರೆ ಗೇಣಿ ವ್ಯವಸ್ಥೆ ಇಲ್ಲ ಎನ್ನುವಷ್ಟು ಕಡಿಮೆಯಾಗಿದೆ. ಭೂ ಸುಧಾರಣೆ ಮತ್ತು ಅದರ ಯಶಸ್ಸಿನ ಬಗ್ಗೆ ಎರಡು ಮಾತಿಲ್ಲ. ಚುನಾವಣೆಗಳಲ್ಲೂ ಪಕ್ಷ ಹಿಂದೆ ಬಿದ್ದಿಲ್ಲ. 1967 ಮತ್ತು 1972ರ ವಿಧಾನ ಸಭಾ ಚುನಾವಣೆಗಳಲ್ಲಿ ಸ್ಪಷ್ಟ ಮೇಲುಗೈ ಸಾಧಿಸಿತ್ತು. ರೈತ ಚಳುವಳಿಯ ಪರಂಪರೆಯನ್ನೇ ಹಾಕಿಕೊಟ್ಟಿದ್ದ ಸೋಷಲಿಸ್ಟ ಪಕ್ಷದ ಪ್ರಭಾವದಿಂದಾಗಿ ಇಂದು ರೈತ ಚಳುವಳಿ ಜಿಲ್ಲೆಯಲ್ಲಿ ಪ್ರಬಲವಾಗಿರುವುದನ್ನು ನೋಡಬಹುದು.

ತಮ್ಮ ಪರಿಮಿತಿಯಲ್ಲೇ ಜಮೀನ್ದಾರಿ ವ್ಯವಸ್ಥೆ, ಜಾತಿವ್ಯವಸ್ಥೆ, ಕೋಮುವಾದ ಮುಂತಾದ ಅನಿಷ್ಟ ಪದ್ಧತಿಗಳನ್ನು ಧಿಕ್ಕರಿಸಿ ಆದರ್ಶ ವ್ಯವಸ್ಥೆಯೊಂದರ ಕನಸು ಕಂಡ ಸಮಾಜವಾದಿ ಚಳುವಳಿ ಪ್ರಸ್ತುತ ಸನ್ನಿವೇಶಕ್ಕೆ ಮಾರ್ಗದರ್ಶನವಾಗಬಹುದು.

—0000—



ಸಮಾಜವಾದಿಗಳ ಸಹಚಿಂತನ.......ಗೋಪಾಲಗೌಡ ರಾಮಮನೋಹರ ಲೋಹಿಯಾ



ಸಮಾಜವಾದಿ ಸಮ್ಮೇಳನಗಳಲ್ಲಿ……





ಲೋಹಿಯಾ ಅವರು ಕಡೆಯ ದಿನಗಳಲ್ಲಿ ಶಿವಮೊಗ್ಗಕ್ಕೆ ಬಂದಾಗ........

ಗ್ರಂಥಋಣ

ಗ್ರಂಥಋಣ

1.ಕನ್ನಡ

1. ಆಚಾರ್ಯ ನರೇಂದ್ರದೇವ (ಅನು) ಸುಬ್ರಹ್ಮಣ್ಯ ವೈ.ಎಸ್. 1982, *ಆಚಾರ್ಯ ನರೇಂದ್ರದೇವ* ಬೆಂಗಳೂರು : ಜನ ಪ್ರಕಾಶನ

2. ನಂಬೂದಿರಿಪಾಡ್ ಇ.ಎಂ.ಎಸ್. 1983, *ಸಮಾಜವಾದಕ್ಕೆ ಭಾರತದ ದಾರಿ*, ಮೈಸೂರು: ಭಾರತೀ ಪ್ರಕಾಶನ

3. ನಾಗೇಶ್.ಹೆಚ್.ವಿ. ಮತ್ತು ಪುನೀತ್.ಎ.ಇ., 1984, *ಭಾರತದಲ್ಲಿ ರೈತ ಹೋರಾಟಗಳು.*, ಧಾರವಾಡ: ಚಂದ್ರನಾಥ ಪ್ರಕಾಶನ

4. ನಾಗರಾಜ.ಡಿ.ಆರ್. ಮತ್ತು ನಾಗರಾಜ.ಕಿ.ರಂ., 1989, *ಸಮಾಜವಾದಿ ಆಚಾರ್ಯ*, ಬೆಂಗಳೂರು: ಭಾರತ ಯಾತ್ರಾ ಕೇಂದ್ರ

5. ನಿಜಲಿಂಗಪ್ಪ.ಬಿ., 1976, *ಕಮ್ಯುನಿಸ್ಟ್ ಮ್ಯಾನಿಫೆಸ್ಟೋ*, ಕೊಟ್ಟೂರು

6. ಪಾಲ್ ಸ್ವೀಜಿ ಮತ್ತು ಹ್ಯೂಬರ್‌ಮನ್(ಅನು) ಗೋಪಾಲಕೃಷ್ಣಯ್ಯ.ಕೆ.ಎಸ್. 1983, *ಸಮಾಜವಾದ ಪರಿಚಯ*, ಬೆಂಗಳೂರು: ಪ್ರಸಾರಾಂಗ, ಬೆಂಗಳೂರು.ವಿ.ವಿ

7. ಪುಟ್ಟಣ್ಣ.ವೈ.ಎಸ್., 1991, *ನಾನು ಕಂಡ ಮಲನಾಡು*, ಬೆಂಗಳೂರು: ಚಂದ ಪ್ರಿಂಟರ್ಸ್

8. ಬಾಪು ಹೆದ್ದೂರ್ ಶೆಟ್ಟಿ, 1989, *ಸಮಾಜವಾದ ಜನತಂತ್ರ ಮತ್ತು ಕಮ್ಯುನಿಸಂ*, ಸಾಗರ: ಅಕ್ಷರ ಪ್ರಕಾಶನ

9. ಬಾಪು ಹೆದ್ದೂರ್ ಶೆಟ್ಟಿ ಮತ್ತು ಹನುಮಂತ, 1979, *ಭಾರತೀಯ ಸಮಾಜವಾದದ ಹೆಜ್ಜೆ ಗುರುತುಗಳು*, ಬೆಂಗಳೂರು: ಜನ ಪ್ರಕಾಶನ

10. ರಾಜನ್.ಎಂ.ಎ.ಎಸ್., 1987, ಕರ್ನಾಟಕದಲ್ಲಿ ಭೂ-ಸುಧಾರಣೆ, ಬೆಂಗಳೂರು: ಐ.ಬಿ.ಹೆಚ್. ಪ್ರಕಾಶನ

11. ರಾಜಶೇಖರ್.ಜಿ., 1980, ಕಾಗೋಡು ಸತ್ಯಾಗ್ರಹ, ಸಾಗರ: ಅಕ್ಷರ ಪ್ರಕಾಶನ

12. ರೆಡ್ಡಿ.ಸಿ.ಜೆ.ಕೆ(ಅನು) ಖಾದ್ರಿ ಶಾಮಣ್ಣ, 1988, ಬರೋಡ ಡೈನಮೈಟ್ ಸಂಚು ಬಂಡಾಯಕ್ಕೆ ಹಕ್ಕು, ಬೆಂಗಳೂರು, ಬಾಪ್ಕೋ ಪ್ರಕಾಶನ

13. ರಾಮಶರ್ಮ ಬಸವಾನಿ ಮತ್ತು ಶಂಕರನಾರಾಯಣರಾವ್.ಟಿ.ಡಿ.(ಸಂ), 1992, ಶಿವಮೊಗ್ಗ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರ ನೆನಪುಗಳು, ಶಿವಮೊಗ್ಗ: ಶಿವಮೊಗ್ಗ ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರ ಸಂಘ.(ರಿ)

14. ಲಿಂಗಪ್ಪ,ಕೋಣಂದೂರು(ಸಂ), 1987, ಶಾಸನ ಸಭೆಯಲ್ಲಿ ಶಾಂತವೇರಿ, ಬೆಂಗಳೂರು: ಜಾನಪದ ಅಕಾಡೆಮಿ

15. ವಿಷ್ಣುಮೂರ್ತಿ.ಹೆಚ್.ಸಿ., 1982, ಗೋಪಾಲಗೌಡ ಶಾಂತವೇರಿ, ಮೈಸೂರು: ಅನನ್ಯ ಪ್ರಕಾಶನ

16. ———,,———, 1982, ಗೋಪಾಲಗೌಡರ ಡೈರಿ ಪತ್ರಗಳು ಇತ್ಯಾದಿ, ಮೈಸೂರು: ಅನನ್ಯ ಪ್ರಕಾಶನ

17. ವೆಂಕಪ್ಪಗೌಡ ಕೋಣಂದೂರು(ಸಂ), 1981, ಜೀವಂತ ಜ್ವಾಲೆ, ಬೆಂಗಳೂರು: ಯಶಸ್ವೀ ಪ್ರಕಾಶನ

18. ಶಂಕರ ನಾರಾಯಣ ರಾವ್.ಎನ್.ಪಿ., 1991, ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು, ಬೆಂಗಳೂರು: ನವಕರ್ನಾಟಕ ಪ್ರಕಾಶನ

19. ಸೂರ್ಯನಾಥ ಕಾಮತ್ ಮತ್ತು ಲಕ್ಷ್ಮಣ್ ತೆಲಗಾವಿ(ಸಂ), 1990, ಇತಿಹಾಸ ದರ್ಶನ, ಬೆಂಗಳೂರು: ಕರ್ನಾಟಕ ಇತಿಹಾಸ ಅಕಾಡೆಮಿ

20. ಹನುಮಂತ(ಸಂ), 1981, ಸಮಾಜವಾದ, ಬೆಂಗಳೂರು: ಜನ ಪ್ರಕಾಶನ

21. ——,,—— (ಸಂ), 1991, ಸಮಾಜವಾದದೆಡೆಗೆ, ಬೆಂಗಳೂರು: ಜನ ಪ್ರಕಾಶನ

2. ನಿಯತಕಾಲಿಕೆಗಳು

1. ಸೀತಾರಾಮ ಅಯ್ಯಂಗಾರ್ ಎನ್.ಕೆ (ಸಂ), 1956 ಜೂನ್ 16, ಪ್ರಳಯ, ಶಿವಮೊಗ್ಗ

2. ——,,—— (ಸಂ), 1956 ನವೆಂಬರ್ 26, ಜಾಗೃತಿ, ಶಿವಮೊಗ್ಗ

3. — , 1956 ಜುಲೈ 19, ತಾಯಿನಾಡು

4. ಚಂದ್ರಶೇಖರ ಪಾಟೀಲ್(ಸಂ), 1980, ಸಂಕ್ರಮಣ, ಸಂಚಿಕೆ: 6–7, ಧಾರವಾಡ, ಸಂಕ್ರಮಣ ಪ್ರಕಾಶನ

5. ——,,—— (ಸಂ), 1981, ಸಂಕ್ರಮಣ, ಸಂಚಿಕೆ: 12, ಧಾರವಾಡ, ಸಂಕ್ರಮಣ ಪ್ರಕಾಶನ

6. ಶೂದ್ರ ಶ್ರೀನಿವಾಸ(ಸಂ), 1982, ಶೂದ್ರ, ಸಂಚಿಕೆ: 11,

7. ——,,—— (ಸಂ), 1980, ಶೂದ್ರ, ಸಂಚಿಕೆ: 5–6,

8. ——,,—— (ಸಂ), 1979, ಶೂದ್ರ, ಸಂಚಿಕೆ: 8–9

9. ನಂಜುಂಡಸ್ವಾಮಿ ಎಂ.ಡಿ.(ಸಂ), 1968, ಮಾನವ, ಸಂಚಿಕೆ: 6–7, ಮೈಸೂರು

10. ——,,—— (ಸಂ), 1969, ಮಾನವ, ಸಂಚಿಕೆ: 5–6, ಮೈಸೂರು

11. ——,,—— (ಸಂ), 1970, ಮಾನವ, ಸಂಚಿಕೆ: 7–8, ಮೈಸೂರು

12. ಅರಿವು ಬರಹ ಟ್ರಸ್ಟ್(ಸಂ), 1991, ಅರಿವು ಬರಹ, ಸಂಚಿಕೆ: 1, ಮಂಗಳ ಗಂಗೋತ್ರಿ

13. ——,,—— (ಸಂ), 1992, ಅರಿವು ಬರಹ, ಸಂಚಿಕೆ: 2, ಮಂಗಳ ಗಂಗೋತ್ರಿ

14. ಮೋಹನ ರಾಜ (ಸಂ), 1995, ಕ್ರಾಂತಿ ದೀಪ, ಸಂಚಿಕೆ: 236, ಶಿವಮೊಗ್ಗ

3. ENGLISH

1. ABHISHANKAR K. (ED) : 1975, KARNATAKA STATE GAZZETTEER-SHIMOGA DISTRICT, BANGALORE: GOVERNMENT PRESS

4. JOURNALS

1. SOCIALIST PARTY(ED), 1956, NATIONAL COMMITTEE RESOLUTION HYDERABAD: SOCIALIST PARTY CENTRAL OFFICE
2. SOCIALIST PARTY(ED), 1956, INTERNATIONALISM AND SOCIALISM IN ASIA, BOMBAY: SOCIALIST PARTY